ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 30 ಬುಧವಾರ 2025

46

ಸಂಪುಟ: 46 | ಸಂಚಿಕೆ: 104 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರಲ್ಲಿ ಮುಂಬೈ ಪೊಲೀಸರ ಕಾರ್ಯಾಚರಣೆ ವೇಳೆ ಸಿಕ್ಕಿದ್ದು

ಬರೋಬ್ಬರಿ 390 ಕೋಟಿ ಮೌಲ್ಯದ ಡ್ರಗ್ಸ್

- ಮುಂಬೈನ ಡಿಸಿಪಿ ದತ್ತ ನಲವಾಡೆ ಮಾಹಿತಿ
- 192 ಕೆ.ಜಿ. ಡ್ರಗ್ಸ್, ನಾನಾ ಕಚ್ಚಾವಸ್ತು ವಶಕ್ಕೆ
- ಡ್ರಗ್ಸ್ ತಯಾರಿಕೆಗೆ ಬಳಸಿದ್ದ ವಸ್ತುಗಳು ಪತ್ತೆ
- ಸ್ಥಳೀಯ ಡ್ರಗ್ಸ್ ಜಾಲದಲ್ಲಿದ್ದ ನಾಲ್ವರ ಬಂಧನ

ಮೈಸೂರು, ಜು.29(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಮೈಸೂರು ನಗರ ಪೊಲೀಸರ ಸಹಕಾರದೊಂದಿಗೆ ಮುಂಬೈ ಪೊಲೀಸರು ಕಾರ್ಯಾಚರಣೆ ನಡೆಸಿ ಬೃಹತ್ ಡ್ರಗ್ಸ್ ತಯಾರಿಕಾ ಜಾಲವನ್ನು ಭೇದಿಸಿ ಸುಮಾರು 390 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.



ದತ್ತ ನಾಲವಡೆ

ಇದು ಕರ್ನಾಟಕದಲ್ಲಿ ನಡೆದ ಮೊದಲ ಬಹುದೊಡ್ಡ ಡ್ರಗ್ಸ್ ವಿರೋಧಿ ಕಾರ್ಯಾಚರಣೆಯಾಗಿದೆ.

ಇದರೊಂದಿಗೆ ಮೈಸೂರಿನೊಂದಿಗೆ ದೇಶದ ಡ್ರಗ್ಸ್ ಜಾಲದ ನಂಟಿತ್ತು ಎಂಬುದು ಬಟಾಬಯಲಾಗಿದೆ. ಇಲ್ಲಿಂದಲೇ ದೇಶಾದ್ಯಂತ ಡ್ರಗ್ಸ್ ಸರಬರಾಜಾಗುತ್ತಿರುವುದು ಖಚಿತವಾಗಿದೆ.

ಮೈಸೂರಿನ ಬೆಲವತ್ತ ಬಳಿ, ರಿಂಗ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿನ ಶೆಡ್ ಮೇಲೆ ಜುಲೈ 26ರಂದು ಪೊಲೀಸರು ದಾಳಿ ಮಾಡಿದರು. ಮೇಲ್ನೋಟಕ್ಕೆ ಕಾರ್ ಗ್ಯಾರೇಜ್‌ನಂತೆ ಕಾಣಿಸಿದರೂ ಒಳಗೆ ಭಾರಿ ಪ್ರಮಾಣದ ಡ್ರಗ್ಸ್ ತಯಾರಿಸಲಾಗುತ್ತಿತ್ತು. ದಾಳಿ ವೇಳೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ 390 ಕೋಟಿ ಬೆಲೆ ಬಾಳುವ ಮೆಫೆ ಡ್ರೋನ್ ಡ್ರಗ್ಸ್ ಪತ್ತೆಯಾಗಿದೆ. ಇದು ಎಂಡಿಎಂಎ ಡ್ರಗ್ಸ್ ಗುಣಲಕ್ಷಣ ಹೋಲುತ್ತದೆ ಎನ್ನಲಾಗಿದೆ.

ಕಳೆದ ಏಪ್ರಿಲ್‌ನಲ್ಲಿ ಪಶ್ಚಿಮ ಮುಂಬೈನ ಬೈನಾ ಸಾಕಿನಾಕಾದಲ್ಲಿ ಡ್ರಗ್ಸ್ ಪೆಡ್ಲರ್ ಒಬ್ಬನನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. ಡ್ರಗ್ಸ್ ಮಾರಾಟದ ಹಳೇ ಆರೋಪಿಯಾದ ಆತನಿಂದ 52 ಗ್ರಾಂ ಮೆಫೆಡ್ರೋನ್ ಡ್ರಗ್ಸ್ ವಶಪಡಿಸಿಕೊಂಡು ಡ್ರಗ್ಸ್ ಜಾಲ ಭೇದಿಸಲು ಆತನನ್ನು ತೀವ್ರ ವಿಚಾರಣೆಗೊಳಪಡಿಸಿದ್ದರು.

ಆತ ನೀಡಿದ ಸುಳಿವು ಆಧರಿಸಿ ಪೊಲೀಸರು ಮತ್ತೆ ಮೂವರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿ ಅವರಿಂದ 8 ಕೋಟಿ ರೂ. ಮೌಲ್ಯದ 4.53 ಕಿಲೋಗ್ರಾಂ ಮೆಫೆಡ್ರೋನ್ ಡ್ರಗ್ಸ್ ವಶಪಡಿಸಿಕೊಳ್ಳಲಾಗಿತ್ತು.

ಡ್ರಗ್ಸ್ ಜಾಲ ಭೇದಿಸುತ್ತಿದ್ದಂತೆ ಮುಂಬೈನಲ್ಲಿ ಡ್ರಗ್ಸ್ ಪೆಡ್ಲರ್‌ಗಳ ದೊಡ್ಡ ಜಾಲವೇ ಇರುವುದು ಪೊಲೀಸರಿಗೆ ಮನದಟ್ಟಾಯಿತು. ಬಂಧಿತ ನಾಲ್ವರು ಡ್ರಗ್ಸ್ ಪೆಡ್ಲರ್‌ಗಳನ್ನು ತೀವ್ರ ವಿಚಾರಣೆಗೊಳಪಡಿಸಿ, ಡ್ರಗ್ಸ್ ಜಾಲದ ಸಮಗ್ರ ಮಾಹಿತಿ ಕಲೆ ಹಾಕಿದ್ದರು. ಈ ಮಾಹಿತಿ ಆಧರಿಸಿದ ▶ 6ನೇ ಪುಟಕ್ಕೆ



ಮೈಸೂರಿನ ಬೆಲವತ್ತ ಬಳಿ ರಿಂಗ್ ರಸ್ತೆಯ ಶೆಡ್ ಮೇಲೆ ದಾಳಿ ಮಾಡಿದ ವೇಳೆ ವಶಪಡಿಸಿಕೊಂಡ 390 ಕೋಟಿ ಮೌಲ್ಯದ ಡ್ರಗ್ಸ್ ಹಾಗೂ ಇತರ ಪದಾರ್ಥಗಳು. ಕೆಳಚಿತ್ರದಲ್ಲಿ ಮೈಸೂರಿನಲ್ಲಿ ಡ್ರಗ್ಸ್ ತಯಾರಿಸುತ್ತಿದ್ದ ಪ್ರಕರಣದಲ್ಲಿ ಮುಂಬೈ ಪೊಲೀಸರು ನಾಲ್ವರು ಆರೋಪಿಗಳ ಬಂಧಿಸಿದ್ದಾರೆ.



ದೇಶದ ಡ್ರಗ್ಸ್ ಜಾಲದೊಂದಿಗೆ ಮೈಸೂರು ನಂಟು

ಮೈಸೂರಿನಲ್ಲಿ ತಯಾರಾಗುತ್ತಿದ್ದ ಡ್ರಗ್ಸ್‌ನ್ನು ಬೆಂಗಳೂರು, ಮಹಾರಾಷ್ಟ್ರ, ಗುಜರಾತ್ ಸೇರಿದಂತೆ ದೇಶದ ವಿವಿಧೆಡೆ ಸರಬರಾಜು ಮಾಡಲಾಗುತ್ತಿತ್ತು ಎಂಬುದನ್ನು ಮುಂಬೈ ಪೊಲೀಸರು ಬಹಿರಂಗಪಡಿಸಿದ್ದಾರೆ. ಹಲವು ರೀತಿಯ ರಾಸಾಯನಿಕಗಳನ್ನು ಬಳಸಿ ಮೈಸೂರಿನಲ್ಲಿ ಎಂಡಿಎಂಎ ಮತ್ತು ಕೋಕೇನ್ ಮಾದರಿಯ ಡ್ರಗ್ಸ್ ತಯಾರಿಸಲಾಗುತ್ತಿತ್ತು. ಈ ದಂಧೆ ಹಲವು ವರ್ಷಗಳಿಂದ ನಡೆಯುತ್ತಿದ್ದರೂ ಸ್ಥಳೀಯ ಪೊಲೀಸರ ಗಮನಕ್ಕೆ ಬಾರದೇ ಇರುವುದು ಅತ್ಯಂತ ಅಚ್ಚರಿಯ ಸಂಗತಿಯಾಗಿದೆ

ಮೈಸೂರಲ್ಲಿ ಡಗ್ಸ್ ಜಾಲ ; ಇಂದು ಬಿಜೆಪಿ ಪ್ರತಿಭಟನೆ

ಮೈಸೂರು, ಜು.29– ಮೈಸೂರಿನಲ್ಲಿ ಡ್ರಗ್ಸ್ ಜಾಲ ಪತ್ತೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಗೃಹ ಇಲಾಖೆ ವೈಫಲ್ಯ ಖಂಡಿಸಿ ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಜು.30ರಂದು ಬೆಳಗ್ಗೆ 11ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಮೈಸೂರು ನಗರದ ಎಲ್ಲಾ ಸ್ತರದ ಬಿಜೆಪಿಯ ಪದಾಧಿಕಾರಿಗಳು, ಯುವ ಮೋರ್ಚಾದ ಎಲ್ಲಾ ಪದಾಧಿಕಾರಿಗಳು, ಎಲ್ಲಾ ಮಂಡಲಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲೋಕಸಭಾ ಚುನಾವಣೆಯಲ್ಲಿ ಅಕ್ರಮ ಆರೋಪ

ಬೆಂಗಳೂರಲ್ಲಿ ಆ.4ಕ್ಕೆ ರಾಹುಲ್ ಪಾದಯಾತ್ರೆ

ಬೆಂಗಳೂರು, ಜು.29– ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಚುನಾವಣಾ ಆಯೋಗದ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ದೂರಿ ಆ.4ರಂದು ಬೆಂಗಳೂರಿನಲ್ಲಿ ಪಾದಯಾತ್ರೆ ನಡೆಸಲಿದ್ದಾರೆ.



ರಾಹುಲ್‌ಗಾಂಧಿ

ಮಹದೇವಪುರ ಕ್ಷೇತ್ರದಿಂದ ಮುಖ್ಯ ಚುನಾವಣಾಧಿಕಾರಿ ಕಚೇರಿಯವರೆಗೆ ಪ್ರತಿಭಟನಾ ರ್‍ಯಾಲಿ (ಪಾದಯಾತ್ರೆ) ನಡೆಯಲಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರು ಭಾಗವಹಿಸಲಿದ್ದಾರೆ.

ಕರ್ನಾಟಕದಲ್ಲೂ ಲೋಕಸಭೆ ಕ್ಷೇತ್ರವೊಂದರಲ್ಲಿ ಅಕ್ರಮ ನಡೆದಿರುವ ಬಗ್ಗೆ ದಾಖಲೆಗಳಿವೆ ಎಂದು ರಾಹುಲ್ ಗಾಂಧಿ ಗುಡುಗಿದ್ದರು. ಈಗ ಸಂಸತ್ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಹೋರಾಟಕ್ಕೆ ಮುಂದಾಗಿದ್ದಾರೆ. ಹೋರಾಟದ ಸಿದ್ಧತೆಗೆ ಎಐಸಿಸಿಯಿಂದ ಸಂದೇಶ ಬಂದಿದ್ದು, ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಬುಧವಾರ ಸಂಜೆ 4.30ಕ್ಕೆ ಕೆಪಿಸಿಸಿ ಕಚೇರಿಯಲ್ಲಿ ಪೂರ್ವಭಾವಿ ಸಭೆ ಕರೆದಿದ್ದಾರೆ.

ಪಾದಯಾತ್ರೆ, ರ್‍ಯಾಲಿ ಅಥವಾ ಪ್ರತಿಭಟನಾ ಸಭೆ ಈ ಮೂರರಲ್ಲಿ ಯಾವುದು ಸೂಕ್ತ ಎಂಬ ಬಗ್ಗೆ ಬುಧವಾರ ಸ್ಪಷ್ಟ ನಿರ್ಧಾರಕ್ಕೆ ಬರಲಾಗುತ್ತಿದೆ. ಪಾದಯಾತ್ರೆಯಿಂದ ನಗರ ಕೇಂದ್ರ ಭಾಗದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಎದುರಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಪ್ರತಿಭಟನಾ ಸಭೆ ನಡೆಸುವ ಚಿಂತನೆ ನಡೆದಿದೆ ಎನ್ನಲಾಗಿದೆ.

ಆ.1, ಸಿಎಂ ಸಿದ್ದರಾಮಯ್ಯ ದೆಹಲಿಗೆ

ಬೆಂಗಳೂರು, ಜು.29– ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆ.1ರಂದು ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಆ.1ರಂದು ಸಂಜೆ 6 ಗಂಟೆಗೆ ದೆಹಲಿಯ ಐಟಿಸಿ ಮೌರ್ಯ ಹೋಟೆಲ್‌ನಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಆಯೋಜಿಸಿರುವ 'ಬ್ರಿಡ್ಜ್ ಟು ಬೆಂಗಳೂರು' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಪಾಲ್ಗೊಳ್ಳಲಿದ್ದಾರೆ. ಆ.2ರಂದು ಬೆಳಗ್ಗೆ 9.30ಕ್ಕೆ ಎಐಸಿಸಿ ಕಾನೂನು, ಮಾಹಿತಿ ಹಕ್ಕು ವಿಭಾಗವು ವಿಜ್ಞಾನ ಭವನದಲ್ಲಿ ಆಯೋಜಿಸಿರುವ 'ಸಾಮಾಜಿಕ ನ್ಯಾಯ ; ಡಾ.ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಕೋನ' ಕುರಿತ ವಿಚಾರ ಸಂಕಿರಣದಲ್ಲಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಮತ್ತಿತರರು ಇದರಲ್ಲಿ ಭಾಗವಹಿಸಲಿದ್ದು, ಬಳಿಕ 11.30ಕ್ಕೆ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯ ಕುರಿತು ಭಾಷಣ ಮಾಡಲಿದ್ದಾರೆ.

ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಖದೀಮರ ಅಟ್ಟಹಾಸ

ಭದ್ರತಾ ಸಿಬ್ಬಂದಿ ಕಟ್ಟಿಹಾಕಿ ಲಕ್ಷಾಂತರ ಮೌಲ್ಯದ ಬೆಳ್ಳಿ ಪದಾರ್ಥ ಕಳವು

ಮೈಸೂರು, ಜು.29(ಬಿಎಲ್‌ಯು)– ಚಾವಣಿ ಮುರಿದು ಬೆಳ್ಳಿ ಪದಾರ್ಥ ತಯಾರಿಸುವ ಕೈಗಾರಿಕೆಗೆ ಪ್ರವೇಶಿಸಿದ ಖದೀಮರು, ಭದ್ರತಾ ಸಿಬ್ಬಂದಿಗಳನ್ನು ಕಟ್ಟಿಹಾಕಿ ಲಕ್ಷಾಂತರ ಮೌಲ್ಯದ ಬೆಳ್ಳಿಯನ್ನು ದೋಚಿರುವ ಘಟನೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

ಪೂಜೆ ಮನೆಯಲ್ಲಿ ಇಡುವ ಹಾಗೂ ಉಡುಗೊರೆಯಾಗಿ ನೀಡುವ ಬೆಳ್ಳಿಯ ವಿವಿಧ ಪದಾರ್ಥಗಳನ್ನು ತಯಾರಿಸುವ ಮೆಮೆಂಟೊ ಕೈಗಾರಿಕೆಯಲ್ಲಿ ಈ ಘಟನೆ ನಡೆದಿದ್ದು, ಕಾರಿನಲ್ಲಿ ಬಂದಿದ್ದ ಮೂವರು ಖದೀಮರು ಸುಮಾರು 10 ಕೆಜಿ ಬೆಳ್ಳಿ ಪದಾರ್ಥಗಳನ್ನು ಕದ್ದೊಯ್ದಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಡಿಸಿಪಿ ಸುಂದರ್ ರಾಜ್ ಅವರು, ಸೋಮವಾರ ತಡರಾತ್ರಿ 1.30ರ ವೇಳೆಗೆ ಮೂವರು ಕಟ್ಟಡದ ಚಾವಣಿ ತೆಗೆದು ಒಳಪ್ರವೇಶಿಸಿದ್ದಾರೆ. ಅಲ್ಲಿದ್ದ ಇಬ್ಬರು ಭದ್ರತಾ ಸಿಬ್ಬಂದಿಯನ್ನು ಕಟ್ಟಿಹಾಕಿ, ಕಿರುಚಿಕೊಳ್ಳದಂತೆ ಅವರ ಬಾಯಿಗೂ ಬಟ್ಟೆ ಕಟ್ಟಿ, ಬೆಳ್ಳಿ ವಸ್ತುಗಳನ್ನು ದೋಚಿ ಬೆಳಗಿನ ಜಾವ 4.30ರ ಹೊತ್ತಿಗೆ ಹೊರ ಹೋಗಿದ್ದಾರೆ. ಗೋಡೌನ್‌ನಲ್ಲಿ 350 ಕೆಜಿ ಕಚ್ಚಾ ಬೆಳ್ಳಿ ಇತ್ತು. ಸದ್ಯದ ಮಾಹಿತಿ ಪ್ರಕಾರ 10 ಕೆಜಿ ಬೆಳ್ಳಿ ಕಳ್ಳತನವಾಗಿರುವ ಬಗ್ಗೆ ಮಾಹಿತಿ ಇದೆ ಎಂದು ತಿಳಿಸಿದ್ದಾರೆ.

ಸಂಸ್ಥೆಯಲ್ಲಿ 30ಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ವಿವಿಧ ರಾಜ್ಯದವರೂ ಇದ್ದಾರೆ. ಇಲ್ಲಿಂದ ಕೆಲಸ ಬಿಟ್ಟು ಹೋದವರ ಪಟ್ಟಿ ಮಾಡಲಾಗಿದ್ದು, ಅವರುಗಳ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ▶ 6ನೇ ಪುಟಕ್ಕೆ

ಡಿಸಿಎಂ ಬಿಟ್ಟು ಸಚಿವರು, ಶಾಸಕರ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ!

■ ಕಾಂಗ್ರೆಸ್ ವಲಯದಲ್ಲಿ ಅಸಮಾಧಾನಕ್ಕೆ ಪುಷ್ಟಿ! ■ ಬೆಂಗಳೂರು ದಕ್ಷಿಣ ಜಿಲ್ಲೆಗೆ ಸಂಬಂಧಿಸಿ ಸಾಮಾನ್ಯ ಶಾಸಕರ ಪಟ್ಟಿ ಸೇರಿದ ಡಿಸಿಎಂ

ಬೆಂಗಳೂರು, ಜು.29(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಹೊರಗಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರು, ಶಾಸಕರ ಕಷ್ಟ ಸುಖಗಳನ್ನು ಆಲಿಸುವ ಕಾರ್ಯ ಆರಂಭಿಸಿದ್ದಾರೆ.

ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಪಕ್ಷದ ಶಾಸಕರ ವಿಶ್ವಾಸ ಗಳಿಸುವುದು ಒಂದೆಡೆಯಾದರೆ, ಅವರ ಕ್ಷೇತ್ರಗಳಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯ ಸೇರಿದಂತೆ ಉಳಿದ ರಾಜಕೀಯ ವಿಚಾರಗಳ ಬಗ್ಗೆ ಮಾಹಿತಿ ಪಡೆಯಲು ಈ ಸಭೆ ನಡೆಸಿದ್ದಾರೆ. ಸರ್ಕಾರದ ಯಾವುದೇ ಸಮಾರಂಭ ಮತ್ತು ಸಭೆಗಳಲ್ಲಿ ಬಹುತೇಕ ಉಪಮುಖ್ಯಮಂತ್ರಿ ಅವರನ್ನು ಜೊತೆಗಿಟ್ಟುಕೊಂಡು ಮುನ್ನಡೆಯುತ್ತಿದ್ದ ಮುಖ್ಯಮಂತ್ರಿ, ಇದೀಗ ಅವರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎನ್ನಲಾಗಿದೆ.

ಅಷ್ಟೇ ಅಲ್ಲ, ಅವರನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಸಕರಿಗೆ ಸಾಮಾನ್ಯವಾಗಿ ಆಹ್ವಾನ ನೀಡುವಂತೆ ಇವರಿಗೂ ಆಹ್ವಾನ ಹೋಗಿದೆ. ಕಾರ್ಯಕ್ರಮ ಪಟ್ಟಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಹೆಸರನ್ನು ಪ್ರಾಮುಖ್ಯತೆಯಿಂದ ನಮೂದಿಸಿ, ಶಿವಕುಮಾರ್ ಹೆಸರನ್ನು ಕೆಳಹಂತದಲ್ಲಿ ಕೇವಲ ಶಾಸಕರಂತೆ ನಮೂದಿಸಿರುವುದು ಅವರಿಗೆ ಮಾಡಿರುವ ಅಪಮಾನಕಾರಿ ಎಂದು ಪಕ್ಷದ ವಲಯದಲ್ಲಿ ಕೇಳಿಬರುತ್ತಿದೆ.

ಶಿವಕುಮಾರ್ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರೂ ಹೌದು, ಆದರೆ ಅವರ ಉಸ್ತುವಾರಿಯ ನಗರ ಶಾಸಕರ ಸಭೆಯನ್ನೇ ಮುಖ್ಯಮಂತ್ರಿ ಆಯೋಜಿಸಿಲ್ಲ.

ಸಿದ್ದರಾಮಯ್ಯ 2013ರಿಂದ 2018 ರವರೆಗೆ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಇದೇ ರೀತಿ ಪಕ್ಷದ ಶಾಸಕರ ಸಭೆಗಳನ್ನು ಹಲವು ಬಾರಿ ನಡೆಸಿದ್ದರು, ಆದರೆ, ಅಂದಿನ ಸಭೆಯಿಂದ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ. ಪರಮೇಶ್ವರ್ ಅವರನ್ನು ಬದಿಗಿರಿಸಿ ನಡೆಸಿದ್ದರು.



ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರ ಸಭೆ ನಡೆಸಿ, ಅವರ ಅಹವಾಲುಗಳನ್ನು ಆಲಿಸಿದರು.

ಸಚಿವರು ಮತ್ತು ಸರ್ಕಾರದ ವಿರುದ್ಧವೇ ಕೆಲವು ಶಾಸಕರು ಅಪಸ್ವರ ಎತ್ತಿದಾಗ ಕೆಪಿಸಿಸಿ ಶಿಫಾರಸಿನ ಮೇರೆಗೆ ಎಐಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಕಳುಹಿಸಿ ಸಚಿವರು ಮತ್ತು ಶಾಸಕರೊಂದಿಗೆ ಮುಖಾಮುಖಿ ಸಮಾಲೋಚನೆ ನಡೆಸಲಾಗಿತ್ತು. ಸುರ್ಜೇವಾಲ ಸಭೆಗೆ ಮುಖ್ಯಮಂತ್ರಿಗಾಗಲೀ, ಉಪಮುಖ್ಯಮಂತ್ರಿಗಾಗಲೀ ಆಹ್ವಾನ ನೀಡಿರಲಿಲ್ಲ, ಅದೇ ಧಾಟಿಯಲ್ಲಿ ಸಿದ್ದರಾಮಯ್ಯ ಸಭೆ ನಡೆಸಿದ್ದಾರೆ ಎಂಬುದಾಗಿ ಅವರ ಆಪ್ತರು ಹೇಳಿಕೊಳ್ಳುತ್ತಿದ್ದಾರೆ.

ಶಾಸಕರ ಸಭೆ ನಡೆಸಿದರೆ ತಪ್ಪೇನು: ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಅಧಿಕಾರ ಬಳಸಿಕೊಂಡು ಶಾಸಕರ ಸಭೆ ಮಾಡುವುದರಲ್ಲಿ ತಪ್ಪೇನಿದೆ ಎಂದಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಶಾಸಕರ ಭೇಟಿ ನಂತರ ಅನೇಕ ವಿಚಾರಗಳನ್ನು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದು, ಅಹವಾಲುಗಳ ಕುರಿತು ಸಭೆ ಮಾಡುತ್ತಿದ್ದಾರೆ, ಇದರಲ್ಲಿ ತಪ್ಪೇನು ಇಲ್ಲ. ಇದಕ್ಕೆ ನನ್ನ ಯಾವುದೇ ಆಕ್ಷೇಪ ಇಲ್ಲ. ಈ ವಿಚಾರದಲ್ಲಿ ನನಗೆ ಆಗದ ಕಷ್ಟ ನಿಮಗೇಕೆ ಎಂದು ಸುದ್ದಿಗಾರರನ್ನೇ ಪ್ರಶ್ನಿಸಿದರು.

ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ನಾವು ಪ್ರತ್ಯೇಕ ಅಜೆಂಡಾ ಹೊಂದಿದ್ದು, ಪ್ರತ್ಯೇಕ ಚರ್ಚೆ ನಡೆಸುತ್ತೇವೆ. ನಾನೂ ಒಂದಷ್ಟು ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿದ್ದೇನೆ ಎಂದರು.

ಬಿಜೆಪಿಯವರು ಮೊದಲು ಅವರ ಮನೆ ಸರಿ ಮಾಡಿಕೊಳ್ಳಲಿ, ಅವರ ಪಕ್ಷ, ಮನೆಯೇ ಅಸ್ತವ್ಯಸ್ತವಾಗಿದೆ, ಅವರ ಪಕ್ಷದ ಒಳಗೆ ಅನೇಕ ಮೇಲಾಟಗಳು ನಡೆಯುತ್ತಿವೆ. ಅವರ ನಾಯಕರ ಹೇಳಿಕೆಗಳನ್ನು ಎಲ್ಲರೂ ಗಮನಿಸಿದ್ದಾರೆ. ಅವರುಗಳ ▶ 6ನೇ ಪುಟಕ್ಕೆ

ಅಸಾಮಾನ್ಯ ಯೋಗ ಸಾಧಕ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿ



ಮೈಸೂರಿನ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಶ್ರೀ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಯವರ ಜಯಂತ್ಯುತ್ಸವ ಕಾರ್ಯಕ್ರಮ ನಡೆಯಿತು.

ಮೈಸೂರು,ಜು.29–ಜನ್ಮತಃ ರೋಗಿಷ್ಟನಾಗಿದ್ದ ಬಾಲಕ ತನ್ನ ಅಸಾಮಾನ್ಯ ಸಾಧನೆಯಿಂದ ಆರೋಗ್ಯವಂತನಾಗಿ ಯೋಗಪಟುವಾಗಿ ಜಗತ್ತಿಗೆ ಯೋಗವನ್ನು ಬೋಧಿಸಿದ ಗುರುವಾಗಿ ಬೆಳೆದರು. ಅವರೇ ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿ ಎಂದು ಖ್ಯಾತ ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಹಿಮಾಲಯ ಪ್ರತಿಷ್ಠಾನ ಆಯೋಜಿಸಿದ್ದ ಶ್ರೀ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಯವರ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯೋಗದೊಂದಿಗೆ ಆಯುರ್ವೇದದಲ್ಲೂ ಪರಿಣತಿ ಹೊಂದಿದ್ದ ಶ್ರೀ ರಾಘವೇಂದ್ರ ಸ್ವಾಮೀಜಿ ಅವರು ತಮ್ಮ ಜೋಳಿಗೆಯಿಂದ ಮಹಾಸಂಸ್ಥಾನವನ್ನೇ ಕಟ್ಟಿ ಅದನ್ನು ಸಮಾಜ ಸೇವೆಗೆ ಮುಡುಪಾಗಿಟ್ಟರು ಎಂದು ಹೇಳಿದರು.

ಯೋಗ, ಅಧ್ಯಾತ್ಮಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ ಮಲ್ಲಾಡಿಹಳ್ಳಿ ಶ್ರೀಗಳು ನೂರಾರು ವರ್ಷಗಳ ಕಾಲ ಬದುಕಿ ಸಮಾಜಕ್ಕೆ ಬೆಳಕು ನೀಡಿದ ಅಸಾಮಾನ್ಯ ಯೋಗ ಪುರುಷ ಎಂದರು.

ಪರಮಹಂಸ ಯೋಗ ಮಹಾವಿದ್ಯಾಲಯದ ಸಂಸ್ಥಾಪಕರಾದ ಶ್ರೀ ಶಿವಪ್ರಕಾಶ್ ಗುರೂಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭ ಯೋಗ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಡಾ.ಯೋಗ ಕುಮಾರ್ ಅವರಿಗೆ ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿ ಅವರಿಗೆ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಕಾರ್ಯದರ್ಶಿ ಕೆಂಪಲಿಂಗರಾಜು, ಬ್ರಹ್ಮಶ್ರೀ ನಾರಾಯಣ ಗುರು ಯೋಗಮಂದಿರದ ಯೋಗಗುರು ಬಿ.ಶಾಂತರಾಮ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಹರ್ಷವರ್ಧನ, ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಪ್ರಭುಸ್ವಾಮಿ, ಮುಕ್ತಕ ಸಾಹಿತಿ ಮುತ್ತುಸ್ವಾಮಿ, ವಕೀಲ ಕೆವಿ.ವಾಸು ಉಪಸ್ಥಿತರಿದ್ದರು.

ಕುಸ್ತಿ ಅಖಾಡ ಮೇಲ್ದರ್ಜೆಗೇರಿಸಲು ಕ್ರಿಯಾ ಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ

ಮೈಸೂರು, ಜು.29(ಎಂಕೆ)– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ(ಕುಸ್ತಿ ಅಖಾಡ)ವನ್ನು ಮೇಲ್ದರ್ಜೆಗೇರಿಸಲು ಅಗತ್ಯವಿರುವ ಕ್ರಿಯಾ ಯೋಜನೆ ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿರುವ ಕುಸ್ತಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ದಸರಾ ಮಹೋತ್ಸವ ಸಂದರ್ಭದಲ್ಲಿ ನಾಡಕುಸ್ತಿ, ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಗಳು ಸೇರಿದಂತೆ ಬೇರೆ ಬೇರೆ ಸಂದರ್ಭಗಳಲ್ಲಿಯೂ ಪಂದ್ಯಾವಳಿಗಳು ನಡೆಯಲಿವೆ. ಹಾಗಾಗಿ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು. ಪ್ರೇಕ್ಷಕರ ಗ್ಯಾಲರಿ ಸೇರಿದಂತೆ ಚಾವಣಿ ನಿರ್ಮಿಸುವಂತೆ ಕುಸ್ತಿಪಟುಗಳು ಹಾಗೂ ಮಾಜಿ ಮೇಯರ್ ಡಿ.ಧ್ರುವಕುಮಾರ್ ಕೂಡ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದರು. ಹಾಗಾಗಿ ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಕೊಡುವಂತೆ ಸಿಎಂ ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದೇನೆ ಎಂದು ಹೇಳಿದರು.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದ ಸಚಿವರು, ಕಾಮಗಾರಿ ಚುರುಕುಗೊಳಿಸುವಂತೆ ತಿಳಿಸಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಎಎಸ್‌ಪಿ ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.



ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಡಿ.ದೇವರಾಜ ಅರಸು ವಿವಿಧೋದ್ದೇಶ ಕುಸ್ತಿ ಕ್ರೀಡಾಂಗಣಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಥಳ ಪರಿಶೀಲನೆ ನಡೆಸಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಮತ್ತಿತರರಿದ್ದರು.

> “ ನಾಡಹಬ್ಬ ದಸರಾ ಮಾತ್ರವಲ್ಲ ವರ್ಷಪೂರ್ತಿ ಕುಸ್ತಿ ಪಂದ್ಯಾವಳಿಗಳನ್ನು ನಡೆಸಲು ಕ್ರೀಡಾಂಗಣಕ್ಕೆ ಅಗತ್ಯವಿರುವ ಅಭಿವೃದ್ಧಿಯ ಬಗ್ಗೆ ಕುಸ್ತಿಪಟುಗಳು ಸೇರಿದಂತೆ ಎಲ್ಲರ ಅಭಿಪ್ರಾಯ ಸಂಗ್ರಹಿಸಿ ಕ್ರಿಯಾ ಯೋಜನೆ ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ತಕ್ಷಣವೇ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿ ದಸರಾ ಮಹೋತ್ಸವ ಉದ್ಘಾಟನೆ ವೇಳೆಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು.
> –ಡಾ.ಹೆಚ್.ಸಿ.ಮಹದೇವಪ್ಪ, ಸಚಿವ

ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್ ಬೆಳ್ಳಿಹಬ್ಬ ಇಂದು

ಮೈಸೂರು,ಜು.29(ಪಿಎಂ)–ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ರಜತ ಮಹೋತ್ಸವವನ್ನು ಜು.30ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಸಬ್‌ಅರ್ಬನ್ ಬಸ್ ನಿಲ್ದಾಣದ ಬಳಿಯ ಹೋಟೆಲ್ ಪೈ ವಿಸ್ತಾದಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು ನಗರ ಉಪಪೊಲೀಸ್ ಆಯುಕ್ತೆ ಆರ್.ಎನ್. ಬಿಂದುಮಣಿ, ಮಾಮ್‌ಟ್ರೀ ಐವಿಎಫ್ ಅಂಡ್ ಜೆನೆಟಿಕ್ಸ್‌ನ ವೈದ್ಯಕೀಯ ನಿರ್ದೇಶಕಿ ಡಾ.ಎಂ.ಎಸ್. ನವ್ಯಶ್ರೀ, ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್ & ಇಂಡಸ್ಟ್ರಿ ಅಧೀನದ ವೈಸ್ ಸಂಘಟನೆ ಅಧ್ಯಕ್ಷ ಟಿ.ಎ. ವಸಂತಕುಮಾರಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಅತಿಥಿಗಳು 'ಬೆಳ್ಳಿ ಬೆಡಗು' ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು: ಮೈಸೂರು ವಿವಿ ಲಲಿತ ಕಲಾ ಕಾಲೇಜಿನ ನೃತ್ಯ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಕುಮಾರ್ ಮಾರ್ಗದರ್ಶನದಲ್ಲಿ ಚೇತನ ಗಂಗಟ್ಕರ್, 'ಗುರು ಶ್ರೀ ಸಿ.ಆರ್.ಆಚಾರ್ಯ ಅವರ ಕಲಾ ಮತ್ತು ಜೀವನ–ಒಂದು ವಿಶ್ಲೇಷಣಾತ್ಮಕ ಅಧ್ಯಯನ' ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣ: ಐವರು ಸರ್ಕಾರಿ ಅಧಿಕಾರಿಗಳ ಮನೆಗಳ ಮೇಲೆ ಲೋಕಾಯುಕ್ತ ದಾಳಿ



ಬೆಂಗಳೂರು: ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಸಿದ ಆರೋಪ ಹೊತ್ತಿರುವ ಐವರು ಸರ್ಕಾರಿ ಅಧಿಕಾರಿಗಳಿಗೆ ಸಂಬಂಧಿಸಿದ ಹಲವು ಸ್ಥಳಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಬೆಳ್ಳಂಬೆಳಗ್ಗೆ ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಅಧಿಕಾರಿಗಳ ಪ್ರಕಾರ, ಹಾಸನ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಮತ್ತು ಬೆಂಗಳೂರಿನಲ್ಲಿ ಏಕಕಾಲಕ್ಕೆ ದಾಳಿ ನಡೆಸಲಾಗಿದೆ. ಎನ್‌ಎಚ್‌ಎಐ ವಿಭಾಗ ಹಾಸನದ ಕಾರ್ಯಪಾಲಕ ಎಂಜಿನಿಯರ್ ಜಯಣ್ಣ ಆರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಚಿಕ್ಕಬಳಾಪುರದ ಜೂನಿಯರ್ ಇಂಜಿನಿಯರ್ ಆಂಜನೇಯಮೂರ್ತಿ ಎಂ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಬಿಬಿಎಂಪಿ ದಾಸರಹಳ್ಳಿ ಉಪ ವಿಭಾಗದ ಕಂದಾಯ ಅಧಿಕಾರಿ ಎನ್ ವೆಂಕಟೇಶ್ ಮತ್ತು ಬೆಂಗಳೂರಿನ ಬಿಡಿಎ ಕೇಂದ್ರ ಕಚೇರಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಕೆ ಓಂ ಪ್ರಕಾಶ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ನಗರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಂದಾಯ ಅಧಿಕಾರಿ ವೆಂಕಟೇಶ್ ಅವರಿಗೆ ಸೇರಿದ ಐಷಾರಾಮಿ ಬಂಗಲೆ ಇರುವುದನ್ನು ಲೋಕಾಯುಕ್ತ ಅಧಿಕಾರಿಗಳು ಗಮನಿಸಿದರು.

ನಾಳೆ ಅಲ್ಪನಾ ಭರತನಾಟ್ಯ ರಂಗಪ್ರವೇಶ




ರಂಗಪ್ರವೇಶಕ್ಕೆ ಅಣಿಯಾಗಿರುವ ಹಂಪಾಪುರದ ಬದರಿನಾಥ್–ಮೈಸೂರು ಸ್ಮಿತಾ ದಂಪತಿ ಪುತ್ರಿ ಅಲ್ಪನಾ.

ಮೈಸೂರು: ಕೆ.ಆರ್.ನಗರ ತಾಲೂಕು ಹಂಪಾಪುರದ ಆರ್ಥಿಕ ತಜ್ಞ ಎಚ್.ಬದರಿನಾಥ್ ಮತ್ತು ಮೈಸೂರು ಸ್ಮಿತಾ ದಂಪತಿ ಪುತ್ರಿ ಅಲ್ಪನಾ ಬದರಿನಾಥ್ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಜು.31ರ ಸಂಜೆ 6ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನೆರವೇರಲಿದೆ.

ವೆಂಕಟೇಶ ನೃತ್ಯ ಮಂದಿರದ ಹಿರಿಯ ನೃತ್ಯವಿದುಷಿ ರಾಧಾ ಶ್ರೀಧರ್ ಅವರ ಹೆಮ್ಮೆಯ ಶಿಷ್ಯೆ ಅಲ್ಪನಾ ಬದರಿನಾಥ್ ನಗರದ ಡಿ.ಸುಬ್ಬಯ್ಯ ರಸ್ತೆಯ ನಿವೃತ್ತ ಶಿಕ್ಷಕಿ ಕಮಲಾ ಮತ್ತು ವಿಜೇಂದ್ರರಾವ್ ಮೊಮ್ಮಗಳು. ರಂಗಾರೋಹಣಕ್ಕೆ ಮುಖ್ಯ ಅತಿಥಿಗಳಾಗಿ ಪ್ರಖ್ಯಾತ ಕೂಚಿಪುಡಿ ವಿದುಷಿ ವೈ ಜಯಂತಿ ಕಾಶಿ, ಐಸಿಸಿಆರ್ ಪ್ರಾದೇಶಿಕ ನಿರ್ದೇಶಕ ಪ್ರದೀಪ್ ಕುಮಾರ್ ಮತ್ತು ವಿಮರ್ಶಕ ಡಾ.ಸೂರ್ಯ ಪ್ರಸಾದ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಗುರುಗಳಾದ ರಾಧಾ ಶ್ರೀಧರ್, ಕುಸುಮಾರಾವ್ ಉಪಸ್ಥಿತರಿರುವರು.

ಅಲ್ಪನಾ ಅವರ ತಂದೆ ಬದರಿನಾಥ್ ಹಣಕಾಸು ತಜ್ಞರಾಗಿದ್ದು, ಪ್ರಸ್ಟೀಜ್ ವಿವಿ ಸೇರಿದಂತೆ ದೇಶದ ಹಲವು ಪ್ರತಿಷ್ಠಿತ ವಿವಿಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶುದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಕಲೆಯನ್ನು ಪೋಷಿಸುವ, ಆಲಿಸುವ ಕುಟುಂಬದ ಕುಡಿಯಾದ ಅಲ್ಪನಾ, ಈಗಾಗಲೇ ಜೂನಿಯರ್ ಮತ್ತು ಸೀನಿಯರ್ ಹಂತದ ನೃತ್ಯ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿದ್ದಾರೆ. ಆಲ್ ಇಂಡಿಯಾ ಜೆಇಇ ಪರೀಕ್ಷೆ ಮೂಲಕ ರ‍್ಯಾಂಕಿಂಗ್ ಪಡೆದು ಮದ್ರಾಸ್ ಐಐಟಿಯಲ್ಲಿ ಈಗ ಪ್ರವೇಶ ಪಡೆದಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತ, ಈಜು, ಬ್ಯಾಡ್ಮಿಂಟನ್, ಚಿತ್ರಕಲೆ ಮತ್ತು ಜ್ಯುವೆಲರಿ ಮೇಕಿಂಗ್ ಕಲೆಗಳಲ್ಲೂ ಈಕೆ ವಿಶೇಷ ಆಸಕ್ತಿ ಹೊಂದಿರುವುದು ಗಮನೀಯ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜು.29– ಜು.31ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ರಾಜೀವ್‌ನಗರ 2ನೇ ಹಂತ, ವಾಟರ್ ಟ್ಯಾಂಕ್ ಹತ್ತಿರ, 80 ಅಡಿ ರಸ್ತೆ, ಡಾಲರ್ಸ್ ಕಾಲೋನಿ, ಮುನೇಶ್ವರ ದೇವಸ್ಥಾನ, ಎ.ಜೆ. ಫಂಕ್ಷನ್ ಹಾಲ್, ಎಂಪೈರ್ ಬಡಾವಣೆ, ಸತ್ಯನಾರಾಯಣ ದೇವಸ್ಥಾನದ ಸುತ್ತ–ಮುತ್ತ, ತಾತಪ್ಪ ಬಡಾವಣೆ, ಕ್ಯೂಬಾ ಮಸೀದಿ, ಅಬ್ದುಲ್ ರೆಹಮಾನ್ ರಸ್ತೆ, ಉದಯಗಿರಿ, ಕೆ.ಹೆಚ್.ಬಿ ಕಾಲೋನಿ, ಜಕ್ರಿಯಾ ಮಸೀದಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನಿಧನ

ಸುತ್ತೂರು ರಾಮು



ಸುತ್ತೂರು, ಜು.29– ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮದ ರಾಮು (43) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಇವರು ಪತ್ನಿ, ಎರಡು ಹೆಣ್ಣು ಮಕ್ಕಳು, ಸ್ನೇಹಿತರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಬುಧವಾರ) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಕ ವಸ್ತುಗಳ ಬಳಕೆ, ಮಾರಾಟದ ಬಗ್ಗೆ ಮೈಸೂರಲ್ಲಿ ಆ.1ರಂದು ಜಾಗೃತಿ ಕಾರ್ಯಕ್ರಮ

ಮೈಸೂರು, ಜು.29(ಜಿಎ)–ಮೈಸೂರಿನಲ್ಲಿ ಮಾದಕ ವಸ್ತುಗಳ ಬಳಕೆ, ಮಾರಾಟ ಮತ್ತು ಮಾದಕ ವ್ಯಸನಿಗಳಿಂದ ವಾತಾವರಣ ಹಾಳಾಗುತ್ತಿರುವ ಹಿನ್ನೆಲೆಯಲ್ಲಿ ಉಲಮಾ ಹುಫ್ಫಾಜ್ ಯೂನಿಯನ್ ವತಿಯಿಂದ ಆ.1ರಂದು ರಾಜೀವ್‌ನಗರದ ಎಲ್ಲಾ ಮಸೀದಿ, ಮೊಹಲ್ಲಾ, ಬೀದಿಗಳಲ್ಲಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದು ಯೂನಿಯನ್‌ನ ಕಾರ್ಯದರ್ಶಿ ನಸೀರ್ ಉಲ್ಲಾ ಖಾನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಲಮಾ ಹುಫ್ಫಾಜ್ ಯೂನಿಯನ್ ವತಿಯಿಂದ ಕಳೆದ 2 ವರ್ಷಗಳಿಂದ ಮೈಸೂರು ಭಾಗದಲ್ಲಿ ನಡೆಯುತ್ತಿರುವ ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆ ಕುರಿತು ಸಾಕಷ್ಟು ಅಭಿಯಾನ ಮಾಡಲಾಗುತ್ತದೆ. ಆದರೂ ನಗರದಲ್ಲಿ ಗಾಂಜಾ, ಸಲ್ಯೂಷನ್, ಡ್ರಗ್ಸ್, ಪೌಡರ್ ಸೇರಿದಂತೆ ನಶೆ ಏರಿಸುವ ಪ್ರಕರಣಗಳು ಎಗ್ಗಿಲ್ಲದೇ ನಡೆಯುತ್ತಿದ್ದು, ಈ ಬಗ್ಗೆ ಪೊಲೀಸರ ಗಮನಕ್ಕೂ ತರಲಾಗಿದೆ ಎಂದರು.

ನಗರದ ಹೊರವಲಯದ ರಿಂಗ್ ರಸ್ತೆಯಲ್ಲಿ ಮಾದಕ ವಸ್ತುಗಳ ತಯಾರಿಕ ಘಟಕದ ಮೇಲೆ ಮಹಾರಾಷ್ಟ್ರದ ಪೊಲೀಸರು ದಾಳಿ ಮಾಡಿ ಅಪಾರ ಪ್ರಮಾಣದ ಮಾದಕ ವಸ್ತುಗಳ ಜಪ್ತಿ ಮಾಡಿರುವುದು ಶ್ಲಾಘನೀಯ. ಆದರೂ ಹೀಗೆ ಕೆಲವೊಂದು ಮೊಹಲ್ಲಾದ ಬೀದಿಯಲ್ಲಿ ಮಕ್ಕಳು ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಪೊಲೀಸರು ಈ ಬಗ್ಗೆ ಗಮನ ಹರಿಸಬೇಕಿದೆ. ಈಗಾಗಲೇ ಯೂನಿಯನ್ ವತಿಯಿಂದ ಈ ಬಗ್ಗೆ ಡಿಸಿಪಿಗೆ ಮಾಹಿತಿ ನೀಡಲಾಗಿದೆ ಎಂದರು.

ಮೈಸೂರಿನಲ್ಲಿ ಮಾದಕ ವಸ್ತುಗಳ ಬಳಕೆ, ಮಾರಾಟ, ಮಾದಕ ವ್ಯಸನಿಗಳಿಂದ ವಾತಾವರಣ ಹಾಳಾಗುತ್ತಿರುವ ಹಿನ್ನೆಲೆಯಲ್ಲಿ ಯೂನಿಯನ್ ವತಿಯಿಂದ ಆ.1ರಂದು ರಾಜೀವ್‌ನಗರದ ಎಲ್ಲಾ ಮಸೀದಿ, ಮೊಹಲ್ಲಾ, ಬೀದಿಗಳಲ್ಲಿ ವಿವಿಧ ಧರ್ಮಗುರುಗಳ ಸಮ್ಮುಖದಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತದೆ ಎಂದರು.

ಹುತಾತ್ಮ ಯೋಧರಿಗೆ ನಮನ



ಮಾತೃಭೂಮಿಯನ್ನು ರಕ್ಷಿಸಲು ಕಾರ್ಗಿಲ್ ಯುದ್ಧದಲ್ಲಿ ಹೋರಾಡಿ ದೇಶಕ್ಕೆ ಗೆಲುವು ತಂದುಕೊಟ್ಟ ಹಾಗೂ ಯುದ್ಧದಲ್ಲಿ ಮಡಿದ ವೀರ ಸೈನಿಕರಿಗೆ ಮೈಸೂರಿನ ಮೆಟ್ರೋಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆ ಮುಂಭಾಗ ಗೌರವ ಸಲ್ಲಿಸಲಾಯಿತು. ಈ ವೇಳೆ ಮಾಜಿ ಮೇಯರ್ ಶಿವಕುಮಾರ್, ಗಿರಿಧರ್, ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಎಲ್.ಬಿ.ಜಗದೀಶ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ಅರ್ಜುನ್‌ಕುಮಾರ್, ಕಿರಣ್, ಪಂಕಜ್, ಮತ್ತಿತರರು ಉಪಸ್ಥಿತರಿದ್ದರು.

ಚೆಲುವಾಂಬ ಆಸ್ಪತ್ರೆಯಲ್ಲೊಂದು ಅಮಾನವೀಯ ಘಟನೆ

ಹೊಟ್ಟೆನೋವಿಗೆ ಶಸ್ತ್ರಚಿಕಿತ್ಸೆ ಮಾಡುವ ವೇಳೆ ಮೂತ್ರಕೋಶಕ್ಕೆ ಹಾನಿ ಮಾಡಿದ ವೈದ್ಯರು

ದೂರು ನೀಡಿದರೂ ಕ್ರಮ ಜರುಗಿಸದ ಪೊಲೀಸರು

ಮೈಸೂರು,ಜು.29– ಹೊಟ್ಟೆನೋವಿನಿಂದ ಬಳಲುತ್ತಿದ್ದ ಮಹಿಳೆಯೊಬ್ಬರಿಗೆ ಮೈಸೂರಿನ ಚೆಲುವಾಂಬ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ವೇಳೆ ಮೂತ್ರಕೋಶಕ್ಕೆ ಹಾನಿಯುಂಟು ಮಾಡಿದ್ದು, ಇದರಿಂದ ಆ ಮಹಿಳೆ ಅನುಕ್ಷಣ ನೋವಿನಿಂದ ನರಳುವಂತಾಗಿದೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಮೈಸೂರಿನ ಮೇಟಗಳ್ಳಿಯ ನಿವಾಸಿ ಅನಿಲ್ ಅವರ ಪತ್ನಿ ಶ್ರೀಮತಿ ಲಕ್ಷ್ಮಿ (45), ವೈದ್ಯರ ನಿರ್ಲಕ್ಷ್ಯದಿಂದ ತೊಂದರೆಗೊಳಗಾಗಿ ನರಳುತ್ತಿರುವ ಮಹಿಳೆಯಾಗಿದ್ದು, ತಮಗಾಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸುವಂತೆ ಅಂಗಲಾಚುತ್ತಿದ್ದಾರೆ.


ಲಕ್ಷ್ಮಿ ಅವರಿಗೆ ಆಗಾಗ ಹೊಟ್ಟೆನೋವು ಬರುತ್ತಿದ್ದು, ವೇದನೆ ಪಡುತ್ತಿದ್ದರು. ಕೊನೆಗೆ ನೋವು ತಾಳಲಾರದೆ ಚೆಲುವಾಂಬ ಆಸ್ಪತ್ರೆಯಲ್ಲಿ ತೋರಿಸಲಾಗಿ, ಹೊಟ್ಟೆಯೊಳಗೆ ಗಡ್ಡೆ ಇದೆ. ಆಪರೇಷನ್ ಮಾಡಬೇಕು ಎಂದು ಹೇಳಿ ಕೆಲವೊಂದು ಪರೀಕ್ಷೆಗಳನ್ನು ಮಾಡಿಸಿ, ಆಪರೇಷನ್ ಮಾಡಿದರು ಎಂದು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಹೊಟ್ಟೆನೋವಿಗೆ ಆಪರೇಷನ್ ಮಾಡುವ ವೇಳೆ ನನ್ನ ಮೂತ್ರಕೋಶಕ್ಕೆ ಹಾನಿಯುಂಟು ಮಾಡಿದ್ದರಿಂದ ನನಗೆ ವಿಪರೀತ ಮೂತ್ರ ಸೋರಿಕೆಯಾಗಿ ತೊಂದರೆಯಾಗತೊಡಗಿತ್ತು. ಇದರಿಂದ ಗಾಬರಿಯಾಗಿ ಮತ್ತೆ ಚೆಲುವಾಂಬ ಆಸ್ಪತ್ರೆಗೆ ತೆರಳಿ ತೋರಿಸಿದಾಗ ಅವರು ಮೂತ್ರಕೋಶಕ್ಕೆ ಹಾನಿಯಾಗಿದೆ ಎಂದು ಕೆ.ಆರ್.ಆಸ್ಪತ್ರೆಯ ನೆಫ್ರೋ ಯುರಾಲಜಿ ವಿಭಾಗಕ್ಕೆ ಚಿಕಿತ್ಸೆಗೆ ಕಳುಹಿಸಿದರು ಎಂದು ಅವರು ದೂರಿದ್ದಾರೆ.

ಅಲ್ಲಿ ಚಿಕಿತ್ಸೆ ಪಡೆದ ನಂತರವೂ ನನಗೆ ಈಗಲೂ ಹೊಟ್ಟೆನೋವು ಮತ್ತು ಮೂತ್ರಕೋಶದ ಸಮಸ್ಯೆ ಕಾಡುತ್ತಿದ್ದು, ನನಗೆ ಹೊಟ್ಟೆನೋವಿಗೆ ಚಿಕಿತ್ಸೆ ನೀಡುವ ವೇಳೆ ಮೂತ್ರಕೋಶಕ್ಕೆ ಹಾನಿಯುಂಟು ಮಾಡಿದ ವೈದ್ಯರ ಮೇಲೆ ಕ್ರಮ ಜರುಗಿಸಿ ನ್ಯಾಯ ಕೊಡಿಸಬೇಕು ಎಂದು ಲಕ್ಷ್ಮಿ ಅವರು ದೂರಿನಲ್ಲಿ ಮನವಿ ಮಾಡಿದ್ದಾರೆ.

ಆದರೆ ದೂರು ನೀಡಿ ವರ್ಷಗಳೇ ಕಳೆದರೂ ಸಂಬಂಧಪಟ್ಟ ಪೊಲೀಸರು ಯಾವುದೇ ಕ್ರಮ ಜರುಗಿಸಲಿಲ್ಲವೆಂದು ಅವರು ದೂರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.07.2025 ಬುಧವಾರ, ಮಳೆ ನಕ್ಷತ್ರ: ಪುಷ್ಯ, 20.07.2025ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಅರ್ಥರೈಟಿಸ್, ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು ರೋಗಗಳಿಗೆ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಯುವರಾಜ ಕಾಲೇಜು :** ಯುವ ಆರೋಗ್ಯ ಯೋಗ ಮಹೋತ್ಸವ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಗೌರವ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಆಯುಷ್ ಆಯುಕ್ತ ವಿಪಿನ್ ಸಿಂಗ್, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 10ಕ್ಕೆ.

■ **ಸಹಕಾರ ಭಾರತೀ, ಮೈಸೂರು ಜಿಲ್ಲೆ :** ಜಿಲ್ಲಾ ಅಭ್ಯಾಸ ವರ್ಗ, ಉದ್ಘಾಟನೆ : ಸಹಕಾರ ಭಾರತಿ ರಾಜ್ಯಾಧ್ಯಕ್ಷ ಪ್ರಭುದೇವ್ ಆರ್. ಮಾಗಸೂರು, ಅಧ್ಯಕ್ಷತೆ : ಸಹಕಾರ ಭಾರತಿ ಜಿಲ್ಲಾಧ್ಯಕ್ಷ ವಿ. ವೆಂಕಟೇಶ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಹಕಾರ ಭಾರತಿ ರಾಷ್ಟ್ರೀಯ ಉಪಾಧ್ಯಕ್ಷ ಬಿ.ಹೆಚ್. ಕೃಷ್ಣಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್, ಸಂಘಟನಾ ಕಾರ್ಯದರ್ಶಿ ಮಂಜುನಾಥ್, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ


■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ಮಹಿಳೆಯರ ಸುರಕ್ಷತೆ ಕುರಿತು ಕಾನೂನು ಅರಿವು ಕಾರ್ಯಕ್ರಮ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸಂಪನ್ಮೂಲ ವ್ಯಕ್ತಿ : ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಕೆ.ಎಸ್. ಸುರೇಶ್, ಮುಖ್ಯ ಅತಿಥಿಗಳು : ಮುನ್ನಡೆ ಸಾಮಾಜಿಕ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಪಿ.ಹೆಚ್. ಯಶೋಧ, ಉಪಸ್ಥಿತರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11.30ಕ್ಕೆ.

■ **ವಿದ್ಯಾವರ್ಧಕ ಸಂಯುಕ್ತ ಪದವಿಪೂರ್ವ ಕಾಲೇಜು :** ವಿದ್ಯಾರ್ಥಿ ಸಂಘ ಉದ್ಘಾಟನೆ ಮತ್ತು ಸನ್ಮಾನ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾರ್ಯಕಾರಿ ಸಮಿತಿ ಸದಸ್ಯ ಅಬ್ದುಲ್ ಜಮೀಲ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಗಾಯಕ ಜೂನಿಯರ್ ರಫಿ ರಾಘವೇಂದ್ರ ರತ್ನಾಕರ್ :** ಸಂಗೀತ ಸಾಮ್ರಾಟ್ ಮಹಮ್ಮದ್ ರಫೀರವರ ಸ್ಮರಣಾರ್ಥ ಹಿಂದಿ ಚಲನಚಿತ್ರ ಗೀತೆಗಳ ಗಾಯನ, ಉಪಸ್ಥಿತರು : ಟಿ.ಆರ್. ಹರೀಶ್ ಪ್ರಸಾದ್, ನಾಗರಾಜ್ ವಿ. ಬೈರಿ, ಹೆಚ್.ವಿ. ರಾಜೀವ್, ಕೆ. ರಘುರಾಂ ವಾಜಪೇಯಿ, ಮಡ್ಡೀಕೆರೆ ಗೋಪಾಲ್, ಗೋಪಿನಾಥ್, ಕುವೆಂಪು ಪ್ರಕಾಶ್, ಸೋಮಶೇಖರ ಆರಾಧ್ಯ, ಬಾಲಸುಬ್ರಹ್ಮಣ್ಯ, ಅಂಶಿ ಪ್ರಸನ್ನಕುಮಾರ್, ಶೇಷಾದ್ರಿ, ಡಾ. ವೈ.ಡಿ. ರಾಜಣ್ಣ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್ ಹಾಗೂ ಎಂ. ಕುಮಾರಸ್ವಾಮಿ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಅಧ್ಯಯನ ಅವಕಾಶಗಳನ್ನ ಕುರಿತ ಪ್ರಾಯೋಜಿತ ನೇರೆ ಫೋನ್–ಇನ್–ಕಾರ್ಯಕ್ರಮ (ರಾಜ್ಯವ್ಯಾಪಿ ಜಾಲ) ಭಾಗವಹಿಸುತ್ತಾರೆ–ಕುಲಪತಿಗಳಾದ ಪ್ರೊ. ಶರಣಪ್ಪ ವಿ ಹಲಸೆ, ಪ್ರಸ್ತುತಿ–ಎನ್. ಕೇಶವಮೂರ್ತಿ, ಪ್ರಾಯೋಜಕರು–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ವೆಂಕಟೇಶ್ ಗೋಡ್ಖಿಂಡಿ–ವೇಣು ವಾದನ ಹಾಗೂ ಬಾಲೇಖಾನ್, ಸಿತಾರ್ ವಾದನ ಜುಗಲ್ ಬಂದಿ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ– ಸಾಕಮ್ಮ ಮತ್ತು ಸಂಗಡಿಗರಿಂದ ಭೈರವೇಶ್ವರನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸಿ.ಎಂ. ಮಧುರನಾಥ್ – ಹಾಡುಗಾರಿಕೆ, 4.00 ಮಹಿಳಾ ರಂಗ ಸಾಧನ ಶಿಖರ, ಮೈಸೂರಿನಲ್ಲಿ ಕೋರಿಯರ್ ಸೇವೆ ನೀಡುತ್ತಿರುವ ಮೊದಲ ಮಹಿಳೆ ಅನು. ಎಸ್. ಅವರೊಂದಿಗೆ ಮಾತುಕತೆ, ಪ್ರಸ್ತುತಿ–ದಿಗ್ವಿಜಯ್ ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಸ್ಮಿತಾ ಚಿಪ್ಳೂಣ್ ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50ಕೃಷಿರಂಗ–ತಾಳೆ ಬೇಸಾಯ ಕುರಿತು ಸಂವಾದ, ಭಾಗವಹಿಸುತ್ತಾರೆ–ಮೈಸೂರು ಜಿಲ್ಲಾ ತೋಟಗಾರಿಕಾ ಉಪನಿರ್ದೇಶಕರಾದ ಮಂಜುನಾಥ ಅಂಗಡಿ ಮತ್ತು ಹೆಚ್.ಡಿ. ಕೋಟೆ ತಾಲೂಕು ಸವ್ವೆ ಗ್ರಾಮದ ವೈ.ಟಿ. ಮಹೇಶ್, ಪ್ರಸುತಿ–ಎನ್. ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಗ್ರಾಮೀಣ ಅಭಿವೃದ್ಧಿ ಕ್ಷೇತ್ರದ ಸಾಧನೆಗಾಗಿ ಮೈಸೂರು, ಆಕಾಶವಾಣಿಯಿಂದ ಸನ್ಮಾನಿತರಾದ ಮಂಡ್ಯದ ವಿಕಸನ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಮಹೇಶ್ ಚಂದ್ರಗುರು ಅವರೊಂದಿಗೆ ಸಂದರ್ಶನ. ಇವರೊಂದಿಗೆ ಭಾಗವಹಿಸುತ್ತಾರೆ–ಎನ್. ಕೇಶವಮೂರ್ತಿ, 9.30 ಕ್ರೀಡಾಲೋಕ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ ಬುಧವಾರ 30 ಜುಲೈ 2025

ಇಡೀ ಜಗತ್ತು 'ಆಪರೇಷನ್ ಸಿಂಧೂರ್' ಬೆಂಬಲಿಸಿತು; ಕಾಂಗ್ರೆಸ್ ನಮ್ಮ ಸೈನಿಕರ ಧೈರ್ಯ ಬೆಂಬಲಿಸಲಿಲ್ಲ

ಲೋಕಸಭೆಯಲ್ಲಿ ಪ್ರಧಾನಿ ಮೋದಿ ವಾಗ್ದಾಳಿ



ನವದೆಹಲಿ, ಜು.29– ಭಾರತವು 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಗೆ ವಿಶ್ವದ ಬೆಂಬಲ ಸಿಕ್ಕಿತು. ಆದರೆ ಕಾಂಗ್ರೆಸ್ ಪಕ್ಷವು ಸಶಸ್ತ್ರ ಪಡೆಗಳ ಧೈರ್ಯವನ್ನು ಬೆಂಬಲಿಸಲು ಸಿದ್ಧವಿರಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಲೋಕಸಭೆಯಲ್ಲಿ ಪಹಲ್ಗಾಮ್ ದಾಳಿ ಮತ್ತು ಆಪರೇಷನ್ ಸಿಂಧೂರ್ ಕುರಿತ ಚರ್ಚೆ ವೇಳೆ ಮಾತನಾಡಿದ ಅವರು, ಭಾರತ ತನ್ನ ಆತ್ಮರಕ್ಷಣೆಗಾಗಿ ಕಾರ್ಯನಿರ್ವಹಿಸುವುದನ್ನು ತಡೆಯಲು ಯಾವ ದೇಶವೂ ಪ್ರಯತ್ನಿಸಲಿಲ್ಲ. ವಿದೇಶಾಂಗ ನೀತಿಯ ಬಗ್ಗೆ ಸಾಕಷ್ಟು ಚರ್ಚೆ ನಡೆದಿದ್ದು, ಭಾರತಕ್ಕೆ ಜಾಗತಿಕ ಬೆಂಬಲ ಸಿಕ್ಕಿದೆ. 193 ದೇಶಗಳಲ್ಲಿ ಕೇವಲ ಮೂರು ದೇಶಗಳು ಮಾತ್ರ ಪಾಕಿಸ್ತಾನವನ್ನು ಬೆಂಬಲಿಸಿವೆ. ಆದರೆ ದುರದೃಷ್ಟವಶಾತ್ ನನ್ನ ದೇಶದ ಧೈರ್ಯಶಾಲಿ ಯೋಧರ ಶೌರ್ಯಕ್ಕೆ ಕಾಂಗ್ರೆಸ್ ಬೆಂಬಲ ಸಿಗಲಿಲ್ಲ ಎಂದು ಹೇಳಿದರು.

ಏಪ್ರಿಲ್ 22ರ ಪಹಲ್ಗಾಮ್ ದಾಳಿಯ ಬಗ್ಗೆ ಮಾತನಾಡಿದ ಮೋದಿ, ಭಯೋತ್ಪಾದಕರು ಅಮಾಯಕ ಜನರ ಧರ್ಮದ ಬಗ್ಗೆ ಕೇಳಿ, ನಂತರ ಗುಂಡು ಹಾರಿಸಿದ್ದು ಕ್ರೌರ್ಯದ ಪರಮಾವಧಿ. ಇದು ಭಾರತದಲ್ಲಿ ಗಲಭೆ ಹರಡಲು ನಡೆದ ಪಿತೂರಿಯಾಗಿತ್ತು. ಇಂದು, ದೇಶವು ಆ ಪಿತೂರಿಯನ್ನು ಒಗ್ಗಟ್ಟಿನಿಂದ ವಿಫಲಗೊಳಿಸಿದ್ದಕ್ಕಾಗಿ ನಾನು ದೇಶವಾಸಿಗಳಿಗೆ ಧನ್ಯವಾದ ಹೇಳುತ್ತೇನೆ ಎಂದರು.

22ರ ದಾಳಿಗೆ 22 ನಿಮಿಷದಲ್ಲಿ ಉತ್ತರ: ಭಾರತದ ಮಿಲಿಟರಿ ಕ್ರಮಕ್ಕೆ ಹೆದರಿ ಕಂಗಾಲಾದ ಪಾಕಿಸ್ತಾನ ಪರಮಾಣು ಬೆದರಿಕೆ ಹಾಕುತ್ತಿತ್ತು. ಮೇ 6–7ರ ಮಧ್ಯರಾತ್ರಿ, ಭಾರತ ನಿರ್ಧರಿಸಿದಂತೆ ಪರಿಣಾಮಕಾರಿ ಕ್ರಮ ಕೈಗೊಂಡಿತು. ಪಾಕಿಸ್ತಾನಕ್ಕೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಏಪ್ರಿಲ್ 22ರ ದಾಳಿಗೆ 22 ನಿಮಿಷಗಳಲ್ಲಿ ನಿಖರವಾದ ದಾಳಿಯೊಂದಿಗೆ ನಮ್ಮ ಸಶಸ್ತ್ರ ಪಡೆಗಳು ಸೇಡು ತೀರಿಸಿಕೊಂಡವು. ಸಶಸ್ತ್ರ ಪಡೆಗಳು ತಮ್ಮ ಗುರಿಗಳಲ್ಲಿ 100 ಪ್ರತಿಶತವನ್ನು ಸಾಧಿಸಿವೆ ಎಂದು ಅವರು ತಿಳಿಸಿದರು.

ಅಗಾಧ ನಷ್ಟಗಳನ್ನು ಅನುಭವಿಸಿದ ನಂತರ, ಪಾಕ್ ಡಿಜಿಎಂಒ ಬಂದು 'ನಮ್ಮ ಮೇಲೆ ದಾಳಿ ಮಾಡಬೇಡಿ. ನಾವು ಇನ್ನು ಮುಂದೆ ಸಹಿಸಲು ಸಾಧ್ಯವಿಲ್ಲ' ಎಂದು ಮನವಿ ಮಾಡಿದರು ಎಂದು ಪ್ರಧಾನಿ ಮೋದಿ ಹೇಳುವಾಗ ಎನ್‌ಡಿಎ ಸಂಸದರ ಹರ್ಷೋದ್ಗಾರ ಹಾಗೂ ವಿರೋಧ ಪಕ್ಷದ ಹರ್ಷೋತ್ಕರ್ಷ ಸೃಷ್ಟಿಯಾಗಿತ್ತು.

ಭಾರತವು ಸರಿಯಾದ ಪರಿಸ್ಥಿತಿ ಮತ್ತು ಸಮಯದಲ್ಲಿ ಭಯೋತ್ಪಾದಕ ದಾಳಿಗಳಿಗೆ ಪ್ರತಿಕ್ರಿಯಿಸುತ್ತದೆ. ಭಯೋತ್ಪಾದಕ ಬೆಂಬಲಿತ ಸರ್ಕಾರಗಳು ಮತ್ತು ಭಯೋತ್ಪಾದಕ ಮಾಸ್ಟರ್‌ಮೈಂಡ್‌ಗಳನ್ನು ಪ್ರತ್ಯೇಕವಾಗಿ ನೋಡುವುದಿಲ್ಲ. ಪರಮಾಣು ಬ್ಲ್ಯಾಕ್‌ಮೇಲಿಂಗ್ ಇನ್ನು ಮುಂದೆ ಕೆಲಸ ಮಾಡುವುದಿಲ್ಲ, ಇದಕ್ಕೆ ಭಾರತವು ಎಂದೂ ತಲೆಬಾಗುವುದಿಲ್ಲ ಎಂಬುದು ಸಾಬೀತಾಗಿದೆ. ಪಾಕಿಸ್ತಾನ ಭಾರೀ ಹಾನಿಯನ್ನು ಅನುಭವಿಸಿದೆ. ಅವರ ಅನೇಕ ವಾಯುನೆಲೆಗಳು ಐಸಿಯುನಲ್ಲಿವೆ ಎಂದು ಅವರು ಹೇಳಿದರು.

ಆತ್ಮನಿರ್ಭರ ಶಕ್ತಿ: ನಮ್ಮ ದೇಶದ ಆತ್ಮನಿರ್ಭರದ ಶಕ್ತಿ ಜಗತ್ತಿಗೆ ತಿಳಿದಿದೆ. ಆಪರೇಷನ್ ಸಿಂಧೂರದಲ್ಲಿ ನಾವು ಮೇಡ್ ಇನ್ ಇಂಡಿಯಾ ವೆಪನ್‌ಗಳನ್ನು ಬಳಸಿ ಯಶಸ್ಸು ಸಾಧಿಸಿದ್ದೇವೆ. ಇದು ಭಾರತದ ಶಕ್ತಿ ಸಾಮರ್ಥ್ಯವನ್ನು ಜಗತ್ತಿಗೆ ಎತ್ತಿ ತೋರಿಸಿದೆ. ಉಗ್ರರ ಪ್ರತೀ ದಾಳಿಗೂ ತಕ್ಕ ಪ್ರತ್ಯುತ್ತರ ನೀಡುತ್ತೇವೆ. ಪಹಲ್ಗಾಮ್ ದಾಳಿಯ ನಂತರ, ಭಯೋತ್ಪಾದನೆಯ ಅಂಶಗಳನ್ನು ನಿರ್ಮೂಲನೆ ಮಾಡುವುದಾಗಿ ನಾನು ಭರವಸೆ ನೀಡಿದ್ದೆ. ಆದರಂತೆ ಸೇನೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೆವು ಎಂದರು.

ವಿಪಕ್ಷಗಳ ವಿರುದ್ಧ ಗುಡುಗಿದ ಮೋದಿ, ಮಾಧ್ಯಮಗಳಲ್ಲಿ ನೀವು ಹೆಡ್‌ಲೈನ್ ಆಗಬಹುದು. ಆದರೆ ನಿಮಗೆ ದೇಶವಾಸಿಗಳ ಹೃದಯದಲ್ಲಿ ಸ್ಥಾನ ಸಿಗುವುದಿಲ್ಲ. ಭಾರತೀಯ ಸೇನೆ 100ಕ್ಕೆ 100 ರಷ್ಟು ಗುರಿ ಮುಟ್ಟುವಲ್ಲಿ ಯಶಸ್ವಿಯಾಗಿದೆ. ಆಪರೇಷನ್ ಸಿಂಧೂರದ ಸಮಯದಲ್ಲಿ ವಿಪಕ್ಷಗಳು ಪಾಕ್ ಪರ ಹೇಳಿಕೆ ಕೊಡಲು ಬ್ಯುಸಿಯಾಗಿದ್ದರು ಎಂದು ಟಾಂಗ್ ನೀಡಿದರು.


ಪಾಕ್ ಅಂಗಲಾಚಿದ್ದಕ್ಕೆ ಕದನ ವಿರಾಮ ಜಾರಿಯಾಯ್ತು

ನವದೆಹಲಿ: ಪಾಕಿಸ್ತಾನವು ನಮಗೆ ತಾಕತ್ತು ಇಲ್ಲ ಎಂದು ಅಂಗಲಾಚಿದ ಮೇಲೆಯೇ ಕದನ ವಿರಾಮ ನಡೆದಿದ್ದು ಎಂದು ಲೋಕಸಭೆಗೆ ತಿಳಿಸುವ ಮೂಲಕ ಪ್ರಧಾನಿ ಮೋದಿ, ಇದರಲ್ಲಿ ಯಾವುದೇ ರಾಷ್ಟ್ರವು ಮಧ್ಯಸ್ಥಿಕೆ ವಹಿಸಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

ಪಾಕಿಸ್ತಾನದ ಡಿಜಿಎಂಒ 'ನಿಲ್ಲಿಸಿ, ನಮಗೆ ಸಾಕಷ್ಟು ಹೊಡೆತ ಬಿದ್ದಿದೆ, ನಮಗೆ ಹೆಚ್ಚಿನ ಹೊಡೆತಗಳನ್ನು ಸಹಿಸಿಕೊಳ್ಳುವ ಶಕ್ತಿ ಇಲ್ಲ. ದಯವಿಟ್ಟು ದಾಳಿಯನ್ನು ನಿಲ್ಲಿಸಿ!' ಎಂದು ಅಂಗಲಾಚಿತು. ಇದು ಪಾಕಿಸ್ತಾನದ ಪರಿಸ್ಥಿತಿ. ನಾವು ನಮ್ಮ ಗುರಿಯನ್ನು ಸಾಧಿಸಿದ್ದು, ಪಾಕಿಸ್ತಾನ ಏನಾದರೂ ಮಾಡಿದರೆ ಅದಕ್ಕೆ ದುಬಾರಿ ಬೆಲೆ ತೆರಬೇಕಾಗುತ್ತದೆ ಎಂದು ಅಂದೇ ಸ್ಪಷ್ಟ ಪಡಿಸಿದ್ದೇವೆ ಎಂದರು.

ನೆಹರು ಕಾರಣದಿಂದಲೇ ಪಿಒಕೆ ಅಸ್ತಿತ್ವಕ್ಕೆ ಬಂದಿದ್ದು

ಸದನದಲ್ಲಿ ಕಾಂಗ್ರೆಸ್ ನಾಯಕರ ಬೆವರಿಳಿಸಿದ ಅಮಿತ್ ಶಾ




ನವದೆಹಲಿ, ಜು. 29– ಆಪರೇಷನ್ ಸಿಂದೂರ್ ಪಾಕಿಸ್ತಾನದಲ್ಲಿ ನಡೆದ ಪ್ರಾಯೋಜಿತ ಭಯೋತ್ಪಾದನೆಯನ್ನು ಬಯಲು ಮಾಡಿದೆ. ಆ ವೇಳೆ ನಮ್ಮ ಭದ್ರತಾ ಪಡೆಗಳು 100ಕ್ಕೂ ಹೆಚ್ಚು ಭಯೋತ್ಪಾದಕರನ್ನು ಹುಟ್ಟಡಗಿಸಿವೆ. ಭಾರತದ ಸಶಸ್ತ್ರ ಪಡೆಗಳು ಪಾಕಿಸ್ತಾನದ ರಕ್ಷಣಾ ವ್ಯವಸ್ಥೆಗಳನ್ನು ದುರ್ಬಲಗೊಳಿಸಿದ್ದರಿಂದ ಭಾರತವನ್ನು ವಿನಂತಿಸುವುದನ್ನು ಬಿಟ್ಟು ಪಾಕಿಸ್ತಾನಕ್ಕೆ ಬೇರೆ ದಾರಿಯೇ ಇರಲಿಲ್ಲ ಎಂದು ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಹೇಳಿದರು.

ನಿನ್ನೆ ಎನ್‌ಡಿಎ ಸರ್ಕಾರಕ್ಕೆ ಪ್ರಶ್ನೆಗಳ ಚಾಟಿ ಬೀಸಿದ್ದ ವಿಪಕ್ಷಗಳಿಗೆ ಇಂದು ಸದನದಲ್ಲಿ ತಿರುಗೇಟು ನೀಡಿದ ಅವರು, ನಿನ್ನೆ ಕಾಂಗ್ರೆಸ್ ನಾಯಕರು ಭಯೋತ್ಪಾದಕರು ಎಲ್ಲಿಂದ ಬಂದರು ಮತ್ತು ಅದಕ್ಕೆ ಯಾರು ಹೊಣೆ ಎಂದು ನಮ್ಮನ್ನು ಕೇಳುತ್ತಿದ್ದರು. ಖಂಡಿತ, ನಾವು ಅಧಿಕಾರದಲ್ಲಿರುವುದರಿಂದ ಅದಕ್ಕೆ ಉತ್ತರ ನೀಡುವುದು ನಮ್ಮ ಜವಾಬ್ದಾರಿ. ಭಯೋತ್ಪಾದಕರು ಪಾಕಿಸ್ತಾನದಿಂದ ಬಂದರು ಎಂಬುದಕ್ಕೆ ಪುರಾವೆ ಏನು ಎಂದು ಮಾಜಿ ಗೃಹಸಚಿವ ಚಿದಂಬರಂ ಪ್ರಶ್ನಿಸಿದ್ದರು. ಆದರೆ ಹೀಗೆ ಪಾಕಿಸ್ತಾನ ವನ್ನು ಉಳಿಸುವುದರಿಂದ ಅವರಿಗೆ ಏನು ಸಿಗುತ್ತದೆ ಎಂದು ನಾನು ಅವರನ್ನು ಕೇಳಲು ಬಯಸುತ್ತೇನೆ. ನಾವು ಸಾಕ್ಷಿಗಳನ್ನು ಇಟ್ಟುಕೊಂಡೇ ಮಾತನಾಡುತ್ತಿದ್ದೇವೆ. ನಿನ್ನೆ ಎನ್‌ಕೌಂಟರ್‌ನಲ್ಲಿ ಮೃತರಾದ ಮೂವರು ಉಗ್ರರು ಪಾಕಿಸ್ತಾನದ ನಂಟು ಹೊಂದಿದವರು ಎಂಬುದಕ್ಕೆ ಅವರ ಬಳಿ ಸಿಕ್ಕ ಐಡಿಗಳೇ ಸಾಕ್ಷಿ ಎಂದು ಗುಡುಗಿದರು.

1948ರಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಪಿಒಕೆಯನ್ನು ವಾಪಾಸ್ ಪಡೆಯಲು ನಿರ್ಣಾಯಕ ಸ್ಥಾನದಲ್ಲಿದ್ದವು. ಆದರೆ ಆಗಿನ ಪ್ರಧಾನಿ ನೆಹರು ಏಕಪಕ್ಷೀಯ ಕದನ ವಿರಾಮವನ್ನು ಘೋಷಿಸಿದರು. ನಿನ್ನೆ ಕಾಂಗ್ರೆಸ್ ನಾಯಕರು ನಮ್ಮ ಬಳಿ ಪಾಕಿಸ್ತಾನದ ಜೊತೆ ಯಾಕೆ ಯುದ್ಧ ಮಾಡಲಿಲ್ಲ, ಕದನವಿರಾಮ ಘೋಷಿಸಲು ಕಾರಣವೇನು ಎಂಬ ಪ್ರಶ್ನೆ ಕೇಳಿದರು. ಇಡೀ ದೇಶಕ್ಕೆ ಗೊತ್ತಿರುವ ಸಂಗತಿಯೇನೆಂದರೆ ಇಂದು, ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಅಸ್ತಿತ್ವದಲ್ಲಿರುವುದಕ್ಕೆ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರೇ ಕಾರಣ. 1960ರಲ್ಲಿ ಅವರು ಸಿಂಧೂ ನೀರಿನ ಶೇ.80ರಷ್ಟನ್ನು ಪಾಕಿಸ್ತಾನಕ್ಕೆ ನೀಡಿದರು. 1971ರಲ್ಲಿ ಶಿಮ್ಲಾ ಒಪ್ಪಂದದ ಸಮಯದಲ್ಲಿ ಅವರು ಪಿಒಕೆಯನ್ನು ಮರೆತರು. ಆಗ ಅವರು ಪಿಒಕೆಯನ್ನು ವಶಪಡಿಸಿಕೊಂಡಿದ್ದರೆ ಈಗ ನಾವು ಅಲ್ಲಿನ ಶಿಬಿರಗಳ ಮೇಲೆ ದಾಳಿ ಮಾಡಬೇಕಾಗಿರಲಿಲ್ಲ ಎಂದು ಕಾಂಗ್ರೆಸ್ ನಾಯಕರ ಬೆವರಿಳಿಸಿದರು.

ಪಹಲ್ಗಾಮ್ ದಾಳಿಯ ಉಗ್ರರ ಹತ್ಯೆ: ಆಪರೇಷನ್ ಮಹಾದೇವ್ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆ, ಸಿಆರ್‌ಪಿಎಫ್ ಮತ್ತು ಜಮ್ಮು ಕಾಶ್ಮೀರದ ಪೊಲೀಸರು ಪಹಲ್ಗಾಮ್ ಭಯೋ ತ್ಪಾದಕ ದಾಳಿಯಲ್ಲಿ ಭಾಗಿಯಾಗಿದ್ದ ಮೂವರು ಭಯೋತ್ಪಾದಕರಾದ ಸುಲೇಮಾನ್, ಅಫ್ಘಾನ್, ಜಿಬ್ರಾನ್‌ನನ್ನು ತುಟಸ್ಥಗೊಳಿಸಿದ್ದಾರೆ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಪಹಲ್ಗಾಮ್ ದಾಳಿಯ ಉಗ್ರರ ಹತ್ಯೆಯ ವಿಷಯ ಕೇಳಿ ವಿರೋಧ ಪಕ್ಷದವರು ಸಂತೋಷಪಡಬಹುದು ಎಂದು ಕೊಂಡಿದ್ದೆ. ಆದರೆ, ಅವರಿಗೆ ಯಾಕೋ ಖುಷಿ ಆದಂತಿಲ್ಲ' ಎಂದು ಕುಹಕವಾಡಿದರು.

ಎನ್‌ಕೌಂಟರ್ ಸ್ಪೆಷಲಿಸ್ಟ್ ದಯಾನಾಯಕ್ ಈಗ ಎಸಿಪಿ



ಮುಂಬೈ: 'ಎನ್‌ಕೌಂಟರ್ ಸ್ಪೆಷಲಿಸ್ಟ್' ಎಂದೇ ಹೆಸರಾದ ಹಿರಿಯ ಪೊಲೀಸ್ ಅಧಿಕಾರಿ ದಯಾನಾಯಕ್ ಅವರಿಗೆ ಸಹಾಯಕ ಪೊಲೀಸ್ ಆಯುಕ್ತರಾಗಿ(ಎಸಿಪಿ) ಬಡ್ತಿ ನೀಡಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಮಹಾರಾಷ್ಟ್ರ ಗೃಹ ಇಲಾಖೆಯ ಆದೇಶದ ಮೇರೆಗೆ ದಯಾನಾಯಕ್ ಅವರ ಜತೆಗೆ ಹಿರಿಯ ಇನ್‌ಸ್ಪೆಕ್ಟರ್‌ಗಳಾದ ಜೀವನ್ ಖರಾಟ್, ದೀಪಕ್ ದಳವಿ ಹಾಗೂ ಪಾಂಡುರಂಗ ಪವಾರ್ ಅವರಿಗೂ ಎಸಿಪಿ ಹುದ್ದೆಗೆ ಬಡ್ತಿ ನೀಡಲಾಗಿದೆ.

1995ರಲ್ಲಿ ಮುಂಬೈ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡಿರುವ ನಾಯಕ್, ಪ್ರಸಕ್ತ ಬಾಂದ್ರಾದ ಅಪರಾಧ ತನಿಖಾ ವಿಭಾಗದಲ್ಲಿ (ಕ್ರೈಂ ಬ್ರಾಂಚ್) ಕಾರ್ಯನಿರ್ವಹಿಸುತ್ತಿದ್ದಾರೆ. 2021ರಲ್ಲಿ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದಲ್ಲಿಯೂ(ಎಟಿಎಸ್) ನಾಯಕ್ ಸೇವೆ ಸಲ್ಲಿಸಿದ್ದರು.

ರಾಜ್ಯಸಭೆಯಲ್ಲಿ ಖರ್ಗೆ ಕ್ಷಮೆ ಯಾಚಿಸಿದ ಜೆಪಿ ನಡ್ಡಾ!



ನವದೆಹಲಿ: ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಸದನದ ನಾಯಕ ಜೆ.ಪಿ. ನಡ್ಡಾ ಅವರು ಆಕ್ಷೇಪಾರ್ಹ ಹೇಳಿಕೆ ನೀಡಿದರು. ಇದು ವಿರೋಧ ಪಕ್ಷದ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ತೀವ್ರ ವಾಗ್ವಾದಕ್ಕೆ ಕಾರಣವಾಯಿತು. ತೀವ್ರ ಕೋಲಾಹಲದ ನಂತರ ಕೇಂದ್ರ ಸಚಿವ ಜೆಪಿ ನಡ್ಡಾ ಅವರು ತಮ್ಮ ಹೇಳಿಕೆ ವಾಪಸ್ ಪಡೆದು ಖರ್ಗೆ ಕ್ಷಮೆ ಯಾಚಿಸಿದರು.


ಆಪರೇಷನ್ ಸಿಂಧೂರ್ ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಕುರಿತ ಚರ್ಚೆಯ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಒಂದು ಗಂಟೆಗೂ ಹೆಚ್ಚು ಕಾಲ ಮಾತನಾಡಿದರು. ಈ ವೇಳೆ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನಡ್ಡಾ ಅವರು, ಎದ್ದುನಿಂತು, ಖರ್ಗೆ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ ಎಂದು ಹೇಳಿಕೆ ನೀಡಿದರು.

ನಡ್ಡಾ ಹೇಳಿಕೆಯಿಂದ ಆಕ್ರೋಶಗೊಂಡ ಪ್ರತಿಪಕ್ಷಗಳು ಖರ್ಗೆಯವರಂಥ ಹಿರಿಯರಿಗೆ ಅಂಥ ಪದ ಬಳಸಬಾರದು. ಕೂಡಲೇ ಅವರು ತಮ್ಮ ಹೇಳಿಕೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ವಿಪಕ್ಷಗಳೆಲ್ಲವೂ ಪಕ್ಷಭೇದ ಮರೆದು ಖರ್ಗೆಯವರ ಬೆಂಬಲಕ್ಕೆ ನಿಂತವು. ಇದರಿಂದ ಎಚ್ಚೆತ್ತ ನಡ್ಡಾ ಅವರು, ನಾನು ಬಳಸಿದ ಪದಗಳನ್ನು ಹಿಂದಕ್ಕೆ ಪಡೆಯುತ್ತೇನೆ. ಮಾತಿನ ಭರದಲ್ಲಿ ಹಾಗೆ ಹೇಳಿದ್ದಷ್ಟೇ. ವೈಯಕ್ತಿಕವಾಗಿ ನಾನು ಖರ್ಗೆಯವರನ್ನು ಗೌರವಿಸುತ್ತೇನೆ. ನನ್ನ ದುಡುಕಿಗಾಗಿ ಖರ್ಗೆಯವರಲ್ಲಿ ನಾನು ಕ್ಷಮೆ ಕೋರುತ್ತೇನೆ ಎಂದು ನಡ್ಡಾ ಹೇಳಿದರು. ಆಗ ವಿವಾದ ತಣ್ಣಗಾಯಿತು.

2015 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಅನಿರೀಕ್ಷಿತ ಪಾಕಿಸ್ತಾನ ಭೇಟಿಯನ್ನು ಕಾಂಗ್ರೆಸ್ ಅಧ್ಯಕ್ಷರು ಟೀಕಿಸಿದರು ಮತ್ತು ವಿದೇಶಾಂಗ ನೀತಿಯು 'ಈವೆಂಟ್–ಬಾಜಿ' ಅಲ್ಲ ಎಂದು ಹೇಳಿದರು. ಅಲ್ಲದೆ ಪಾಕಿಸ್ತಾನ ವಿಚಾರದಲ್ಲಿ ಸರ್ಕಾರ ಸರಿಯಾದ ನೀತಿಯನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ರಾಜಕಾರಣಕ್ಕೆ ಮಲ್ಲಿಕಾರ್ಜುನ ಖರ್ಗೆ ಬಂದರೆ ಸ್ವಾಗತ–ಸುಸ್ವಾಗತ!

● ಗೃಹ ಸಚಿವ ಡಾ. ಪರಮೇಶ್ವರ್ ಆಹ್ವಾನ ● ಯಾವುದೇ ಅಧಿಕಾರ ಪಡೆಯಲು ಅವರು ಅರ್ಹರು



ಬೆಂಗಳೂರು, ಜು.29(ಕೆಎಂಶಿ)–ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯ ರಾಜಕಾರಣಕ್ಕೆ ಬರುವುದರಲ್ಲಿ ತಪ್ಪೇನಿಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ. ಸೆಪ್ಟೆಂಬರ್–ನವೆಂಬರ್‌ನಲ್ಲಿ ನಾಯಕತ್ವ ಬದಲಾವಣೆ ಆಗುತ್ತದೆ ಎಂಬ ದಟ್ಟ ವದಂತಿ ನಡುವೆ ರಾಜ್ಯ ರಾಜಕಾರಣಕ್ಕೆ ಬರುವಂತೆ ಡಾ. ಪರಮೇಶ್ವರ್ ಪರೋಕ್ಷ ಆಹ್ವಾನ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಖರ್ಗೆ ಕಾಂಗ್ರೆಸ್ ಕಟ್ಟಾಳು, ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅವರು ರಾಜ್ಯದಲ್ಲಿ ಪಕ್ಷ ಸಂಘಟಿಸಿ, ರಾಷ್ಟ್ರ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಅವರಿಗೆ ಕರ್ನಾಟಕದಲ್ಲಿ ದಕ್ಕಬೇಕಾದ ಉನ್ನತ ಹುದ್ದೆ ಎರಡು–ಮೂರು ಬಾರಿ ಕೈತಪ್ಪಿದೆ.

ಇದನ್ನು ಗಮನದಲ್ಲಿಟ್ಟುಕೊಂಡೇ ಪಕ್ಷಕ್ಕಾಗಿ ತ್ಯಾಗ ಮಾಡಿದ್ದೇನೆ ಎಂಬ ಮಾತನ್ನು ಆಡಿದ್ದಾರೆ. ಕಾಂಗ್ರೆಸ್ ಆಡಳಿತವಿರುವ ಯಾವುದೇ ರಾಜ್ಯದಲ್ಲಿನ ನಾಯಕತ್ವ ಬದಲಾವಣೆಯ ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಇಂತಹ ಸ್ಥಾನದಲ್ಲಿರುವ ಅವರು ರಾಜ್ಯ ರಾಜಕಾರಣಕ್ಕೆ ಬಂದರೆ ನಮ್ಮ ಯಾರದೇ ಅಭ್ಯಂತರ ಇಲ್ಲ. ಅವರು ಎಲ್ಲಾ ಹುದ್ದೆ ಪಡೆಯುವಷ್ಟು ಸಮರ್ಥರಿದ್ದಾರೆ ಎಂದರು.

ಎಐಸಿಸಿ ಅಧ್ಯಕ್ಷರು ಪಕ್ಷ ಸಂಘಟನೆ ಹೊರತುಪಡಿಸಿ ಮತ್ತೇನು ಹೇಳಲು ಸಾಧ್ಯ. ಸಭೆ ನಡೆಸಲು ಸೂಚನೆ ಕೊಟ್ಟಿದ್ದರಲ್ಲಿ ತಪ್ಪೇನು ಇಲ್ಲ. ಚುನಾವಣೆ ವೇಳೆ ಜನರಿಗೆ ಭರವಸೆಗಳನ್ನು ಕೊಟ್ಟಿದ್ದೇವೆ, ಅದೆಲ್ಲ ರೆಗ್ಯೂಲೇಟ್ ಮಾಡಬೇಕಲ್ಲ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಿರಿಯ ಮುಖಂಡರು, ಅವರ ಹೇಳಿಕೆಗೆ ಟೀಕೆ ಸರಿಯಲ್ಲ, 50 ವರ್ಷದ ಸುದೀರ್ಘ ರಾಜಕಾರಣದ ಅನುಭವ ಇದೆ ಎಂದರು.


ರಮ್ಯಾ ದೂರನ್ನು ಗಂಭೀರವಾಗಿ ಪರಿಗಣಿಸುತ್ತೇವೆ: ನಟಿ ರಮ್ಯಾ ದೂರಿನ ವಿಚಾರ ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇಂತಹ ಘಟನೆಗಳು ಮುಂದೆ ಆಗಬಾರದು. ಇವತ್ತು ಅವರಿಗೆ ಆಗಿರುವುದು, ನಾಳೆ ಬೇರೆಯವರಿಗೂ ಆಗಬಹುದು. ಇಂತಹುದಕ್ಕೆ ಕಡಿವಾಣ ಹಾಕಬೇಕಿದೆ. ಬೆಂಗಳೂರು ನಗರ ಪೊಲೀಸ್ ಆಯುಕ್ತರು ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತಾರೆ. ನಾನೂ ಕಮಿಷನರ್‌ಗೆ ಸೂಚನೆ ಕೊಡುತ್ತೇನೆ ಎಂದರು.

ದಯಾನಂದ್ ಮತ್ತೆ ಕಮೀಷ್ನರ್ ಮಾಡಲ್ಲ: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಕುರಿತು ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ವರದಿ ಬಗ್ಗೆ ಸಂಪುಟದಲ್ಲಿ ಚರ್ಚೆ ಆಗಿದೆ, ಪೊಲೀಸ್ ಅಧಿಕಾರಿಗಳ ಅಮಾನತು ಹಿಂಪಡೆದು ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ.

ಒಬ್ಬ ಅಧಿಕಾರಿ ಅಮಾನತು ರದ್ದತಿಗೆ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಆದೇಶಿಸಿದೆ, ಇತರೆ ಅಧಿಕಾರಿಗಳ ಕುರಿತು ಆದೇಶ ವಾಪಸ್‌ಗೆ ಸಿಎಟಿ ನಿರ್ದೇಶನ ನೀಡಿದರೆ ಪರಿಗಣಿಸಲಾಗುವುದು, ಇದು ಹಿನ್ನಡೆ ಹೇಗಾಗುತ್ತದೆ. ಬಿ.ದಯಾನಂದ್‌ಗೆ ಮತ್ತೆ ನಗರ ಪೊಲೀಸ್ ಆಯುಕ್ತರ ಹುದ್ದೆ ನೀಡುವುದಿಲ್ಲ. ಸೇವಾ ಹಿರಿತನಕ್ಕೆ ಸಮಾನ ಹುದ್ದೆ ನೀಡಲಾಗುತ್ತದೆ ಎಂದರು.

ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟಕ್ಕೆ ಕ್ರಮ: ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುವವರ ಮೇಲೆ ಕೇಸ್ ದಾಖಲಿಸುವಂತೆ ಸೂಚಿಸಲಾಗಿದೆ. ಧರ್ಮಸ್ಥಳ ಪ್ರದೇಶದಲ್ಲಿ ನಿಗೂಢ ಸಾವು ಘಟನೆಗಳ ಕುರಿತು ಎಸ್‌ಐಟಿ ತನಿಖೆ ಮುಂದುವರೆದಿದೆ, ತನಿಖೆ ಮಧ್ಯದಲ್ಲಿ ಹೇಳಿಕೆ ಕೊಡಲು ಆಗುವುದಿಲ್ಲ ಎಂದರು.

ಮಲ್ಲಿಕಾರ್ಜುನ ಖರ್ಗೆಗೆ ಸಿಎಂ ಆಗೋ ಅರ್ಹತೆ ಇತ್ತು



ಬೆಂಗಳೂರು, ಜು.29– ಮಲ್ಲಿಕಾರ್ಜುನ ಖರ್ಗೆಗೆ ಸಿಎಂ ಆಗುವ ಅರ್ಹತೆ ಇತ್ತು. ಆದರೆ ಆಗಲಿಲ್ಲ. ಆದರೆ ಈಗ ಸಿಎಂ ಸ್ಥಾನಕ್ಕಿಂತ ದೊಡ್ಡ ಸ್ಥಾನವಾದ ಎಐಸಿಸಿ ಅಧ್ಯಕ್ಷ ಸ್ಥಾನದಲ್ಲಿ ಇದ್ದಾರೆ ಎಂದು ಮಾಜಿ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದ್ದಾರೆ.


ಸಿಎಂ ಸ್ಥಾನ ತಪ್ಪಿದ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಜೊತೆ ನಾವು ಕೆಲಸ ಮಾಡಿದ್ದೇವೆ. ಧರ್ಮಸಿಂಗ್ ಹಾಗೂ ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಖರ್ಗೆ ಅವರು ಸಚಿವರಿದ್ದರು. ಖರ್ಗೆಯವರಿಗೆ ಸಿಎಂ ಆಗುವ ಎಲ್ಲಾ ಅರ್ಹತೆ ಇತ್ತು. ಆ ಸಮಯದಲ್ಲಿ ಹೈಕಮಾಂಡ್ ನಿರ್ಧಾರ ಮಾಡಿ ಎಸ್.ಎಂ ಕೃಷ್ಣ ಅವರನ್ನ ಸಿಎಂ ಮಾಡಿತ್ತು. ಅದನ್ನ ನಾವೆಲ್ಲಾ ಒಪ್ಪಿಕೊಂಡಿದ್ದೆವು ಎಂದಿದ್ದಾರೆ.

ಖರ್ಗೆ ಅವರು ಇವತ್ತು ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿದ್ದಾರೆ. ಸಿಎಂ ಆಗುವ ಎಲ್ಲಾ ಅರ್ಹತೆ ಅವರಿಗೆ ಇದೆ. ಅವರಿಗೆ ಅದಕ್ಕಿಂತ ಹೆಚ್ಚಿನ ಸ್ಥಾನ ಸಿಕ್ಕಿದೆ. ಅದಕ್ಕೆ ನಮಗೆಲ್ಲಾ ಹಾಗೂ ನಾಡಿಗೂ ಅಭಿಮಾನ ಇದೆ. ನಮ್ಮ ದೃಷ್ಟಿಯಲ್ಲಿ ರಾಷ್ಟ್ರ ಅಧ್ಯಕ್ಷ ಎಂದರೆ ಸಿಎಂಗಿಂತ ದೊಡ್ಡ ಸ್ಥಾನ. ಅವರ ಮಾತನ್ನ ನಮ್ಮ ಸಿಎಂ ಕೇಳಬೇಕು. ತೆಲಂಗಾಣ ಸಿಎಂ ಕೂಡಾ ಕೇಳಬೇಕಾಗುತ್ತದೆ. ಅವರಿಗೆ ಅಂತಹ ಗೌರವ ಸ್ಥಾನ ಇದೆ ಎಂದು ಹೇಳಿದ್ದಾರೆ.

ಖರ್ಗೆ ಅವರು ಎಲ್ಲಿಯೂ ಕೂಡ ಸಿಎಂ ಆಗ್ತೀನಿ ಎಂದು ಹೇಳಿಲ್ಲ. ಅವರಿಗೆ ಅವಕಾಶ ಮಾತ್ರ ಇರಲಿಲ್ಲ. ನನಗೂ ಸಿಎಂ ಆಗುವ ಅರ್ಹತೆ ಇತ್ತು. ಆದರೆ ಅವಕಾಶ ಸಿಕ್ಕಿಲ್ಲ. ಏನು ಮಾಡೋದು ಈಗ ಅಂತ ಹೇಳಿದ್ದಾರೆ. ಅವರಿಗೆ ಅವಕಾಶ ಇದ್ದಿದ್ದು ನಿಜ, ಅರ್ಹತೆ ಇದ್ದಿದ್ದು ನಿಜ. ಆದರೆ ಅವರು ಅಧಿಕಾರದ ಹಿಂದೆ ಬಿದ್ದವರಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಿಎಂ ಬದಲಾವಣೆ ಬಗ್ಗೆ ಹೈಕಮಾಂಡ್ ಸ್ಪಷ್ಟ ನಿಲುವು ನೀಡದ ವಿಚಾರವಾಗಿ ಮಾತನಾಡಿದ ಅವರು, ಹೈಕಮಾಂಡ್ ಈಗಾಗಲೇ ಹೇಳಿದೆ. ಕಾಂಗ್ರೆಸ್ ಪಕ್ಷ ಸಭೆ ಮಾಡಿ ಸಿದ್ದರಾಮಯ್ಯ ಅವರನ್ನ ಸಿಎಂ ಆಗಿ ಆಯ್ಕೆ ಮಾಡಿದೆ. ಇದು ಒಂದು ವರ್ಷಕ್ಕೆ ಮಾತ್ರ ಅಲ್ಲ. ಐದು ವರ್ಷಕ್ಕೆ ಆಯ್ಕೆ ಮಾಡಿದೆ. ಬದಲಾವಣೆ ಮಾಡುವ ಅಧಿಕಾರ ಹೈಕಮಾಂಡ್‌ಗೆ ಇದೆ, ಇಲ್ಲ ಅಂತ ನಾನು ಹೇಳಲ್ಲ. ಸಿಎಂ ಬದಲಾವಣೆ ಆಗುವ ರೀತಿ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣ ಆಗಿಲ್ಲ. ಎಲ್ಲರು ಒಂದಾಗಿ ಕೆಲಸ ಮಾಡ್ತಿದ್ದೇವೆ. ಸರ್ಕಾರ ಒಳ್ಳೆಯ ಕೆಲಸ ಮಾಡ್ತಿದೆ. ಸಿಎಂ ಬದಲಾವಣೆ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಸಿಎಂ ಸ್ಥಾನಕ್ಕೆ ಖರ್ಗೆ 'ಮೋಸ್ಟ್ ಎಲಿಜಿಬಲ್ ಪರ್ಸನ್'



ಬೆಳಗಾವಿ: ಮುಖ್ಯಮಂತ್ರಿ ಸ್ಥಾನಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅರ್ಹ ವ್ಯಕ್ತಿ ಎಂದು ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯ ಮಂತ್ರಿ ಆಗುವ ಅವಕಾಶ ಸಿಗಲಿಲ್ಲ ಎಂದು ಖರ್ಗೆಯವರು ಬೇರೆಯವರಿಗೆ ಉದಾಹರಣೆ ನೀಡಲು ಹೇಳಿದ್ದಾರೆ. ಇಂತಹ ಅವಕಾಶ ತಪ್ಪಿದರೂ ನಾನು ಎಐಸಿಸಿ ಅಧ್ಯಕ್ಷನಾಗಿದ್ದೇನೆ ಎಂಬ ಅರ್ಥದಲ್ಲಿ ಹೇಳಿದ್ದಾರೆ. ಅದನ್ನು ಯಾವ ರೀತಿಯಲ್ಲಿ ಬೇಕಾದರೂ ಅರ್ಥೈಸಿಕೊಳ್ಳಬಹುದು. ನನ್ನ ಪ್ರಕಾರ, ಶ್ರಮಕ್ಕೆ ಪ್ರತಿಫಲ ಸಿಕ್ಕಿದೆ ಎನ್ನುವ ರೀತಿಯಲ್ಲಿ ಖರ್ಗೆ ಸಾಹೇಬ್ರು ಹೇಳಿದ್ದು ಎಂದು ಹೇಳಿದರು.

ಮುಖ್ಯಮಂತ್ರಿ ಹುದ್ದೆಗೆ ನನ್ನ ಪ್ರಕಾರ ಮಲ್ಲಿಕಾರ್ಜುನ ಖರ್ಗೆಯವರು ಅತ್ಯಂತ ಅರ್ಹ ವ್ಯಕ್ತಿ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಖರ್ಗೆ ಸಾಹೇಬ್ರು ನಡೆದುಕೊಂಡು ಬಂದಂತಹ ದಾರಿ, ಅವರು ಪಕ್ಷಕ್ಕೆ ತೋರಿಸಿರುವ ನಿಷ್ಠೆ, ಇಡೀ ಭಾರತ ದೇಶದಲ್ಲಿ ಅವರಂತಹ ಇನ್ನೋರ್ವ ವ್ಯಕ್ತಿ ಸಿಗಲಾರರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನೋಡಿ ಮಕ್ಕಳೇ, ನಿಮ್ಮ ಕ್ಲಾಸಲ್ಲಿ ಇರೋ ಎಲ್ಲಾ ಹುಡುಗಿಯರನ್ನು ಸಿಸ್ಟರ್ ಅನ್ನಬೇಕು...

ಗುಂಡ : ಅಬ್ಬಾ! ನಾನು ಬಚಾವ್ ಆದೆ...

ಮೇಷ್ಟ್ರು : ಯಾಕೋ?

ಗುಂಡ : ನನ್ನ ಲವರ್ ಪಕ್ಕದ ಕ್ಲಾಸಲ್ಲಿ ಇರೋದು ಸರ್...

ಮೈಸೂರು ಮಿತ್ರ

ಬುಧವಾರ, 30 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೆಲವು ಜನರು ನಿಮ್ಮ ಜೀವನದಿಂದ ಬಿಟ್ಟು ಹೊರಟಿದ್ದಾರೆ ಅಂದರೆ ಅದು ನಿಮ್ಮ ಕಥೆಯ ಅಂತ್ಯವಲ್ಲ. ಅದು ನಿಮ್ಮ ಕಥೆಯಲ್ಲಿ ಅವರ ಭಾಗ ಅಂತ್ಯ ಎಂದರ್ಥ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಿನ್ನಲು, ಉಣ್ಣಲು ಇದ್ದರೆ ಯಾವತ್ತೂ ನೆಂಟರು.

ನಿಮ್ಮ ಪತ್ರಗಳು

■ ಕೆ.ಆರ್.ವೃತ್ತದಲ್ಲಿ ಅಪಾಯಕಾರಿ ಕಲ್ಲು !!



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಕೆ.ಆರ್.ವೃತ್ತಕ್ಕೆ ಸೇರಿದ ಹಾಗೆ ಒಂದು ಅಪಾಯಕಾರಿ ಕಲ್ಲು ಇದೆ. ಇದು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಕಡೆಯಿಂದ ಬಂದು ಕೆ.ಆರ್.ವೃತ್ತದ ಬಲಭಾಗ ಅಂದರೆ ಸಯ್ಯಾಜಿರಾವ್ ರಸ್ತೆಗೆ ತಿರುಗುವ ತಿರುವಿನಲ್ಲಿದೆ. ಎಷ್ಟೋ ವಾಹನ ಸವಾರರು ಇದನ್ನು ಗಮನಿಸಿಲ್ಲ. ವೃತ್ತದ ಕಲ್ಲಿಗೆ ಇದು ಸೇರಿಕೊಳ್ಳದೇ ಬೇರ್ಪಟ್ಟಿದೆ. ಆ ಕಲ್ಲಿಗೆ ಡಾಂಬರ್ ಬಣ್ಣ ಹೊಡೆದಿರುವುದರಿಂದ ಯಾರಿಗೂ ಇದರ ಅರಿವಾಗುವುದಿಲ್ಲ. ಇನ್ನೇನು ದಸರಾ ಸಮೀಪಿಸುತ್ತಿದೆ. ಮೊನ್ನೆ ಇದರ ಛಾಯಾ ಚಿತ್ರ ತೆಗೆಯಲು ಹೋದಾಗ ಒಂದು ಕೇರಳದ ಕಾರು ಬಂತು. ಕೂದಲೆಳೆ ಅಂತರದಿಂದ ಪಾರಾದೆ. ಅದೂ ಆ ಕಾರಿನ ಚಾಲಕ ಮೈನರ್. ಪಾಲಿಕೆಯವರು ಆದಷ್ಟು ಬೇಗ ಈ ಕಲ್ಲನ್ನು ಬೇರ್ಪಡಿಸಿ ಮುಂದಾಗುವ ಅನಾಹುತವನ್ನು ತಪ್ಪಿಸಬೇಕಿದೆ.

–ಆರ್.ಯಶಸ್ ಪ್ರಭು, ವಿಜಯನಗರ 1ನೇ ಹಂತ, ಮೈಸೂರು

■ ಪ್ರೊ. ಕೆ.ಎಸ್.ರಂಗಪ್ಪರಿಂದ ಮೈಸೂರು ವಿವಿಗೆ ಮತ್ತೊಂದು ಗರಿ

ಮಾನ್ಯರೆ,



ಖ್ಯಾತ ವಿಜ್ಞಾನಿ ಪ್ರೊ. ಕೆ.ಎಸ್.ರಂಗಪ್ಪ ಅವರು ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ (ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಇಂಡಿಯಾ) ಅತ್ಯುನ್ನತ ಗೌರವಕ್ಕೆ ಭಾಜನರಾಗಿರುವುದು ತುಂಬಾ ಶ್ಲಾಘನೀಯ. ನಿವೃತ್ತ ಪ್ರಾಧ್ಯಾಪಕರ ಜೀವಿತಾವಧಿಯ ಸಾಧನೆಗಳು ಹಾಗೂ ವೃತ್ತಿಜೀವನದಲ್ಲಿ ಮಹತ್ವದ ಸಂಶೋಧನಾ ಕೊಡುಗೆಗಳನ್ನು ಪರಿಗಣಿಸಿ ಪ್ರೊ ರಂಗಪ್ಪ ಅವರಿಗೆ ಈ ಮನ್ನಣೆ ದೊರಕಿರುವುದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಲಾದ ಶ್ರೇಷ್ಠ ಗೌರವ ಎಂದರೆ ಅತಿಶಯೋಕ್ತಿಯಲ್ಲ. ಈ ಗೌರವದಿಂದ ಪ್ರೊ ರಂಗಪ್ಪ ಅವರಿಗೆ ಮೂರು ವರ್ಷಗಳ ಕಾಲ ಸಂಶೋಧನೆ ನಡೆಸಲು ಅನುವು ಮಾಡಿಕೊಡುವುದರ ಮೂಲಕ ಉದಾರ ಅನುದಾನ ದೊರಕುವುದರಿಂದ ವಿಜ್ಞಾನದಲ್ಲಿ ಹೆಚ್ಚಿನ ಸಂಶೋಧನೆ ಮಾಡಲು ಉತ್ತೇಜನ ನೀಡಿರುವುದು ಸ್ವಾಗತಾರ್ಹ. ಪ್ರೊ ರಂಗಪ್ಪ ಅವರಿಗೆ ಈ ಗೌರವ ದೊರಕಿರುವುದರಿಂದ ಮೈಸೂರು ವಿವಿಯ ಇತಿಹಾಸದಲ್ಲಿ ಪ್ರಮುಖ ಸಾಧನೆಯಾಗಿದೆ ಎಂದರೆ ತಪ್ಪಾಗಲಾರದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ರಾಜಕೀಯ ಪ್ರೇರಿತ

ಮಾನ್ಯರೆ,

ಗ್ಯಾರಂಟಿ ಯೋಜನೆಗಳಿಂದಾಗಿ ಕರ್ನಾಟಕ ರಾಜ್ಯ ದಿವಾಳಿಯಾಗಿದೆ ಎಂಬ ವಿರೋಧ ಪಕ್ಷಗಳ ಆರೋಪಗಳ ನಡುವೆಯೇ ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯ 2024–25ನೇ ವಿತ್ತೀಯ ವರ್ಷದಲ್ಲಿ ದೇಶದ ಉಳಿದ ಎಲ್ಲಾ ರಾಜ್ಯಗಳನ್ನು ಮೀರಿಸಿದೆ ಎಂಬ ಅಂಶ ಲೋಕಸಭೆಯಲ್ಲಿ ಮಂಡಿಸಲಾಗಿರುವ ಕೇಂದ್ರ ಹಣಕಾಸು ಇಲಾಖೆಯ ಅಂಕಿ ಅಂಶಗಳು ಸ್ಪಷ್ಟಪಡಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ರಾಜ್ಯ ಸರ್ಕಾರದ ತಲಾ ಆದಾಯ ಒಟ್ಟಾರೆ ರಾಜ್ಯ ಆಂತರಿಕ ಉತ್ಪನ್ನವು (ಎನ್‌ಎಸ್‌ಡಿಪಿ) ರೂ.2,04,605.00 ಗೆ ತಲುಪಿದ್ದು, 2014–25ರಲ್ಲಿದ್ದ ರೂ 1,05,697 ಮೀರಿಸಿ, ಶೇ 93.6 ರಷ್ಟು ಬೆಳವಣಿಗೆ ಕಂಡಿದೆ. ಈ ರೀತಿ ರಾಜ್ಯದ ಜನರ ಆದಾಯವು ಗಣನೀಯವಾಗಿ ಏರಿಕೆ ಕಂಡಿರುವುದನ್ನು ಕೇಂದ್ರ ಸರ್ಕಾರದ ವಿತ್ತ ಸಚಿವಾಲಯವೇ ಹೇಳಿದೆ. ಕಳೆದ ಒಂದು ದಶಕದಲ್ಲಿ ರಾಜ್ಯದ ಆದಾಯವು ಬಹುತೇಕ ದ್ವಿಗುಣಗೊಂಡಿದೆಯೆಂದು ವಿತ್ತ ಸಚಿವಾಲಯ ತಿಳಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆರ್ಥಿಕ ಆರೋಗ್ಯದ ಬಗ್ಗೆ ವಿರೋಧ ಪಕ್ಷಗಳ ಟೀಕೆ–ಟಿಪ್ಪಣಿಗಳು ವಸ್ತುನಿಷ್ಠವಾಗಿರದೇ ರಾಜಕೀಯ ಪ್ರೇರಿತವಾಗಿವೆ ಎಂದು ಭಾವಿಸಬಹುದು.

–ಕೆ.ವಿ.ವಾಸು, ವಕೀಲರು, ವಿವೇಕಾನಂದ ನಗರ, ಮೈಸೂರು

■ ನಾಯಿಗಳ ಕಿರಿಕಿರಿ, ಮಲ ಮೂತ್ರಗಳಿಂದ ರಸ್ತೆಗಳನ್ನು ರಕ್ಷಿಸಿ



ಮಾನ್ಯರೆ,

ಮೈಸೂರಿನ ರಸ್ತೆಗಳು ಅದರಲ್ಲೂ ನಗರದ ಹೃದಯ ಭಾಗದಲ್ಲಿರುವ ಎನ್.ಎಸ್. ರಸ್ತೆಯ ಶ್ರೀ ಮಹದೇಶ್ವರ ದೇವಸ್ಥಾನದ ಮುಂಭಾಗದ ರಸ್ತೆಯು ವಾಯುವಿಹಾರ ಅಥವಾ ವಾಕಿಂಗ್ ನೆಪದಲ್ಲಿ ತಮ್ಮ ಜೊತೆಗೆ ಕರೆತರುವ ನಾಯಿಗಳ ಕಿರಿಕಿರಿಯೊಂದಿಗೆ ಅವುಗಳ ಮಲ ಮೂತ್ರಗಳಿಂದ ಸಾರ್ವಜನಿಕ ರಸ್ತೆಗಳು ಮಲಿನಗೊಂಡು ಜನಸಾಮಾನ್ಯರು ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಲ್ಲೇ ವಾಸಿಸುವಂತಾಗಿದೆ. ಅಲ್ಲದೆ ನಾಯಿಗಳು ಪಾದಚಾರಿಗಳು, ವಾಹನ ಸವಾರರಿಗೆ ಕಿರಿಕಿರಿ ಉಂಟು ಮಾಡುತ್ತಿವೆ. ಇದರಿಂದ ವಾಹನ ಸವಾರರು ಅಪಘಾತಕ್ಕೀಡಾಗುವ ಸಂಭವವಿರುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಎನ್. ಕುಮಾರ್, ಎನ್.ಕೆ. ಸ್ವಾಮಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭರವಸೆಯ ಹೊಂಗಿರಣ

ಜೀವನದಲ್ಲಿ ನಾವು ಕಂಗೆಡುವ ಹಲವು ಸಂದರ್ಭಗಳು ಬರುತ್ತವೆ. ಆಗ ಕೈ ಹಿಡಿಯುವುದು ಭರವಸೆಯೇ. ಅದರಿಂದಲೇ ಬದುಕನ್ನು ಮುಂದೆ ನಡೆಸಲು ಸಾಧ್ಯ. ಯಾರಿಗೂ ಸುಖವಾಗಲಿ, ದುಃಖವಾಗಲಿ ಶಾಶ್ವತವಲ್ಲ. ದುಃಖದ ಕಾರ್ಗತ್ತಲು ತುಂಬಿದ್ದರೂ ಮುಂದೆ ನೇಸರ ಉದಯಿಸುತ್ತಾನೆ ಎಂಬ ಭರವಸೆಯಿಂದ ನಾವು ಬದುಕುತ್ತೇವೆ. ಕಾಲವು ಈ ಭರವಸೆಯನ್ನು ನೀಡುತ್ತದೆ ಎನ್ನುತ್ತಾನೆ ಮುದ್ದುರಾಮ.

ಮಂಕು ಕವಿದಾಗೆದೆಗೆ ತುಂಬುವುದು ಭರವಸೆಯ
ತೂರುವುದು ರಶ್ಮಿಯನು ಕತ್ತಲೆಯ ನೆಲೆಗೆ.
ಬೋಳುಮರ ಅತ್ತಾಗ ತಳಿರ ದಯಪಾಲಿಪುದು
ಶಕ್ತಿದಾಯಕ ಕಾಲ ಮುದ್ದುರಾಮ.

ಕಷ್ಟಗಳು ಬಂದಾಗ ನಮ್ಮ ಬುದ್ಧಿಗೆ ಮಂಕು ಕವಿಯುತ್ತದೆ. ಆಗ ಕಾಲವೇ ನಮ್ಮ ಹೃದಯದಲ್ಲಿ ಭರವಸೆಯನ್ನು ತುಂಬುತ್ತದೆ. ಕತ್ತಲೆಯ ನೆಲೆಗೆ ಬೆಳಕಿನ ಕಿರಣಗಳನ್ನು ತೂರುತ್ತದೆ. ಮರ ಚಳಿಗಾಲದಲ್ಲಿ ಎಲೆ ಉದುರಿ ಬೋಳಾಗಿ ಅತ್ತಾಗ ಆ ಕಾಲವೇ ಅದಕ್ಕೆ ಚಿಗುರನ್ನು ದಯಪಾಲಿಸಿ 'ನೀನು ಮತ್ತೆ ಸೊಂಪಾಗಿ ಬೆಳೆದು ಎಲೆ–ಹೂವು–ಹಣ್ಣುಗಳನ್ನು ಹೊಂದಿ ಮೆರೆಯುವೆ ಎಂಬ ಭರವಸೆಯನ್ನು ನೀಡುತ್ತದೆ. ಕಾಲದ ಮಹಿಮೆ ಅಂತಹುದು. ಕಾಲ ಶಕ್ತಿದಾಯಕ ಎಂಬುದು ಕವಿವಾಣಿ.

ಶಕ್ತಿಯಿದ್ದವರೆಲ್ಲರೂ ನೊಂದ ಹೃದಯಗಳಿಗೆ ಭರವಸೆಯನ್ನು ತುಂಬಬೇಕು. ಇಲ್ಲದಿದ್ದರೆ ಬದುಕು ದುಃಖದ ಮಡುವಾಗುತ್ತದೆ. ಈ ಬಗೆಗೆ ಮುದ್ದುರಾಮನ ಮಾತು–

ನೊಂದ ಒಂದೊಂದೆಡೆಗೆ ತುಂಬು ಆಶಾಭಾವ
ಭರವಸೆಯ ಸಸಿ ಚಿಗುರಿ ಹೂ ಬಿಡುತಲಿರಲಿ.
ದೀಪ ಬೆಳಗುತಲಿರಲಿ ಹೊರದೂಡಿ ಕತ್ತಲೆಯ
ಮಿಗಿಲು ಆಶಾವಾದ ಮುದ್ದುರಾಮ ॥

ಸರ್ವಂ ಕ್ಷಣಿಕಂ ಕ್ಷಣಿಕಂ, ಸರ್ವಂ ದುಃಖಂ ದುಃಖಂ ಎಂಬ ನಿರಾಶಾವಾದವನ್ನು ಎಲ್ಲರೂ ಅವಲಂಬಿಸಿ ತಲೆಯ ಮೇಲೆ ಕೈಯಿಟ್ಟು ಕುಳಿತುಬಿಟ್ಟರೆ, ಎಲ್ಲರೂ ವಿರಾಗಿಗಳಾಗಿ ಕಾಷಾಯವನ್ನು ಧರಿಸಿ ಕರ್ಮತ್ಯಾಗ ಮಾಡಿದ್ದರೆ, ಈ ಜಗತ್ತಿನಲ್ಲಿ ಯಾವ ಪ್ರಗತಿಯೂ ಆಗುತ್ತಿರಲಿಲ್ಲ. ಯಾವ ಅನ್ವೇಷಣೆಯೂ ನಡೆಯುತ್ತಿರಲಿಲ್ಲ. ಲೋಕದ ಅಭಿವೃದ್ಧಿಗೆ ಕಾರಣವಾಗಿರುವುದು ಆಶಾವಾದ. ರೋಗ ರುಜಿನಗಳಿಂದ, ಕಷ್ಟ ನಷ್ಟಗಳಿಂದ ನೊಂದವರ ಎದೆಗಳಲ್ಲಿ ಭರವಸೆಯ ನದಿ ಉಕ್ಕುವಂತೆ ಜ್ಞಾನಿಯು ಮಾಡಬೇಕು. ಭರವಸೆಯ ಗಿಡ ಚಿಗುರಿ, ಹೂಬಿಟ್ಟು ಹಣ್ಣುಗಳನ್ನು ಹೊತ್ತು ನಲಿಯಬೇಕು. ಎದೆಯಲ್ಲಿ ಜ್ಞಾನ ದೀಪವು ಬೆಳಗಿ ಕತ್ತಲೆಯನ್ನು ಹೊರಗೆ ದೂಡಬೇಕು. ಆಗಲೇ ಬಾಳಿಗೆ ಅರ್ಥ, ಬದುಕಿಗೆ ಸಾರ್ಥಕತೆ. ನಿರಾಶಾವಾದ ಸೋಮಾರಿತನ ತರುತ್ತದೆ. ಆಶಾವಾದ ಚಟುವಟಿಕೆ ಮೂಡಿಸುತ್ತದೆ. ಭರವಸೆಯನ್ನು ತರುತ್ತದೆ. ಅದೇ ಮಿಗಿಲು. ಭರವಸೆಯನ್ನು ಮೂಡಿಸುವ ದಿಕ್ಕಿನಲ್ಲಿ ಮುದ್ದುರಾಮ ಒಂದು ಅದ್ಭುತ ಸುಂದರ ರೂಪಕವನ್ನು ಬಳಸಿದ್ದಾನೆ. ನಮ್ಮೆಲ್ಲರಿಗೂ ಪರಿಚಿತವಾದ ದಸರಾ ಹಬ್ಬದ ಜಂಬೂಸವಾರಿಯ ದರ್ಶನವನ್ನು ಮಾಡಿಸುತ್ತಾನೆ. ಈ ಪದ್ಯವನ್ನು ನೋಡಿರಿ–

ವಿಜಯದರಮನೆಯತ್ತ ಹೆಜ್ಜೆಯಿಡಬಯಸಿದರೆ
ಏರು ನೀ ವಿಶ್ವಾಸದಂಬಾರಿಯನ್ನು
ಪ್ರೀತಿಯಾದರೆ, ಆನೆ, ನೇಹವೇ ಮಾವುತನೊ
ಭರವಸೆಯೆ ನವರಾತ್ರಿ ಮುದ್ದುರಾಮ ॥

ಇಲ್ಲಿ ದಸರಾ ಜಂಬೂಸವಾರಿಯ ವಿಜಯದಶಮಿ, ಅರಮನೆ, ಅಂಬಾರಿ, ಆನೆ, ಮಾವುತ, ನವರಾತ್ರಿ–ಎಲ್ಲವೂ ಬಂದಿದೆ. ಸಾಧಕನು ವಿಜಯದ ಎಂದರೆ ಗೆಲುವಿನ, ಅರಮನೆಯ ಕಡೆಗೆ ಹೆಜ್ಜೆಯನ್ನು ಇಡಲು ಇಷ್ಟಪಟ್ಟರೆ, ಅವನು ವಿಶ್ವಾಸ (ನಂಬಿಕೆ) ಎಂಬ ಅಂಬಾರಿಯನ್ನೇರಬೇಕು. ವಿಶ್ವಾಸ ಎಂದರೆ ಶ್ರದ್ಧೆ. ಆತ್ಮವಿಶ್ವಾಸ (Self confidence) ಎಂಬುದು ಇಲ್ಲದಿದ್ದರೆ, ಜೀವನದಲ್ಲಿ ಯಾವ ಗಮ್ಯವನ್ನೂ ವ್ಯಕ್ತಿಯು ತಲುಪಲಾರನು. ವಿಶ್ವಾಸವೆಂಬ ಅಂಬಾರಿಯನ್ನು ಏರಿ ಸಾಧಕನು ಅದರಲ್ಲಿ ಕುಳಿತುಕೊಳ್ಳಬೇಕು. ಆ ಅಂಬಾರಿ ಆನೆಯ ಮೇಲಿದೆ? ಹಾಗಾದರೆ ಇಲ್ಲಿ ಆನೆ ಯಾವುದು? ಪ್ರೀತಿಯೇ ಇಲ್ಲಿ ಆನೆ. ಆನೆಯನ್ನು ಮುನ್ನಡೆಸುತ್ತಿರುವ ಮಾವುತನು ಯಾರು? ನೇಹವೇ ಮಾವುತ. ನೇಹ ಎಂದರೆ ಸ್ನೇಹ.

ಸ್ನೇಹವೆಂಬ ಮಾವುತನು ನಡೆಸುವ, ವಿಶ್ವಾಸವೆಂಬ ಅಂಬಾರಿಯನ್ನು ಹೊತ್ತಿರುವ, ಪ್ರೀತಿಯೆಂಬ ಆನೆಯ ಮೇಲೆ ಕುಳಿತ ಸಾಧಕನು ವಿಜಯವೆಂಬ ಅರಮನೆಗೆ ಬಂದರೆ, ಭರವಸೆಯ ನವರಾತ್ರಿ ವೈಭವದಿಂದ ಜರುಗುತ್ತದೆ. ಇದೇ ಇಲ್ಲಿರುವ ಮಹಾರೂಪಕ. ಹೀಗೆ ಕೆ.ಸಿ. ಶಿವಪ್ಪನವರಲ್ಲದೆ ಬೇರೆ ಯಾರು ರೂಪಿಸಬಲ್ಲರು?

ಜೀವನದಲ್ಲಿ ಸಂಕಟದ ಎಷ್ಟೋ ಕ್ಷಣಗಳು ಬರುತ್ತವೆ. ಇನ್ನು ಯಾವ ದಾರಿಯೂ ಇಲ್ಲ, ಎಲ್ಲ ಮುಗಿಯಿತು ಎನಿಸುತ್ತದೆ. ನಾವು ನೆಚ್ಚಿಕೊಂಡಿದ್ದವರು ಮುಖ ಎತ್ತಲೋ ತಿರುಗಿಸಿ ಬಿಡುತ್ತಾರೆ. ಆದರೆ ಅಂತಹ ದುರ್ಭರ ಸನ್ನಿವೇಶದಲ್ಲೂ ಯಾರೋ ಪುಣ್ಯಾತ್ಮರು ಬಂದು ಸಂಕಟಗ್ರಸ್ತರಾದವರ ಕೈ ಹಿಡಿದೆತ್ತಿ ಕಾಪಾಡುತ್ತಾರೆ. ಅಂತಹ ಕ್ಷಣಗಳಲ್ಲಿ ಭರವಸೆಯೇ ಬೆಳಕು. ಈ ವಿಷಯವನ್ನು ಮುದ್ದುರಾಮನು ಹೇಳುವ ರೀತಿಯನ್ನು ನೋಡೋಣ.

ಇನ್ನೇನು ಈ ಬೆಳಕು ಆರಿತೆನುವಷ್ಟರಲಿ
ಎಣ್ಣೆ ಹುಯ್ವರು ಯಾರೊ! ದೀಪ ಬೆಳಗುವುದು.
ಎಣ್ಣೆ ಬತ್ತಿಯ ಸಂಗ ಭರವಸೆಯ ಸಂಕೇತ
ಬೆಳಕು ಬಾಳಿನ ವಿಜಯ ಮುದ್ದುರಾಮ॥

ದೀಪದ ಎಣ್ಣೆ ಮುಗಿಯಿತು. ಈ ಬೆಳಕು ಒಂದು ನಿಮಿಷದಲ್ಲೋ ಅರ್ಧ ನಿಮಿಷದಲ್ಲೋ ಆರಿ ಹೋಗುತ್ತದೆ. ನಾವು ಕತ್ತಲಿನಲ್ಲೇ ಇರಬೇಕಾಗುತ್ತದೆ ಎಂದು ಜನರು ಚಿಂತಿಸುತ್ತಿರುವಾಗ, ಯಾರೋ ಭಕ್ತರು ಓಡಿ ಬಂದು ಎಣ್ಣೆಯನ್ನು ದೀಪಕ್ಕೆ ಹಾಕುತ್ತಾರೆ. ದೀಪವು ಮತ್ತೆ ಬೆಳಗುತ್ತದೆ. ಇಲ್ಲಿ ಬತ್ತಿಗೆ ಎಣ್ಣೆಯ ಸಂಗ ದೊರೆಯುವುದು. ಬದುಕಿಗೆ ಭರವಸೆ ದೊರಕುವ ಸಂಕೇತ. ರೋಗಿಯ ಪ್ರಾಣ ಹೋಗೇ ಬಿಟ್ಟಿತೆಂದು ಚಿಂತಾಕ್ರಾಂತರಾಗಿರುವಾಗ ಯಾರೋ ಬಂದು ರಕ್ತವನ್ನು ಕೊಟ್ಟು ಪ್ರಾಣ ಉಳಿಸಿದ ಎಷ್ಟೋ ಘಟನೆಗಳು ಇವೆ. ಹಾಗೆ ಒದಗಿ ಬಂದ ಬೆಳಕು ಬಾಳಿನ ಗೆಲುವನ್ನು ಸಂಕೇತಿಸುತ್ತದೆ. ಮನುಷ್ಯನಲ್ಲಿ ಅಸ್ತ್ಯಾತ್ಮಕವಾದ ಚಿಂತನೆಗಳಿರಬೇಕು. ನಾಸ್ತ್ಯಾತ್ಮಕ ಚಿಂತನೆಗಳಲ್ಲ ಎಂಬುದು ಕೆ.ಸಿ. ಶಿವಪ್ಪನವರ ಅಚಲ ಸಿದ್ಧಾಂತ. ಅದನ್ನೇ ಮುಂದಿನ ಚೌಪದಿಯಲ್ಲೂ ನೋಡಬಹುದು –

ಕತ್ತಲೆಯ ಕಾಡಲ್ಲ ನಮ್ಮ ಬಾಳಿನ ಪಯಣ;
ದಣಿದ ಗಳಿಗೆಯಲಾರೊ ದಾರಿ ತೋರುವರು
ಸಾಗುತಿರುವಂತೆ ಇದೆ ದೂರದಲಿ ಚೆಂಬೆಳಕು
ಸೊಡರು ಭರವಸೆ ಕಾಂತಿ ಮುದ್ದುರಾಮ ॥

ನಮ್ಮ ಜೀವನ ಪ್ರಯಾಣ ಸದಾ ಕತ್ತಲಿನ ಕಾಡೇ ಆಗಿರದು. ನಾವು ದಣಿದ, ಬಳಲಿದ, ಸುಸ್ತಾಗಿ ಕುಳಿತ ಗಳಿಗೆಯಲ್ಲಿ ಯಾರೋ ದಾರಿಯನ್ನು ತೋರಿಸುವರು. ಆ ದಾರಿಯಲ್ಲಿ ಹೋದಾಗ ದೂರದಲ್ಲಿ ಚೆಂಬೆಳಕೋ ಹೊಂಬೆಳಕೋ ಸಾಗುತ್ತಿರುವುದು ಕಂಡು ಬರುತ್ತದೆ. ಸೊಡರಿನ, ಎಂದರೆ ಹಣತೆ ದೀಪದ ಕಾಂತಿ ನಮ್ಮಲ್ಲಿ ಭರವಸೆಯನ್ನು ಮೂಡಿಸುತ್ತದೆ. ಜಗತ್ತಿನಲ್ಲಿ ಕತ್ತಲೆಯ ಮೊತ್ತ ದೊಡ್ಡದಿರಬಹುದು. ಆದರೂ ಅಲ್ಲಲ್ಲಿ ದೀಪಗಳು ಬೆಳಕನ್ನು ಚೆಲ್ಲುತ್ತಿವೆ. ನೂರು ಜನ ಕಳ್ಳರಿರಬಹುದು. ಆದರೆ ಪ್ರಾಮಾಣಿಕರೂ ಇದ್ದಾರೆ. ಸಾವಿರ ಜನ ಮೂರ್ಖರು ನಮ್ಮ ಸುತ್ತಲೂ ಇರಬಹುದು. ಆದರೆ ಒಬ್ಬಿಬ್ಬರು ಗುರುಗಳೂ ಇದ್ದಾರೆ. ಆದ್ದರಿಂದ ನಿರಾಶರಾಗುವುದು ಬೇಡ. ಕತ್ತಲೆಯೊಂದು ಕಣ್ಣು ಮುಚ್ಚಿಕೊಳ್ಳುವುದು ಬೇಡ. ಕಣ್ಣು ತೆರೆದರೆ ದೂರದಲ್ಲಾದರೂ ಬೆಳಕಿನ ಕಿರಣಗಳು ಗೋಚರಿಸುತ್ತವೆ.

ಕಾಳಿದಾಸನು 'ನೀಚೈರ್ಗಚ್ಛತ್ಯುಪರಿಚದಶಾ ಚಕ್ರನೇಮಿಕ್ರಮೇಣ' ಎಂದು ಹೇಳಿದ್ದಾನೆ. ಚಕ್ರದ ಅಂಚಿನ ಭಾಗಗಳು ಕೆಲವು ಈಗ ಮೇಲೆ ಇವೆ. ಕೆಲವು ಕೆಳಗೆ ಇವೆ. ಅವು ಹಾಗೇ ಇರುವುದಿಲ್ಲ. ಮೇಲೆ ಇರುವ ಭಾಗ ಸ್ವಲ್ಪ ಕ್ಷಣಗಳಲ್ಲಿ ಕೆಳಗೆ ಬರುತ್ತದೆ. ಆಗ ಕೆಳಗಿರುವ ಭಾಗ ಮೇಲೆ ಹೋಗಿರುತ್ತದೆ. ಭಾರತದಲ್ಲಿ ಇರುಳಾಗಿದ್ದಾಗ ಅಮೇರಿಕೆಯಲ್ಲಿ ಹಗಲು. ಇದು ಹಾಗೇ ಇರುವುದಿಲ್ಲ. ಭಾರತದಲ್ಲಿ ಹಗಲಾಗುತ್ತದೆ, ಆಗ ಅಮೇರಿಕೆಯಲ್ಲಿ ಇರುಳು. ಬದಲಾವಣೆ ಅನಿವಾರ್ಯ. ಮುದ್ದುರಾಮ ಹೇಳಿದುದು–

ಚಳಿಗಾಲ ಮುಗಿದೊಡನೆ ಬೇಸಿಗೆಯ ಬಿಸಿಲಿರದೆ?
ರಾತ್ರಿ ಕಳೆದರೆ ಹಗಲು ಇದೆ ಧಾತ್ರಿಯಲ್ಲಿ
ಕತ್ತಲೊಂದೇ ಇರದು ಯಾರದೇ ಬಾಳಿನಲಿ
ಮೊಗದೋರು ಭರವಸೆಗೆ ಮುದ್ದುರಾಮ॥

ಚಳಿಗಾಲದಲ್ಲಿ ನಡುಗುವುದು ಸ್ವಾಭಾವಿಕ. ಅದಕ್ಕೆಂದು ಅಳಬಾರದು. ಅದು ಮುಗಿದ ಮೇಲೆ ಬೇಸಿಗೆ ಬರುವುದು ನಿಶ್ಚಿತ. ಆಗ ಬಿಸಿಲೂ ಬರುತ್ತದೆ. ರಾತ್ರಿ ಕಳೆದರೆ ಧಾತ್ರಿಯಲ್ಲ, ಎಂದರೆ ಭೂಮಿಯಲ್ಲಿ ಹಗಲೂ ಇದೆ. ಆದ್ದರಿಂದ ಗೋಣಗುವುದು ಬೇಡ. ಯಾರ ಬಾಳಿನಲ್ಲೂ ಕೇವಲ ಕತ್ತಲೆ ಇಲ್ಲ. ಬೆಳಕು ಬಂದೇ ಬರುತ್ತದೆ. ಭಿಕ್ಷಾಧಿಕಾರಿಗಳು ಲಕ್ಷಾಧಿಪತಿಗಳಾಗಿರುವುದನ್ನೂ ನಾವೇ ನೋಡುತ್ತಿದ್ದೇವೆ. ಆದ್ದರಿಂದ ಭರವಸೆಯನ್ನೆಂದೂ ಕಳೆದುಕೊಳ್ಳಬೇಡ, ಭರವಸೆಗೆ ವಿಮುಖನಾಗದೆ, ಅದಕ್ಕೆ ಮೊಗದೋರು, ಮುಖವನ್ನು ಆ ಕಡೆಗೇ ತಿರುಗಿಸು ಎಂದು ಮುದ್ದುರಾಮನ ಉಪದೇಶ.

ಈಚೆಗೆ ಭರವಸೆಯನ್ನು ಕಳೆದುಕೊಂಡವರು ಆತ್ಮಹತ್ಯೆ ಮಾಡಿಕೊಂಡು ಸಾಯುವುದು ಹೆಚ್ಚಾಗಿದೆ. ಅದು ತಪ್ಪಬೇಕು. ಸಾಂತ್ವನದ ನುಡಿ ಆತ್ಮಹತ್ಯೆಗಳನ್ನು ತಪ್ಪಿಸಬೇಕು.

ಯಾವುದೋ ಸಾಂತ್ವನದ ನುಡಿ ಸಾಕು ಜೀವನದಿ
ಆತ್ಮಹತ್ಯೆಯ ಭಾವ ಸುಳಿದ ಹೊತ್ತಿನಲಿ.
ಆ ನುಡಿಯ ಚಿಲುಮೆಯಲಿ ಸಾಹಸವೆ ಪುಟಿಯುವುದೊ
ಭರವಸೆಯೇ ಹೊಂಗಿರಣ ಮುದ್ದುರಾಮ ॥

ಸರಿಯಾದ ಒಂದು ಮಾತು ಪ್ರಾಣವನ್ನೇ ಉಳಿಸಬಹುದು. ಅದನ್ನು ನಾವು ಭರವಸೆಯನ್ನಾಗಿ ಸ್ವೀಕರಿಸಿ ಅದೇ ಕತ್ತಲೆಯನ್ನು ಆಚೆಗೆ ದೂಡುವ ಹೊಂಗಿರಣವೆಂದು ತಿಳಿಯಬೇಕೆಂದು ಮುದ್ದುರಾಮ ಆತ್ಮೀಯವಾಗಿ ಸೂಚಿಸಿದ್ದಾನೆ.

ಮತ್ತೊಮ್ಮೆ ಉಪರಾಷ್ಟ್ರಪತಿ ಆಯ್ಕೆ ಅನಿವಾರ್ಯತೆ



ಕೆ.ವಿ.ವಾಸು
ವಕೀಲರು ಮತ್ತು
ನೋಟರಿ ಮೈಸೂರು.
ಮೊ:9341731661

ಉಪ ರಾಷ್ಟ್ರಪತಿಗಳಾಗಿದ್ದ ಜಗದೀಪ್ ಧನಕರ್ ಆರೋಗ್ಯ ಸಮಸ್ಯೆ ಕಾರಣ ನೀಡಿ, ತಮ್ಮ ಹುದ್ದೆಗೆ ಜುಲೈ 21ರಂದು ರಾಜೀನಾಮೆ ಸಲ್ಲಿಸಿದ ಬೆನ್ನಲ್ಲೇ ದೇಶದ ಎರಡನೇ ಅತಿದೊಡ್ಡ ಸಾಂವಿಧಾನಿಕ ಹುದ್ದೆಯಾದ ಉಪ ರಾಷ್ಟ್ರಪತಿ ಹುದ್ದೆಗೆ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಸಿದ್ಧತೆ ನಡೆಸುತ್ತಿದೆ.



ಜಗದೀಪ್ ಧನಕರ್

ಈ ಹುದ್ದೆಗೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಬಿಹಾರದ ಮಾಜಿ ಮುಖ್ಯಮಂತ್ರಿ ದಿವಂಗತ ಕರ್ಪೂರಿ ಠಾಕೂರ್ ಅವರ ಪುತ್ರ ರಾಮ್‌ನಾಥ್ ಠಾಕೂರ್ ಅವರನ್ನು ನಿಲ್ಲಿಸುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಇವರ ಜೊತೆಗೆ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂದರ ರಾಜೇ, ಬಿಹಾರದ ರಾಜ್ಯಪಾಲ ಅರಿಫ್ ಮೊಹಮದ್ ಖಾನ್, ರಾಜ್ಯಸಭೆಯ ಉಪಾಧ್ಯಕ್ಷ ಹರಿವಂಶ್ ಮುಂತಾದವರ ಹೆಸರು ಸಹ ಕೇಳಿ ಬರುತ್ತಿದೆ. ವಿರೋಧ ಪಕ್ಷಗಳ ಪಾಳೆಯ ದಿಂದ ಇದುವರೆಗೂ ಯಾರ ಹೆಸರು ಕೂಡ ಪ್ರಸ್ತಾಪಿಸಲಾಗಿಲ್ಲ. ಈ ಹಿನ್ನೆಲೆಯಲ್ಲಿ ಉಪರಾಷ್ಟ್ರಪತಿ ಚುನಾವಣೆಯ ಅಖಾಡ ಸಜ್ಜಾಗಿದ್ದು, ಮುಂದಿನ ಉಪರಾಷ್ಟ್ರಪತಿ ಯಾರಾಗಬಹುದೆಂಬ ಕುತೂಹಲ ರಾಜಕೀಯ ವಲಯದಲ್ಲಿ ಕುತೂಹಲ ಹುಟ್ಟಿಸಿದೆ.

ಭಾರತದಲ್ಲಿ ಉಪರಾಷ್ಟ್ರಪತಿ ಹುದ್ದೆ ಇರಬೇಕೆಂದು ಸಂವಿಧಾನದ 63ನೇ ವಿಧಿ ತಿಳಿಸುತ್ತದೆ. ಉಪರಾಷ್ಟ್ರಪತಿಗಳನ್ನು ಉಪರಾಷ್ಟ್ರಾಧ್ಯಕ್ಷರು ಎಂದು ಸಹ ಕರೆಯಲಾಗುತ್ತದೆ. ರಾಷ್ಟ್ರದ "ವಾರಂಟ್ ಆಫ್ ಪ್ರಿಸೀಡೆನ್ಸ್" (Warrant of Precedence)ನಲ್ಲಿ ಅವರು 2ನೇ ಸ್ಥಾನ ಪಡೆದಿದ್ದು 3ನೇ ಮತ್ತು 4ನೇ ಸ್ಥಾನಗಳನ್ನು ಕ್ರಮವಾಗಿ ಪ್ರಧಾನ ಮಂತ್ರಿಗಳು ಹಾಗೂ ಲೋಕಸಭೆಯ ಸ್ಪೀಕರ್ ಪಡೆದಿದ್ದಾರೆ. ಉಪರಾಷ್ಟ್ರಪತಿಗಳ ಹುದ್ದೆ ರಾಷ್ಟ್ರಪತಿ ಹುದ್ದೆಯಷ್ಟು ಪ್ರಮುಖವಲ್ಲವಾದರೂ ಕೆಲವು ಸೀಮಿತ ಕಾರಣ ಮತ್ತು ಉದ್ದೇಶಗಳಿಗಾಗಿ ಈ ಹುದ್ದೆಗೆ ನಮ್ಮ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಂವಿಧಾನದ 66(3)ನೇ ವಿಧಿಯ ಪ್ರಕಾರ ಈ ಹುದ್ದೆಗೆ ಸ್ಪರ್ಧಿಸ ಬಯಸುವ ಅಭ್ಯರ್ಥಿ ಕೆಲವೊಂದು ಅರ್ಹತೆಗಳನ್ನು ಹೊಂದಿರಬೇಕು.

1. ಭಾರತದ ಪ್ರಜೆಯಾಗಿರಬೇಕು

2. 35 ವರ್ಷ ತುಂಬಿರಬೇಕು

3. ರಾಜ್ಯಸಭೆಗೆ ಆಯ್ಕೆಯಾಗಲು ಬೇಕಾದ ಅರ್ಹತೆ ಹೊಂದಿರಬೇಕು. ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ ಲಾಭದಾಯಕ ಹುದ್ದೆ ಹೊಂದಿರಬಾರದೆಂದು 66 ನೇ ವಿಧಿಯ 4ನೇ ಉಪವಿಧಿ ತಿಳಿಸುತ್ತದೆ. ಇಷ್ಟೇ ಅಲ್ಲದೆ, ಅಭ್ಯರ್ಥಿಯ ಹೆಸರನ್ನು ಕನಿಷ್ಠ ಸಂಸತ್ತಿನ 5 ಸದಸ್ಯರು ಸೂಚಿಸಿ, 5 ಸದಸ್ಯರು ಅನುಮೋದಿಸಬೇಕು.

66ನೇ ವಿಧಿಯ ಪ್ರಕಾರ, ಉಪ ರಾಷ್ಟ್ರಪತಿಗಳನ್ನು ಸಂಸತ್ತಿನ ಎರಡು ಸದನಗಳ ಎಲ್ಲಾ ಸದಸ್ಯರು ರಹಸ್ಯ ಮತದಾನದ ಮೂಲಕ ಏಕಮತವನ್ನು ವರ್ಗಾಯಿಸುವ ಪ್ರಮಾಣಾನುಗುಣ ಪದ್ಧತಿಗೆ ಅನುಗುಣವಾಗಿ ಚುನಾಯಿಸಬೇಕು. ಉಪರಾಷ್ಟ್ರಪತಿ ಚುನಾವಣೆಯಲ್ಲಿ ರಾಜ್ಯಗಳ ಶಾಸಕಾಂಗಗಳ ಸದಸ್ಯರು ಭಾಗವಹಿಸುವಂತಿಲ್ಲ. 67ನೇ ವಿಧಿಯ ಪ್ರಕಾರ, ಅಧಿಕಾರವನ್ನು ವಹಿಸಿಕೊಂಡ ದಿನದಿಂದ 5 ವರ್ಷಗಳ ಕಾಲ ಉಪರಾಷ್ಟ್ರಪತಿಗಳು ಅಧಿಕಾರದಲ್ಲಿ ಇರುತ್ತಾರೆ. ಅವಧಿ ಮುಗಿದರೂ, ಉತ್ತರಾಧಿಕಾರಿ ಅಧಿಕಾರಕ್ಕೆ ಬರುವವರೆಗೂ, ಅಧಿಕಾರದಲ್ಲಿ ಮುಂದುವರೆಯಬಹುದೆಂದು ಸಂವಿಧಾನದ 67ನೇ ವಿಧಿಯ (ಬಿ) ಉಪವಿಧಿ ತಿಳಿಸುತ್ತದೆ.

ಭಾರತದ ಉಪರಾಷ್ಟ್ರಪತಿಗಳಾಗಿದ್ದವರು

1. ಡಾ.ಎಸ್.ರಾಧಾಕೃಷ್ಣನ್– 1952ರಿಂದ 1962 (ಎರಡು ಅವಧಿ)
2. ಡಾ.ಜಾಕೀರ್ ಹುಸೇನ್– 1962ರಿಂದ 1967
3. ವಿ.ವಿ.ಗಿರಿ – 1967ರಿಂದ 1969 ರವರೆಗೆ
4. ಜಿ.ಎಸ್.ಪಾಠಕ್– 1969ರಿಂದ 1974ರವರೆಗೆ
5. ಬಿ.ಡಿ.ಜತ್ತಿ – 1974ರಿಂದ 1979ರವರೆಗೆ
6. ಎಂ.ಹಿದಾಯತ್ತುಲ್ಲಾ– 1979ಯಿಂದ ಆಗಸ್ಟ್ 30, 1984
7. ಆರ್.ವೆಂಕಟರಾಮನ್– ಆಗಸ್ಟ್ 31 1984ರಿಂದ 24.07.1987
8. ಶಂಕರ ದಯಾಳ ಶರ್ಮ– 03.09.1987ರಿಂದ 24.7.92
9. ಕೆ.ಆರ್.ನಾರಾಯಣನ್– 21.8.1992ರಿಂದ 24.07.1997
10. ಕೃಷ್ಣಕಾಂತ್– 21.08.1997ರಿಂದ 27.7.2002
11. ಬಿ.ಎಸ್.ಶೇಖಾವತ್– 19.8.2002ರಿಂದ 21.7.2007
12. ಮೊಹಮದ್ ಹಮೀದ್ ಅನ್ಸಾರಿ–11.8.2007–10.8.2017 (2 ಅವಧಿ)
13. ಎಂ.ವೆಂಕಯ್ಯ ನಾಯ್ಡು– 11.08.2017ರಿಂದ 10.08.2022
14. ಜಗದೀಪ್ ಧನಕರ್– 11.08.2022ರಿಂದ 21.07.2025

ಉಪ ರಾಷ್ಟ್ರಪತಿಗಳ ಅಧಿಕಾರಗಳು ರಾಷ್ಟ್ರಪತಿಗಳ ಅಧಿಕಾರಗಳಷ್ಟು ವಿಸ್ತಾರವಾಗಿರದೇ ಸೀಮಿತವಾಗಿದೆ. ಬಹು ಮುಖ್ಯವಾಗಿ ಉಪರಾಷ್ಟ್ರಪತಿಗಳು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆಂದು ಸಂವಿಧಾನದ 64ನೇ ವಿಧಿ ತಿಳಿಸುತ್ತದೆ. ರಾಜ್ಯಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದರಿಂದ, ಅದರ ಕಾರ್ಯ ಕಲಾಪಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಉಪರಾಷ್ಟ್ರಪತಿಗಳಿಗೆ ಸೇರಿದೆ. ಸಂವಿಧಾನದ 65ನೇ ವಿಧಿಯ ಪ್ರಕಾರ ರಾಷ್ಟ್ರಪತಿಗಳು, ನಿಧನ ಹೊಂದಿದಾಗ, ಅಥವಾ ರಾಜೀನಾಮೆ ನೀಡಿದಾಗ ಅಥವಾ ಪದಚ್ಯುತಗೊಂಡಾಗ ಉಪರಾಷ್ಟ್ರಪತಿಗಳು ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಇಂತಹ ಸಮಯದಲ್ಲಿ ಅವರಿಗೆ ರಾಷ್ಟ್ರಪತಿಗಳು ಚಲಾಯಿಸುವ ಎಲ್ಲಾ ಅಧಿಕಾರಗಳು ಪ್ರಾಪ್ತವಾಗುತ್ತದೆ. 1969ರಲ್ಲಿ ಅಂದಿನ ರಾಷ್ಟ್ರಪತಿ ಡಾ.ಜಾಕಿರ್ ಹುಸೇನ್ ನಿಧನ ಹೊಂದಿದಾಗ, ಅಂದಿನ ಉಪರಾಷ್ಟ್ರಪತಿಗಳಾಗಿದ್ದ ವಿ.ವಿ.ಗಿರಿಯವರು ರಾಷ್ಟ್ರಪತಿಗಳ ಕಾರ್ಯಗಳನ್ನು ನೋಡಿಕೊಂಡರು. 1977ರಲ್ಲಿ ಅಂದಿನ ರಾಷ್ಟ್ರಪತಿ ಫಕ್ರುದ್ದಿನ್ ಅಲಿ ಅಹಮದ್ ನಿಧನ ಹೊಂದಿದಾಗ ಅಂದಿನ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಹಂಗಾಮಿ ರಾಷ್ಟ್ರಪತಿಯಾಗಿ ಕೆಲಕಾಲ ಕಾರ್ಯನಿರ್ವಹಿಸಿದರು.

ಕರ್ತವ್ಯಗಳ ನಿರ್ವಹಣೆ ದೃಷ್ಟಿಯಿಂದ ಭಾರತದ ಉಪರಾಷ್ಟ್ರಪತಿಗಳ ಕರ್ತವ್ಯಗಳು ಅಮೇರಿಕಾದ ಉಪರಾಷ್ಟ್ರಾಧ್ಯಕ್ಷರ ಕರ್ತವ್ಯಗಳನ್ನು ಹೋಲುತ್ತದೆ. ಅಮೇರಿಕಾದ ಉಪಾಧ್ಯಕ್ಷರು ಸಹ ಅಲ್ಲಿನ ಮೇಲ್ಮನೆಯಾದ ಸೆನೆಟ್ಟಿನ ಅಧ್ಯಕ್ಷರಾಗಿ ಕೆಲಸ ಮಾಡುತ್ತಾರೆ. ಆದರೆ ಅಮೇರಿಕಾದ ಅಧ್ಯಕ್ಷರು ನಿಧನರಾದರೆ ಅಥವಾ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರೆ ಅಥವಾ ಪದಚ್ಯುತಗೊಂಡರೆ, ಉಳಿದ ಅವಧಿವರೆಗೆ ಉಪರಾಷ್ಟ್ರಾಧ್ಯಕ್ಷರೇ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ಉದಾಹರಣೆಗೆ 1963ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಜೆ.ಎಫ್.ಕೆನಡಿಯವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದಾಗ, ಅಂದಿನ ಉಪಾಧ್ಯಕ್ಷರಾಗಿದ್ದ ಲಿಂಡನ್ ಬಿ ಜಾನ್ಸನ್ ಉಳಿದ ಅವಧಿಗೆ ರಾಷ್ಟ್ರಪತಿಯಾಗಿ ನೇಮಕಗೊಂಡರು. ವಾಟರ್‌ಗೇಟ್ ಹಗರಣಕ್ಕೆ ಸಂಬಂಧಿಸಿದಂತೆ, ರಿಚರ್ಡ್ ನಿಕ್ಸನ್ ರಾಜೀನಾಮೆ ನೀಡಿದಾಗ, ಆಗ ಉಪಾಧ್ಯಕ್ಷರಾಗಿದ್ದ ಜೆರಾಲ್ಡ್ ಫೋರ್ಡ್ ಉಳಿದ ಅವಧಿಗೆ ರಾಷ್ಟ್ರಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಆದರೆ ಭಾರತದಲ್ಲಿ ಉಪ ರಾಷ್ಟ್ರಪತಿಗಳು ಆರು ತಿಂಗಳ ಕಾಲ ಮಾತ್ರ ಹಂಗಾಮಿ ರಾಷ್ಟ್ರಪತಿಯಾಗಿ ಮುಂದುವರೆಯಬಹುದು. ಅಷ್ಟರಲ್ಲಿ ನೂತನ ರಾಷ್ಟ್ರಪತಿಯ ಆಯ್ಕೆ ನಡೆಯಬೇಕು.

ಸರ್ವೇಪಲ್ಲಿ ರಾಧಾಕೃಷ್ಣನ್, ದೇಶದ ಪ್ರಪ್ರಥಮ ಉಪರಾಷ್ಟ್ರಪತಿಗಳಾಗಿ 13.05.1952ರಂದು ಪ್ರಮಾಣ ವಚನ ಸ್ವೀಕರಿಸಿದರು. ಇವರು ಉಪರಾರಾಷ್ಟ್ರಪತಿಗಳಾಗಿ ಎರಡು ಅವಧಿ ಪೂರೈಸಿ ಮುಂದೆ ದೇಶದ ಎರಡನೆಯ ರಾಷ್ಟ್ರಪತಿಗಳಾಗಿ ಆಯ್ಕೆಯಾದರು. ಉಪರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ್ದ ಡಾ.ಜಾಕೀರ್ ಹುಸೇನ್, ವಿ.ವಿ.ಗಿರಿ, ಬಿ.ಡಿ.ಜತ್ತಿ (ಹಂಗಾಮಿ), ಎಂ.ಹಿದಾಯತುಲ್ಲಾ (ಹಂಗಾಮಿ), ಆರ್.ವೆಂಕಟರಾಮನ್, ಶಂಕರ ದಯಾಳ ಶರ್ಮ ಮತ್ತು ಕೆ.ಆರ್.ನಾರಾಯಣನ್ ಮುಂದೆ ರಾಷ್ಟ್ರಪತಿಗಳಾಗಿ ಆಯ್ಕೆಯಾದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಡಾ.ಎಸ್.ರಾಧಾಕೃಷ್ಣನ್ ಮತ್ತು ಹಮೀದ್ ಅನ್ಸಾರಿ, ಎರಡು ಅವಧಿ ಪೂರೈಸಿದ ಉಪರಾಷ್ಟ್ರಪತಿಗಳಾಗಿದ್ದಾರೆ. ಉಪರಾಷ್ಟ್ರಪತಿಗಳಿಗೆ ರಾಷ್ಟ್ರಪತಿಯಾಗಿ ಬಡ್ತಿ ನೀಡುವ ಸಂಪ್ರದಾಯ ಕಾಂಗ್ರೆಸ್ ಪಕ್ಷದಲ್ಲಿತ್ತು.

ಉಪರಾಷ್ಟ್ರಪತಿಗಳ ನೈಜ ಸ್ಥಾನಮಾನ

ಭಾರತದ ರಾಷ್ಟ್ರಪತಿಗಳಿಗೆ ಇರುವಷ್ಟು ಪ್ರಾಧಾನ್ಯತೆ ಮತ್ತು ಮಹತ್ವ ಉಪರಾಷ್ಟ್ರಪತಿಗಳಿಗೆ ಇಲ್ಲ. ಹಿರಿಯರ ಮನೆ ಎಂದೇ ಹೆಸರಾದ ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿ ಆ ಸದನದ ಕಲಾಪವನ್ನು ಸುಗಮ ರೀತಿಯಲ್ಲಿ ನಡೆಸಲು ಅವರು ಬದ್ಧರಾಗಿರುತ್ತಾರೆ. ಎರಡನೆಯದಾಗಿ, ರಾಷ್ಟ್ರಪತಿ ಹುದ್ದೆ ತೆರವಾದಾಗ, ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಾರೆ. ಇಷ್ಟನ್ನು ಹೊರತುಪಡಿಸಿ, ಉಪರಾಷ್ಟ್ರಪತಿಗಳಿಗೆ ಬೇರೇನೂ ಹೆಚ್ಚಿನ ಕಾರ್ಯಭಾರವಿಲ್ಲ. ಆದ್ದರಿಂದ ಅಷ್ಟೊಂದು ಮಹತ್ವವಲ್ಲದ ಈ ಹುದ್ದೆಯನ್ನು ರದ್ದುಪಡಿಸಬೇಕೆಂಬ ಕೂಗು ಆಗಾಗ ಕೇಳಿ ಬರುತ್ತಿದೆಯಾದರೂ ಉಪರಾಷ್ಟ್ರಪತಿ ಹುದ್ದೆ ರದ್ದಾಗದೇ ಉಳಿದಿದೆ. ಹಿರಿಯರ ಮನೆಯಾದ ರಾಜ್ಯಸಭೆಯ ಕಲಾಪಗಳು ವೈಶಿಷ್ಟ್ಯಪೂರ್ಣವಾಗಿರುತ್ತದೆ. ಈ ಸಭೆಯನ್ನು ಸರಿಯಾದ ರೀತಿಯಲ್ಲಿ ಪ್ರಜಾಪ್ರಭುತ್ವದ ರೀತಿ ರಿವಾಜುಗಳಿಗೆ ಅನುಗುಣವಾಗಿ ನಡೆಸಲು ರಾಜಕೀಯ ನೈಪುಣ್ಯತೆ ಮತ್ತು ಸಂಸದೀಯ ಜ್ಞಾನ ತೀರಾ ಅವಶ್ಯಕ. ಅಷ್ಟರಮಟ್ಟಿಗೆ ಉಪರಾಷ್ಟ್ರಪತಿಗಳ ಹುದ್ದೆ ಮಹತ್ವವೇ ಸರಿ. ಅಮೇರಿಕಾದ ಸಂವಿಧಾನದಲ್ಲಿ ಇರುವಂತೆ, ರಾಷ್ಟ್ರಪತಿ ಹುದ್ದೆ ಅವರ ನಿಧನ, ರಾಜೀನಾಮೆ ಅಥವಾ ಬೇರಾವುದೋ ಕಾರಣದಿಂದ ತೆರವಾದರೆ ಉಳಿದ ಅವಧಿಯವರೆಗೆ ಉಪರಾಷ್ಟ್ರಪತಿಗಳೇ ದೇಶದ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುವ ಅವಕಾಶ ನೀಡಿದರೆ, ಈ ಹುದ್ದೆಗೆ ಮೆರುಗು ಬರುತ್ತದೆ. ಈ ನಿಟ್ಟಿನಲ್ಲಿ ಸಂವಿಧಾನದ ತಿದ್ದುಪಡಿಗೆ ಆಡಳಿತ ಹಾಗೂ ವಿರೋಧ ಪಕ್ಷಗಳು ಒಟ್ಟಿಗೆ ಕುಳಿತು ಚರ್ಚಿಸಬೇಕಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಶರಣ ಮಂಡಳಿಯಿಂದ ಕೆಂಪೇಗೌಡ ಜಯಂತಿ ಆಚರಣೆ

ಕೆಂಪೇಗೌಡರ ವ್ಯಕ್ತಿತ್ವ, ಆದರ್ಶ ಮೈಗೂಡಿಸಿಕೊಳ್ಳಲು ಕರೆ



ಮೈಸೂರು ಶರಣ ಮಂಡಳಿ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಲಾಯಿತು.

ಮೈಸೂರು,ಜು.29(ಜಿಎ)–ಮೈಸೂರು ಶರಣ ಮಂಡಳಿ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಹಕಾರಿ ಧುರೀಣ ವೈ.ಎನ್.ಶಂಕರೇಗೌಡರು, ಸಾಹಿತಿ ಡಾ.ಮಹೇಂದ್ರ ಮೂರ್ತಿ ದೇವನೂರು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ವೈದ್ಯರಾದ ಡಾ.ಎಸ್.ಪಿ. ಯೋಗಣ್ಣ, ಉದ್ಯಮಿ ಕೆ.ಬಿ.ಲಿಂಗರಾಜು, ವಕೀಲ ಶಿವಪ್ರಸಾದ್ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ನಂತರ ನಾಡಪ್ರಭು ಕೆಂಪೇಗೌಡರ ಕುರಿತು ಸಾಹಿತಿ ಡಾ.ಮಹೇಂದ್ರ ಮೂರ್ತಿ ದೇವನೂರು ಮಾತನಾಡಿ, 500 ವರ್ಷದ ನಂತರವೂ ಕೆಂಪೇಗೌಡರ ಆಳ್ವಿಕೆ, ತತ್ವ, ಮೌಲ್ಯ, ಆದರ್ಶಗಳು ಪ್ರಸ್ತುತವಾಗಿವೆ. ಈ ನಿಟ್ಟಿನಲ್ಲಿ ಕೆಂಪೇಗೌಡ ಅವರ ವ್ಯಕ್ತಿತ್ವ ಮಾದರಿಯಾಗಿದ್ದು, ಪ್ರತಿಯೊಬ್ಬರು ಆದರ್ಶ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕೆಂಪೇಗೌಡರೂ ಮೂಲತಃ ಪಾಳೇಗಾರರಾಗಿದ್ದರು. ಧರ್ಮ ಪ್ರಭು ವಾಗಿಯೂ ಹೆಸರು ಪಡೆದುಕೊಂಡಿದ್ದಾರೆ. ಅಭಿರುಚಿ ಇದ್ದರಿಂದ ಕೆಂಪೇಗೌಡರು ಬೆಂಗಳೂರು ನಿರ್ಮಾಣ ಮಾಡಿದ್ದರು. ದೈಹಿಕವಾಗಿ ಎತ್ತರವಾಗಿದ್ದರು ಅವರ ವ್ಯಕ್ತಿತ್ವವೂ ಎತ್ತರವಾಗಿತ್ತು. ಹಳ್ಳಿಯಾಗಿದ್ದ ಬೆಂಗಳೂರನ್ನು ಮುಖ್ಯ ನಗರವಾಗಲು ಕೆಂಪೇಗೌಡರ ಕೊಡುಗೆ ಅಪಾರ. ಕೆಂಪೇಗೌಡರು ಮಹಾನ್ ಕನಸುಗಾರರಾಗಿದ್ದರಿಂದ ವಿಜಯನಗರಕ್ಕೆ ಭೇಟಿ ನೀಡಿ ಬೆಂಗಳೂರನ್ನು ನಿರ್ಮಾಣ ಮಾಡಿದರು ಎಂದು ಬಣ್ಣಿಸಿದರು.

ನಮಗಾಗಿ ಬದುಕುವುದಲ್ಲ, ಸಮಾಜಕ್ಕಾಗಿ ಬದುಕುವುದು ನಿಜವಾದ ಜೀವನ ಎಂದು ಕೆಂಪೇಗೌಡರು ತೋರಿಸಿಕೊಟ್ಟ ಸಮಾಜದ ಅಭಿವೃದ್ಧಿಗೆ ದುಡಿದ ಮಹಾನ್ ವ್ಯಕ್ತಿ. ಅವರು ಪರೋಪಕಾರಿ ಮತ್ತು ಸಹಾನುಭೂತಿಯುಳ್ಳ ಆಡಳಿತಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದವರು. ದಕ್ಷ ಹಾಗೂ ದೂರದೃಷ್ಟಿಯಿದ್ದಂತಹ ಆಡಳಿತಗಾರರಾಗಿದ್ದರು ಎಂದರು.

ವ್ಯಕ್ತಿಗೆ ಆದರ್ಶ ಇಲ್ಲದೆ ಹೋದರೆ ವ್ಯಕ್ತಿತ್ವ ಬೆಳೆಯಲಾರದು. ಹಾಗೇ ಸಮಾಜಕ್ಕೆ ಆದರ್ಶಪ್ರಾಯ ವ್ಯಕ್ತಿ ಇಲ್ಲದೆ ಹೋದರೆ ಸಮಾಜ ವಿಕಸಿತವಾಗದು. ಬೆಂಗಳೂರು ಇಷ್ಟು ವಿಶಾಲವಾಗಿ ಬೆಳೆಯಲು ತಳಹದಿ ಹಾಕಿದವರೇ ನಾಡಪ್ರಭು ಕೆಂಪೇಗೌಡರು. ಇಂದು ಕೋಟ್ಯಾಂತರ ಜನರಿಗೆ ಆಶ್ರಯ ನೀಡಿದ್ದು, ದೇಶದ ಮುಖ್ಯ ನಗರದಲ್ಲಿ ಒಂದಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ, ಉದ್ಯಮಿ ಲಿಂಗರಾಜು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಸಂಘಟಕ ಹೆಚ್.ಕೆ.ರಾಮು, ರಂಗಕರ್ಮಿ ರಾಮಚಂದ್ರ, ವಕೀಲ ಶಿವಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಹಾಸನ ಮಿತ್ರ

ಔಷಧಿಗಳನ್ನು ಹೊರಗೆ ಖರೀದಿಸಲು ಚೀಟಿ ಬರೆದುಕೊಡಬೇಡಿ: ಡಿಸಿ



ಹಾಸನ ಡಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಲತಾಕುಮಾರಿ ಮಾತನಾಡಿದರು. ವಿವಿಧ ಇಲಾಖೆ ಅಧಿಕಾರಿಗಳು ಈ ವೇಳೆ ಇದ್ದರು.

ಹಾಸನ: ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸುವುದರ ಜೊತೆಗೆ ಔಷಧಿಗಳ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಔಷಧಿ ಹೊರಗೆ ತೆಗೆದುಕೊಳ್ಳಿ ಎಂದು ಚೀಟಿ ಬರೆದುಕೊಡದಂತೆ ನಿಗಾವಹಿಸಿ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಕ್ತ ಪರೀಕ್ಷೆ ಮಾಡಿದ ಸಂದರ್ಭದಲ್ಲಿ ವಿಳಂಬ ಆಗದಂತೆ ಶೀಘ್ರ ವರದಿಯನ್ನು ರೋಗಿಗಳಿಗೆ ಒದಗಿಸಬೇಕು. ಅಗತ್ಯ ಚಿಕಿತ್ಸೆ ಪಡೆಯಲು ಅನುವು ಮಾಡಿಕೊಡಬೇಕು ಎಂದರು.

ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಎಪ್ರಾನ್ ಧರಿಸುವಂತೆ ಹಾಗೂ ಶಿಸ್ತಿನಿಂದ ಇರುವಂತೆ ನೋಡಿಕೊಳ್ಳಿ. ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚಿನ ಸೌಲಭ್ಯ ಇಲ್ಲದಿದ್ದಲ್ಲಿ ಎಂಪೆನೆಲ್ ಆಗಿರುವ ಖಾಸಗಿ ಆಸ್ಪತ್ರೆಗೆ ತಕ್ಷಣ ರೋಗಿಯನ್ನು ಕಳುಹಿಸುವ ಮೂಲಕ ಉಚಿತ ಚಿಕಿತ್ಸೆ ಕಲ್ಪಿಸಿ, ಪ್ರಾಣ ಉಳಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳನ್ನು ಎಂ.ಆರ್.ಸ್ಕ್ಯಾನ್ ಮತ್ತು ಸಿಟಿ ಸ್ಕ್ಯಾನ್‌ಗೆ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸದಂತೆ ಎಚ್ಚರ ವಹಿಸಬೇಕು. ಊಟದ ಸಂದರ್ಭದಲ್ಲಿ ಹೊರರೋಗಿಗಳ ಕೌಂಟರ್‌ನಲ್ಲಿ ಒಬ್ಬರು ಸಿಬ್ಬಂದಿಯನ್ನು ಸಾರ್ವಜನಿಕರಿಗೆ ಲಭ್ಯವಿರುವಂತೆ ನೋಡಿಕೊಳ್ಳಿ ಎಂದು ನಿರ್ದೇಶನ ನೀಡಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಉಪವಿಭಾಗಾಧಿಕಾರಿ ಡಾ.ಶ್ರುತಿ, ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಬಾಲ್ಯ ವಿವಾಹ ತಡೆಗೆ ಸೂಚನೆ

ಬಾಲ್ಯ ವಿವಾಹ ಬಾಲ ಗರ್ಭಿಣಿಯರು ಹಾಗೂ ಬಾಲ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ತಹಶೀಲ್ದಾರರು ಎಚ್ಚರ ವಹಿಸಿ ಕೆಲಸ ಮಾಡುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಸೂಚನೆ ನೀಡಿದರು.

ವಲಸೆ ಕಾರ್ಮಿಕರ ಮಕ್ಕಳನ್ನು ಗುರುತಿಸಿ ಹತ್ತಿರದ ಸರ್ಕಾರಿ ಶಾಲೆಗಳಿಗೆ ಸೇರಿಸಿ. ಉಚಿತ ಪುಸ್ತಕಗಳ ವಿತರಿಸಿ, ಬಿಸಿಯೂಟದ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಹತ್ತಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ತಾತ್ಕಾಲಿಕವಾಗಿ ಅಂಗನವಾಡಿ ತೆರೆಯುವಂತೆ ತಾಕೀತು ಮಾಡಿದರು. ವಲಸೆ ಕಾರ್ಮಿಕರಿಗೆ ಇ–ಶ್ರಮ್ ಕಾರ್ಡ್ ವಿತರಿಸಬೇಕು. ಆಧಾರ್ ಕಾರ್ಡ್ ಇರುವವರು ಹಾಗೂ ಇಲ್ಲದವರನ್ನು ಪಟ್ಟಿ ಮಾಡಿ ಮತದಾರರ ಗುರುತಿನ ಚೀಟಿ ಹೊಂದಿದ್ದರೆ ಆಧಾರ್ ಕಾರ್ಡ್ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಂತ್ಯೋದಯ, ಅನ್ನ ಭಾಗ್ಯ ಯೋಜನೆ ತೂಕದಲ್ಲಿ ವಂಚನೆ

ಗೊತ್ತಿದ್ದರೂ ಮೌನ ವಹಿಸಿರುವ ಆಹಾರ ಶಿರಸ್ತೇದಾರ್ ವಿರುದ್ಧ ಕ್ರಮಕ್ಕೆ ಸಿಎಂಗೆ ದೂರು



ಬೇಲೂರು: ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸುತ್ತಿರುವ ಅಂತ್ಯೋದಯ ಮತ್ತು ಅನ್ನಭಾಗ್ಯ ಯೋಜನೆಗಳ ಅಕ್ಕಿ ತೂಕದಲ್ಲಿ ವಂಚನೆ ನಡೆಯುತ್ತಿದ್ದರೂ ಆಹಾರ ಶಿರಸ್ತೇದಾರ್ ಗೀತಾಂಜಲಿ ಮೌನವಹಿಸಿದ್ದು, ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗೆ ದೂರು ನೀಡಲಾಗುವುದು ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಘಟಕದ ಅಧ್ಯಕ್ಷ ದೇಶಾಣಿ ಆನಂದ್ ತಿಳಿಸಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಕೆಲವು ನ್ಯಾಯ ಬೆಲೆ ಅಂಗಡಿಗಳು ನಿಗದಿತ ಪ್ರಮಾಣಕ್ಕಿಂತ ಕಡಿಮೆ ಅಕ್ಕಿ ನೀಡುತ್ತಿವೆ ಎಂಬ ಆರೋಪವಿದ್ದು, ಅಂತಹ ಅಂಗಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳವಂತೆ ಅನೇಕ ಬಾರಿ ಆಹಾರ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ಆಹಾರ ಇಲಾಖೆಯ ಶಿರಸ್ತೇದಾರ್ ಗೀತಾಂಜಲಿ, ತಾಪಂ ಇಓ ವಸಂತ್ ಕುಮಾರ್, ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ರಮ್ಯಾ, ಆಹಾರ ನಿರೀಕ್ಷಕರಾದ ವೀಣಾ, ಪುರುಷೋತ್ತಮ್, ಸೆಸ್ಕ್ ಎಇ ಅಶೋಕ್ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಅಶೋಕ್, ಸುರೇಶ್, ಪ್ರತಾಪ್, ಇಂದ್ರೇಶ್, ಮಹೇಶ್, ಸತೀಶ್, ನಿಶ್ಚಲ್, ಮನ್ಸೂರ್ ಅಹಮ್ಮದ್, ಮಹೇಶ್, ಅಬೀಬ್, ಚಂದ್ರಶೇಖರ್, ಧರ್ಮಬೋವಿ, ವಿಶಾಲಾಕ್ಷಿ ಇದ್ದರು.

ತಮ್ಮದೇ ಕಾರ್ಯಕರ್ತರಿಗೆ ಅಧಿಕಾರ ನೀಡದವರು ನಮ್ಮ ಕಾರ್ಯಕರ್ತರ ಆಹ್ವಾನಿಸುತ್ತಾರೆ!

ಡಿ.ಕೆ.ಶಿವಕುಮಾರ್‌ಗೆ ನಿಖಿಲ್ ಪರೋಕ್ಷ ವಾಗ್ದಾಳಿ



ನಿಖಿಲ್ ಕುಮಾರಸ್ವಾಮಿ

ಬೆಂಗಳೂರು, ಜು.29(ಕೆಎಂಶಿ)– ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಪಕ್ಷದ ಕಾರ್ಯಕರ್ತರಿಗೆ ನಿಗಮ–ಮಂಡಳಿಗಳಲ್ಲಿ ಅಧಿಕಾರ ಕೊಡಲು ಯೋಗ್ಯತೆ ಇಲ್ಲದವರು ನಮ್ಮ ಪಕ್ಷದ ಕಾರ್ಯಕರ್ತರನ್ನು ಆಹ್ವಾನಿಸುತ್ತಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, 'ಗ್ಯಾರಂಟಿ' ಅನುಷ್ಠಾನ ಸಮಿತಿ ಹೆಸರಲ್ಲಿ ಜನರ ತೆರಿಗೆ ಹಣವನ್ನು 'ಗೌರವಧನ'ವಾಗಿ ಗಂಜಿ ಗಿರಾಕಿಗಳಿಗೆ ಹಂಚಿಕೆ ಮಾಡಲು, ನಮ್ಮ ಕಾರ್ಯಕರ್ತರು ಮಾರಾಟಕ್ಕಿಲ್ಲ, ಅವರು ಪಕ್ಷದ ನಿಷ್ಠಾವಂತರು ಎಂದಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವರ್ಚಸ್ಸಿನ ಮುಂದೆ ನಿಮ್ಮ ಮಾತುಗಳಿಗೆ ಕವಡೆಕಾಸಿನ ಕಿಮ್ಮತ್ತು ಇಲ್ಲ. ಬೆಂಗಳೂರು ರಸ್ತೆಗಳ ಗುಂಡಿ ಮುಚ್ಚಿಸಿದ್ದರೆ ಸ್ವಲ್ಪವಾದರೂ ಮರ್ಯಾದೆ ಉಳಿಯುತ್ತಿತ್ತು, ಉಡಾಫೆ ಮಾತುಗಳನ್ನು ಬಿಟ್ಟು ರಾಜ್ಯದ ಅಭಿವೃದ್ಧಿಗೆ ಗಮನಹರಿಸಿ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರು ಹೇಳದೆ ಪರೋಕ್ಷವಾಗಿ ಟೀಕಿಸಿದ್ದಾರೆ.

ನಿರಾಶ್ರಿತರಿಗೆ ಹೊದಿಕೆ ವಿತರಣೆ



ಶ್ರಾವಣ ಮಾಸದಲ್ಲಿ ವಿಪರೀತ ಚಳಿ ಇರುವ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಬಳಗದ ಯುವಕರು ಮೈಸೂರಿನ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಕೆ.ಆರ್. ಆಸ್ಪತ್ರೆ ಸುತ್ತಮುತ್ತ, ರಸ್ತೆ ಬದಿಯಲ್ಲಿ ಮಲಗಿರುವ ನಿರಾಶ್ರಿತರು, ಬಡವರಿಗೆ ಉಚಿತವಾಗಿ ಹೊದಿಕೆ ವಿತರಿಸಿದರು. ಮುಖಂಡರಾದ ನಜರ್‌ಬಾದ್ ನಟರಾಜ್, ರಮೇಶ್ ರಾಮಪ್ಪ, ಜಿ.ರಾಘವೇಂದ್ರ, ದಿನೇಶ್, ಎಸ್.ಎನ್.ರಾಜೇಶ್, ರವಿಚಂದ್ರ, ಮೋಹನ್, ಬೈರತಿ ಲಿಂಗರಾಜು, ಅಮಿತ್ ಇನ್ನಿತರರು ಈ ವೇಳೆ ಹಾಜರಿದ್ದರು.

ನಾಟಕ ಅಕಾಡೆಮಿ ಪ್ರಶಸ್ತಿಗೆ ಮೈಸೂರು ಕಲಾವಿದರ ಕಡೆಗಣನೆ

ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಆರೋಪ

ಮೈಸೂರು, ಜು.29(ಜಿಎ)–ಕರ್ನಾಟಕ ನಾಟಕ ಅಕಾಡೆಮಿ ನೀಡುವ ಪ್ರಶಸ್ತಿಗಳ ಆಯ್ಕೆ ಸಂದರ್ಭದಲ್ಲಿ ಮೈಸೂರಿನ ರಂಗಭೂಮಿ ಕಲಾವಿದರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದು ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಆರೋಪಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ಹಾಗೂ ರಂಗಾಯಣದ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ಮಾತನಾಡಿ, ಅಕಾಡೆಮಿ ವತಿಯಿಂದ 93 ಪ್ರಶಸ್ತಿಗಳನ್ನು ನೀಡುತ್ತಿದ್ದು, ಅದಲ್ಲಿ 50 ಪ್ರಶಸ್ತಿ ಬೆಂಗಳೂರಿಗೆ ಮೀಸಲಿಡಲಾಗಿದೆ. ಮೈಸೂರಿನ ಕಲಾವಿದರನ್ನು ಕಡೆಗಣಿಸಿ, ಮಲತಾಯಿ ಧೋರಣೆ ನೀತಿ ಅನುಸರಿಸುತ್ತಿದ್ದು, ಬೆಂಗಳೂರಿನಲ್ಲಿರುವವರಿಗೆ ಮೈಸೂರಿನ ಕೋಟಾದಡಿ ಪ್ರಶಸ್ತಿ ನೀಡಲಾಗುತ್ತಿದೆ ಎಂದು ದೂರಿದರು.

ಪ್ರಶಸ್ತಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಅಕಾಡೆಮಿಯೂ ಕೇವಲ ಬೆಂಗಳೂರೊಂದನ್ನೇ ಪರಿಗಣಿಸಬಾರದು. ರಾಜ್ಯದ ಇತರೆ ಜಿಲ್ಲೆಗಳೂ ಇವೆ. ಮಹಿಳಾ ರಂಗಕರ್ಮಿಗಳು ಇದ್ದಾರೆ ಎಂಬುದು ಗಮನಕ್ಕೆ ಬರಬೇಕಾಗಿತ್ತು. ಅಕಾಡೆಮಿ ಅಧ್ಯಕ್ಷರು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಕೊಡ ಮಾಡುತ್ತಿರುವ ಪ್ರಶಸ್ತಿಗಳು ತಾರತಮ್ಯದಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಪ್ರಾಮಾಣಿಕವಾಗಿ ರಂಗಸೇವೆಗೈದ ರಂಗ ಕಲಾವಿದರನ್ನು ಪ್ರೋತ್ಸಾಹಿಸದೆ, ಸಂಬಂಧಪಡದ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಿರುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದರು.

ಮುಂದಿನ ಬಾರಿ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಲಿಂಗ ಬೇಧವಿಲ್ಲದೇ, ಸೇವೆಯನ್ನು ಪರಿಗಣಿಸಿ, ಕರ್ನಾಟಕದ ಎಲ್ಲಾ ಜಿಲ್ಲೆಯಲ್ಲಿರುವ ರಂಗ ಕಲಾವಿದರನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ಮಾಡಿ ಎಂದು ಅಕಾಡೆಮಿಗೆ ಸಲಹೆ ನೀಡಿದರು.

ರಂಗಕರ್ಮಿ ಮೈಮ ರಮೇಶ್ ಮಾತನಾಡಿ, ಅಕಾಡೆಮಿಯು ಏಕಮುಖವಾದ ಆಯ್ಕೆಯ ತೀರ್ಮಾನ ಮಾಡಿರುವುದು ನ್ಯಾಯ ಸಮ್ಮತವಲ್ಲ. ರಂಗಕರ್ಮಿಗಳನ್ನು ಸಂಪರ್ಕಿಸಿ ಸೂಕ್ತ ಶಿಫಾರಸ್ಸಿನೊಡನೆ ಆಯ್ಕೆ ಕ್ರಮಬದ್ಧಗೊಳಿಸಬೇಕು. ಯೋಗ್ಯ ರಂಗಕರ್ಮಿಗಳನ್ನು ಪ್ರಶಸ್ತಿ ನೀಡಬೇಕು ಎಂದು ಒತ್ತಾಯಿಸಿದರು.

ರಂಗಕರ್ಮಿ ರಾಜಶೇಖರ್ ಕದಂಬ, ಮೈಸೂರಿನ ರಂಗಭೂಮಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಇಲ್ಲಿ ಅನೇಕ ರಂಗಕರ್ಮಿಗಳು ರಂಗಭೂಮಿಯಲ್ಲಿ ವಿವಿಧ ಆಯಾಮಗಳಲ್ಲಿ ಪ್ರಾಮಾಣಿಕವಾಗಿ ರಂಗಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಅಕಾಡೆಮಿಯು ಯಾವುದೆ ಪದಾಧಿಕಾರಿ, ರಂಗತಂಡಗಳನ್ನು ಸಂಪರ್ಕಿಸದೆ ಈ ಸಾಲಿನ ಪ್ರಶಸ್ತಿಯನ್ನು ಏಕಪಕ್ಷೀಯವಾಗಿ ನಿರ್ಧರಿಸಿ ಪ್ರಶಸ್ತಿ ನೀಡುತ್ತಿದೆ. ಇದು ಸರಿಯಲ್ಲ. ಈ ಧೋರಣೆ ವಿರುದ್ಧ ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮುಖ್ಯಮಂತ್ರಿಗೆ ದೂರು ಸಲ್ಲಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್ ಹೆಚ್.ತಲಕಾಡು, ಕಾತ್ಯಾಯಿನಿ, ಭುವನೇಶ್ವರಿ, ಅಬ್ದುಲ್ ಕರಿಂ, ಮೋಹನ್, ರಾಮಣ್ಣ ಉಪಸ್ಥಿತರಿದ್ದರು.

ಶ್ರದ್ಧಾ–ಭಕ್ತಿಯ ನಾಗರ ಪಂಚಮಿ



ನಾಗರಪಂಚಮಿ ಹಿನ್ನೆಲೆಯಲ್ಲಿ ನಾಗರ ಕಲ್ಲಿಗೆ ಹಾಲೆರೆದು ಪೂಜೆ ಸಲ್ಲಿಸುತ್ತಿರುವುದು.

ಮೈಸೂರು, ಜು.29(ಎಂಕೆ)– ಶ್ರಾವಣ ಮಾಸದ ಶುಕ್ಲ ಪಕ್ಷದ 5ನೇ ದಿನವಾದ ಮೈಸೂರಿನೆಲ್ಲೆಡೆ ಪೂಜಾ ವಿಧಿ–ವಿಧಾನಗಳೊಂದಿಗೆ ಶ್ರದ್ಧಾ–ಭಕ್ತಿಯಿಂದ ನಾಗರ ಪಂಚಮಿ ಆಚರಿಸಲಾಯಿತು.

ದೇವಸ್ಥಾನಗಳಲ್ಲಿರುವ ಅರಳಿಕಟ್ಟೆಯಲ್ಲಿ ಪ್ರತಿಷ್ಠಾಪಿಸಿರುವ ನಾಗರ ಕಲ್ಲುಗಳಿಗೆ ಹಾಲೆರೆದು ತಂಬಿಟ್ಟು, ಎಳ್ಳು ಉಂಡೆ, ತುಪ್ಪ ನೈವೇದ್ಯ ಮಾಡಿದ ಅಪಾರ ಭಕ್ತರು, ಕುಟುಂಬ ವಿಶೇಷ ಪೂಜೆ ಸಲ್ಲಿಸಿದರು.

ಅಲ್ಲದೆ ಹಾವಿನ ಹುತ್ತಗಳಿರುವ ಸ್ಥಳಗಳಲ್ಲಿ ಗಿಡ–ಗಂಟಿಗಳನ್ನು ತೆರವುಗೊಳಿಸಿ, ಹುತ್ತಕ್ಕೆ ಪೂಜೆ ಸಲ್ಲಿಸಿದ ಭಕ್ತರು ಹುತ್ತಕ್ಕೆ ಹಾಲೆರೆದು ಕಂಕಣ ಕಟ್ಟಿಕೊಂಡು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಅಲ್ಲದೆ ನಾಗರಪಂಚಮಿ ಅಂಗವಾಗಿ ದೇಗುಲಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಹುತೇಕ ದೇವಾಲಯಗಳು, ಅರಳಿ ಕಟ್ಟೆಗಳಲ್ಲಿ ಭಕ್ತರ ದಂಡೇ ನೆರೆದಿತ್ತು.

ವ್ಯಾಪಾರ ಜೋರು: ನಾಗರ ಪಂಚಮಿ ಹಿನ್ನೆಲೆಯಲ್ಲಿ ನಗರ ದೇವರಾಜ ಮಾರುಕಟ್ಟೆ ಸೇರಿದಂತೆ ರಸ್ತೆಬದಿ ಹೂ–ಹಣ್ಣು ಹಾಗೂ ಪೂಜಾ ಸಾಮಗ್ರಿ ವ್ಯಾಪಾರ ಜೋರಾಗಿತ್ತು. ದೇವರಾಜ ಮಾರುಕಟ್ಟೆ ಎದುರಿನ ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ ಬದಿಯಲ್ಲಿ ಹೂ ವ್ಯಾಪಾರಿಗಳು ಸಾಲಾಗಿ ಕುಳಿತು ವ್ಯಾಪಾರ ನಡೆಸಿದರು.

ಪಾಕ್ ಶೆಲ್ ದಾಳಿಯಲ್ಲಿ ಪೋಷಕರ ಸಾವು; 22 ಮಕ್ಕಳನ್ನು 'ದತ್ತು' ಪಡೆದ ರಾಹುಲ್ ಗಾಂಧಿ!



ನವದೆಹಲಿ: ಭಾರತ–ಪಾಕಿಸ್ತಾನ ಸಂಘರ್ಷದ ಸಮಯದಲ್ಲಿ ಪೋಷಕರನ್ನು ಕಳೆದುಕೊಂಡ ಸುಮಾರು 2 ಡಜನ್ ಮಕ್ಕಳನ್ನು ವಿಪಕ್ಷ ನಾಯಕ ರಾಹುಲ್ ಗಾಂಧಿ 'ದತ್ತು' ತೆಗೆದುಕೊಳ್ಳಲು ನಿರ್ಧರಿಸಿದ್ದಾರೆ. ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ನಂತರ ಪಾಕಿಸ್ತಾನದಿಂದ ನಡೆದ ಶೆಲ್ ದಾಳಿಯಲ್ಲಿ ಈ ಮಕ್ಕಳು ತಮ್ಮ ಪೋಷಕರನ್ನು ಕಳೆದುಕೊಂಡಿದ್ದರು.

ಪೂಂಚ್ ಜಿಲ್ಲೆಯ 22 ಮಕ್ಕಳ ಸಂಪೂರ್ಣ ಶಿಕ್ಷಣದ ವೆಚ್ಚವನ್ನು ರಾಹುಲ್ ಗಾಂಧಿ ಭರಿಸಲಿದ್ದಾರೆ ಎಂದು ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಅಧ್ಯಕ್ಷ ತಾರಿಕ್ ಹಮೀದ್ ಕಾರಾ ಹೇಳಿದ್ದಾರೆ. ಇವರು ತಮ್ಮ ಪೋಷಕರು ಅಥವಾ ಕುಟುಂಬಕ್ಕಾಗಿ ದುಡಿಯುತ್ತಿದ್ದ ಸದಸ್ಯನನ್ನು ಕಳೆದುಕೊಂಡ ಮಕ್ಕಳು. ಈ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗದಂತೆ ಬುಧವಾರ ಮೊದಲ ಕಂತಿನ ಸಹಾಯ ಧನವನ್ನು ಬಿಡುಗಡೆ ಮಾಡ ಲಾಗುವುದು. ಮಕ್ಕಳು ಪದವಿ ಪಡೆಯುವವರೆಗೆ ಈ ನೆರವು ಮುಂದುವರಿಯುತ್ತದೆ ಎಂದು ಕಾರಾ ಹೇಳಿದರು.

ಮೇ ತಿಂಗಳಲ್ಲಿ ರಾಹುಲ್ ಗಾಂಧಿ ಪೂಂಚ್‌ಗೆ ಭೇಟಿ ನೀಡಿದ್ದರು. ಅಲ್ಲಿ ಅವರು ಸ್ಥಳೀಯ ಕಾಂಗ್ರೆಸ್ ನಾಯಕರಿಗೆ ಈ ಪೀಡಿತ ಮಕ್ಕಳ ಪಟ್ಟಿಯನ್ನು ಸಿದ್ಧಪಡಿಸಲು ಹೇಳಿದರು. ಇದರ ನಂತರ, ಸಮೀಕ್ಷೆ ನಡೆಸಿದ್ದು, ಸರ್ಕಾರಿ ದಾಖಲೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಲಾಯಿತು ಎಂದರು.

ರಾಹುಲ್ ಗಾಂಧಿ ಪೂಂಚ್‌ನಲ್ಲಿರುವ ಕ್ರೈಸ್ಟ್ ಪಬ್ಲಿಕ್ ಶಾಲೆಗೆ ಭೇಟಿ ನೀಡಿದರು. ಅಲ್ಲಿ 12 ವರ್ಷದ ಅವಳಿ ಮಕ್ಕಳಾದ ಉರ್ಬಾ ಫಾತಿಮಾ ಮತ್ತು ಝೈನ್ ಅಲಿ ಕೂಡ ದಾಳಿಗೆ ಬಲಿಯಾದರು. ಮಕ್ಕಳೊಂದಿಗೆ ಮಾತನಾಡುತ್ತಾ ರಾಹುಲ್ ಹೇಳಿದರು, ನನಗೆ ನಿಮ್ಮ ಬಗ್ಗೆ ತುಂಬಾ ಹೆಮ್ಮೆ ಅನ್ನಿಸುತ್ತಿದೆ. ನೀವು ನಿಮ್ಮ ಪುಟ್ಟ ಸ್ನೇಹಿತರನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿರಬೇಕು. ಅದರ ಬಗ್ಗೆ ನನಗೆ ಬೇಸರವಾಗಿದೆ. ಈಗ ನೀವು ಸ್ವಲ್ಪ ಭಯಭೀತರಾಗಿದ್ದೀರಿ, ಆದರೆ ಭಯಪಡಬೇಡಿ, ಎಲ್ಲವೂ ಮತ್ತೆ ಸಾಮಾನ್ಯವಾಗುತ್ತದೆ. ಈ ಘಟನೆಗೆ ನಿಮ್ಮ ಪ್ರತಿಕ್ರಿಯೆಯೆಂದರೆ ನೀವು ಕಷ್ಟಪಟ್ಟು ಓದುವುದು, ಕಷ್ಟಪಟ್ಟು ಆಟವಾಡುವುದು ಮತ್ತು ಶಾಲೆಯಲ್ಲಿ ಬಹಳಷ್ಟು ಸ್ನೇಹಿತರನ್ನು ಮಾಡಿಕೊಳ್ಳುವುದು ಎಂದು ಹೇಳಿದ್ದರು.

ಆಪರೇಷನ್ ಸಿಂಧೂರ್ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಮಂದಿ ಪ್ರವಾಸಿಗರು ಸಾವನ್ನಪ್ಪಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಭಾರತವು 2025ರ ಮೇ 7ರಂದು ಪಾಕಿಸ್ತಾನದ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸಿತ್ತು. ಭಾರತವು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂಬತ್ತು ಭಯೋತ್ಪಾದಕ ಶಿಬಿರಗಳ ಮೇಲೆ ಆಪರೇಷನ್ ಸಿಂಧೂರ್ ಅಡಿಯಲ್ಲಿ ನಿಖರವಾದ ದಾಳಿಗಳನ್ನು ನಡೆಸಿತು. ಜೈಶ್–ಎ–ಮೊಹಮ್ಮದ್ ಮತ್ತು ಲಷ್ಕರ್–ಎ–ತೈಬಾ ದಂತಹ ಭಯೋತ್ಪಾದಕ ಸಂಘಟನೆಗಳ ಅಡಗುತಾಣಗಳನ್ನು ನಾಶಪಡಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಪಾಕಿಸ್ತಾನವು ಮೇ 8ರಿಂದ 10ರವರೆಗೆ ಜಮ್ಮು ಪ್ರದೇಶದಲ್ಲಿ, ವಿಶೇಷವಾಗಿ ಪೂಂಚ್‌ನಲ್ಲಿ ಭಾರೀ ಶೆಲ್ ದಾಳಿ, ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ನಡೆಸಿತು. ಈ ದಾಳಿಗಳಲ್ಲಿ 27 ಜನರು ಸಾವನ್ನಪ್ಪಿದರು. 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಈ ಅವಧಿಯಲ್ಲಿ ಪೂಂಚ್ ಜಿಲ್ಲೆ ಅತ್ಯಂತ ಹೆಚ್ಚು ಹಾನಿಗೊಳಗಾಗಿದ್ದು, 16 ಜನರು ಪ್ರಾಣ ಕಳೆದುಕೊಂಡಿದ್ದರು.

ಕುವೆಂಪು ವಿಶ್ವವಿದ್ಯಾಲಯದ ಪಠ್ಯಕ್ಕೆ ಸತೀಶ್ ಜವರೇಗೌಡರ ಕವನ ಆಯ್ಕೆ



ಸತೀಶ್ ಜವರೇಗೌಡ

ಮೈಸೂರು, ಜು. 29–ಕುವೆಂಪು ವಿಶ್ವವಿದ್ಯಾಲಯದ ಬಿ.ಎಸ್ಸಿ. ಪದವಿಯ ತೃತೀಯ ಸೆಮಿಸ್ಟರ್ ಕನ್ನಡ ಭಾಷಾ ಪಠ್ಯಪುಸ್ತಕ 'ವಿಜ್ಞಾನ ಸೌರಭ'ಕ್ಕೆ ಸಾಹಿತಿ, ಶಿಕ್ಷಕ ಟಿ. ಸತೀಶ್ ಜವರೇಗೌಡರ 'ಬೆಳಕಿಗೂ ಶೋಕದ ಗ್ರಹಣ' ಕವನ ಆಯ್ಕೆಯಾಗಿದೆ.

ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಟಿ.ಸತೀಶ್ ಜವರೇಗೌಡ, ಸಾಹಿತ್ಯ ಕೃಷಿಯ ಜೊತೆಗೆ, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷರಾಗಿ ಮತ್ತು ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿಯಾಗಿ ಕನ್ನಡ ಪರವಾದ ಚಟುವಟಿಕೆಗಳಲ್ಲಿ ಸಕ್ರಿಯ ವಾಗಿದ್ದಾರೆ.

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಪದವಿ ಕಾಲೇಜುಗಳ ಬಿ.ಎಸ್ಸಿಯ ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ 2025 ರಿಂದ 2018ರ ಶೈಕ್ಷಣಿಕ ವರ್ಷದವರೆಗೂ ಈ ಕವನ ಪಠ್ಯವಾಗಿ ಬೋಧಿಸಲ್ಪಡಲಿದೆ.

ಯಾಂತ್ರೀಕರಣದ ಇಂದಿನ ಬದುಕಿನ ಗತಿಯಲ್ಲಿ ಮನುಕುಲ ಭೋಗ ಜೀವನಕ್ಕೆ ತೊತ್ತಾದ ಮೇಲೆ ಸ್ವಾರ್ಥ ಕೇಂದ್ರಿತವಾಗಿದೆ. ನೈತಿಕ ಮೌಲ್ಯಗಳನ್ನು ಗಾಳಿಗೆ ತೂರಲಾಗಿದೆ. ಸುಡು ಸುಡುವ ಸಂಕಟಗಳ ಆರ್ತನಾದ ಬೆಚ್ಚಿ ಬೀಳಿಸಿದೆ. ಸಾಮಾಜಿಕ ಸೌಹಾರ್ದತೆಗೆ ಬೆಂಕಿ ಹಚ್ಚುವ ದುರುಳರ ಆರ್ಭಟ ಮುಂದುವರಿದಿದೆ. ಇಂತಹ ತಲ್ಲಣಗಳನ್ನು ಈ ಕವಿತೆಯು ಧ್ವನಿಪೂರ್ಣವಾಗಿ ಅಭಿವ್ಯಕ್ತಿಸುತ್ತದೆ. ಪ್ರಕೃತಿಯ ಅಸಮತೋಲನ, ಋತುಮಾನಗಳೇ ಬದಲಾವಣೆ, ಮಣ್ಣಿನ ಮಕ್ಕಳ ಅನಾಥ ಬದುಕು–ಇಂತಹ ವಿಷಮ ಪರಿಸ್ಥಿತಿಯನ್ನು ಕವಿತೆ ಅನಾವರಣಗೊಳಿಸುತ್ತದೆ. ಕಷ್ಟಕೋಟಲೆಗಳಲ್ಲಿ ಸಿಲುಕಿರುವ ಇಡೀ ಸಮಾಜ ಮುಗಿಯದ ತಲ್ಲಣಗಳಲ್ಲಿ ಬೇಯುತ್ತಿರುವ ಬಗೆಯನ್ನು ಕವಿ 'ಬೆಳಕಿಗೂ ಶೋಕದ ಗ್ರಹಣ' ಕವನದಲ್ಲಿ ಶಕ್ತವಾಗಿ ದಾಖಲಿಸಿದ್ದಾರೆ.

ವ್ಯಾಪಾರಸ್ಥರಿಗೆ ಕಿರುಕುಳ; ಮೋಡ ರಾಮ್, ಅವರ ಮಕ್ಕಳ ಗಡಿಪಾರಿಗೆ ದೇವರಾಜ ಮೊಹಲ್ಲಾ ನಿವಾಸಿಗಳ ಆಗ್ರಹ



ಮೈಸೂರು ಪಾಲಿಕೆ ವಲಯ ಆಯುಕ್ತೆ ಪ್ರತಿಭಾ ಅವರಿಗೆ ದೇವರಾಜ ಮೊಹಲ್ಲಾ ನಿವಾಸಿಗಳು ಮನವಿ ಸಲ್ಲಿಸಿದರು.

ಮೈಸೂರು, ಜು.29(ಎಂಕೆ)– ದೇವರಾಜ ಮೊಹಲ್ಲಾ ವ್ಯಾಪಾರಸ್ಥರಿಗೆ ಕಿರುಕುಳ ನೀಡುತ್ತಿರುವ ಮೋಡ ರಾಮ್ ಹಾಗೂ ಅವರ ಮಕ್ಕಳಾದ ಬಾಬು ಲಾಲ್, ರಮೇಶ್ ಮಾಲಿ, ಕೈಲಾಸ್, ಜಗನ್ ಹಾಗೂ ವಿಕ್ರಂ ಅವರನ್ನು ಮೈಸೂರಿಂದ ಗಡಿಪಾರು ಮಾಡುವಂತೆ ದೇವರಾಜ ಮೊಹಲ್ಲಾ ನಿವಾಸಿಗಳು ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿ, ಪಾಲಿಕೆ ವಲಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ದೇವರಾಜ ಮೊಹಲ್ಲಾದಲ್ಲಿ ಪುರಾತತ್ವ ಇಲಾಖೆಗೆ ಸೇರಿದ ಶ್ರೀ ಸುಬ್ಬರಾಯದಾಸರ ಪ್ರಸನ್ನ ವೆಂಕಟರಮಣ ಸ್ವಾಮಿ ಪಾರಂಪರಿಕ ದೇವಸ್ಥಾನದಲ್ಲಿ ಮೋಡ ರಾಮ್ ಹಾಗೂ ಆತನ ಮಕ್ಕಳು ಅವೈಜ್ಞಾನಿಕ ಮತ್ತು ಅನಧಿಕೃತ ಕಟ್ಟಡ ನಿರ್ಮಿಸುತ್ತಿದ್ದು, ಕೂಡಲೇ ಆ ಕಟ್ಟಡವನ್ನು ತೆರವುಗೊಳಿಸಬೇಕು. ಹಾಗೆಯೇ ದೇವರಾಜ ಮೊಹಲ್ಲಾದ ವ್ಯಾಪಾರಸ್ಥರಿಗೆ ಕಿರುಕುಳ ನೀಡಿರುವ ಅವರನ್ನು ಮೈಸೂರಿನಿಂದ ಗಡಿಪಾರು ಮಾಡಬೇಕು ಎಂದು ವಲಯ ಕಚೇರಿ–6ರ ವಲಯ ಆಯುಕ್ತೆ ಪ್ರತಿಭಾ ಅವರಿಗೆ ಮನವಿ ಮಾಡಿರುವ ದೇವರಾಜ ಮೊಹಲ್ಲಾ ನಿವಾಸಿಗಳು, ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ದೇವಸ್ಥಾನದ ಪ್ರಧಾನ ಅರ್ಚಕ ವೆಂಕಟೇಶ್‌ದಾಸ ಮತ್ತು ಅವರ ಕುಟುಂಬದವರಿಗೆ ವಿನಾಕಾರಣ ತೊಂದರೆ ಕೊಡುವುದಲ್ಲದೆ ದೇವರಾಜ ಮೊಹಲ್ಲಾ ವ್ಯಾಪಾರಸ್ಥರಿಗೆ, ನಗರ ಪಾಲಿಕೆ ಹಾಗೂ ಇತರೆ ಇಲಾಖೆಗಳಿಗೂ ಸುಳ್ಳು ಮಾಹಿತಿ ನೀಡಿ ವ್ಯಾಪಾರಸ್ಥರಿಗೆ ಕಿರುಕುಳ ನೀಡುತ್ತಿದ್ದಾರೆ. ವಿವಿಧ ಪೊಲೀಸ್ ಠಾಣೆಗಳಲ್ಲಿ ಇವರ ಕುಟುಂಬದವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಮೋಡ ರಾಮ್ ಹಾಗೂ ಅವರ ಮಕ್ಕಳಾದ ಬಾಬು ಲಾಲ್, ರಮೇಶ್ ಮಾಲಿ, ಕೈಲಾಸ್, ಜಗನ್ ಹಾಗೂ ವಿಕ್ರಂ ಅವರನ್ನು ಮೈಸೂರಿಂದ ಗಡಿಪಾರು ಮಾಡುವಂತೆ ದೂರಿನಲ್ಲಿ ಆಗ್ರಹಿಸಿದ್ದಾರೆ. ಈ ವೇಳೆ ಮಾಜಿ ಮೇಯರ್ ರವಿಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್‌ಗೌಡ, ಪ್ರಮೀಳಾ ಭರತ್, ಮುಖಂಡರಾದ ಪ್ರೇಮ್‌ಕುಮಾರ್, ಸುವರ್ಣಮ್ಮ, ಗಾಯಿತ್ರಿ, ಲಕ್ಷ್ಮಿ, ಶೋಭ, ಪ್ರೇಮ, ಕಾಮಾಕ್ಷಿ, ಸಂಜಯ್‌ಗೌಡ, ವಿನಯ್, ಗುರುಪ್ರಸಾದ್, ರಾಮರಾಜ್, ರಾಜಣ್ಣ ಮಹೇಶ್, ಯೋಗೇಶ್ ಮತ್ತಿತರರಿದ್ದರು.

ನಾಳೆ 'ಸ್ವಾತಿ' ಪೂಜೆ

ಮೈಸೂರು: ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆ.1ರಂದು ವಿಶೇಷ ಸ್ವಾತಿ ನಕ್ಷತ್ರ ಪೂಜೆ ಏರ್ಪಡಿಸಲಾಗಿದೆ. ಅಂದು ಮಧ್ಯಾಹ್ನ 12 ಗಂಟೆಗೆ ಪೂಜೆ ನಂತರ ಪ್ರಸಾದ ವಿನಿಯೋಗವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಅವರನ್ನು ಮೊ.99004 00000 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಕಾರ್ಯಾಗಾರ

ಮೈಸೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ Science Communication: Strategies for Reaching Diverse Audiences ವಿಷಯ ಕುರಿತು ಆ.5ರಿಂದ 7ರವರೆಗೆ ಮೂರು ದಿನಗಳ ಸರ್ಟಿಫಿಕೇಟ್ ಕೋರ್ಸ್ ಕಾರ್ಯಾಗಾರವನ್ನು ಅಕಾಡೆಮಿ ಕಚೇರಿಯಲ್ಲಿ ಆಯೋಜಿಸಲಾಗಿದೆ. ಆಸಕ್ತರು ಆ.2ರೊಳಗೆ (Google form-https://forms.gle/iyPn85smZ81RGGnf6)ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಮಾಹಿತಿಗೆ ಮೊ: 9620767819.

ಮೈಸೂರು ಮಿತ್ರ ಬುಧವಾರ 30 ಜುಲೈ 2025

ನಿವೃತ್ತ ನೌಕರರ ಪಿಂಚಣಿ ಪರಿಷ್ಕರಣೆಗೆ ವಿರೋಧ ಖಂಡಿಸಿ

ಕೆ.ಆರ್.ಪೇಟೆಯಲ್ಲಿ ಸರ್ಕಾರಿ ನಿವೃತ್ತ ನೌಕರರಿಂದ ಪ್ರತಿಭಟನೆ



ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ತಾಲೂಕು ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಕೆ.ಆರ್.ಪೇಟೆ, ಜು.29– ಕೇಂದ್ರ ಸರ್ಕಾರ 8ನೇ ವೇತನ ಆಯೋಗದ ಪಿಂಚಣಿ ಪರಿಷ್ಕರಿಸಲು ಮುಂದಾಗಿದೆ. ಆದರೆ ನಿವೃತ್ತ ನೌಕರರಿಗೆ ಹಾಗೂ ಕುಟುಂಬದವರಿಗೆ ಪಿಂಚಣಿ ಪರಿಷ್ಕರಣೆ ಮಾಡಲು ಸಾಧ್ಯವಿಲ್ಲ ಎಂಬ ನಿರ್ಣಯ ಲೋಕಸಭೆಯಲ್ಲಿ ಕೈಗೊಂಡಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ತಾಲೂಕು ಘಟಕದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ತಾಲೂಕು ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಜೀರ್ ಅಹಮದ್, ಉಪಾಧ್ಯಕ್ಷರಾದ ನರಸಿಂಹರಾಜೇಅರಸ್, ವಸಂತಕುಮಾರ್, ಕಾರ್ಯದರ್ಶಿ ಶ್ರೀಕಂಠೇಗೌಡ, ಜಂಟಿ ಕಾರ್ಯದರ್ಶಿ ನಿವೃತ್ತ ಇಂಜಿನಿಯರ್ ಎನ್.ಶಿವಲಿಂಗಪ್ಪ, ಖಜಾಂಚಿ ಕಾಳೇಗೌಡ, ಆಂತರಿಕ ಲೆಕ್ಕ ಪರಿಶೋಧಕ ಎ.ಎಲ್.ನಂಜಪ್ಪ, ಪದಾಧಿಕಾರಿಗಳಾದ ಎ.ಎನ್.ರಾಮಕೃಷ್ಣ, ಬಿ.ಡಿ.ಚಂದ್ರಶೇಖರ್, ಸಂಪತ್ತು, ಬಂಗಾರಯ್ಯ, ನಿವೃತ್ತ ದೈಹಿಕ ಶಿಕ್ಷಕ ನಾಗರಾಜು, ಕೆ.ಆರ್.ಬನ್ನಾರಿ ಸೇರಿದಂತೆ ನೂರಾರು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸದಸ್ಯರು ಜಮಾಯಿಸಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮಾರ್ಚ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ವಿತ್ತ ಬಜೆಟ್‌ನಲ್ಲಿ 2026ರ ಏ.1ಕ್ಕೆ ಮೊದಲು ನಿವೃತ್ತರಾದ ಸರ್ಕಾರಿ ನೌಕರರಿಗೆ ಹಾಗೂ ಕುಟುಂಬದವರಿಗೆ 8ನೇ ವೇತನ ಆಯೋಗದಂತೆ ಪಿಂಚಣಿ ಪರಿಷ್ಕರಿಸಲು ಸಾಧ್ಯವಿಲ್ಲ ಎಂದು ನಿರ್ಣಯ ಕೈಗೊಳ್ಳಲಾಗುತ್ತಿದೆ. ಇದರಿಂದ ಪಿಂಚಣಿದಾರರಿಗೆ ಹಾಗೂ ಕುಟುಂಬದವರು ಸಂಕಷ್ಟಕ್ಕೆ ಒಳಗಾಗಲಿದ್ದಾರೆ. ಹೀಗಾಗಿ ಪ್ರಧಾನಿ ಮೋದಿ ಮಧ್ಯ ಪ್ರವೇಶಿಸಿ ಸದರಿ ಬಿಲ್ ಅನ್ನು ತಡೆ ಹಿಡಿಯಬೇಕು. 8ನೇ ವೇತನ ಆಯೋಗದ ಎಲ್ಲಾ ಸೌಲಭ್ಯಗಳನ್ನು ನಿವೃತ್ತ ನೌಕರರು ಹಾಗೂ ಕುಟುಂಬದವರಿಗೂ ನೀಡಬೇಕು. ಈ ಮೂಲಕ ನಿವೃತ್ತ ನೌಕಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ತಾಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಜೀರ್ ಅಹಮದ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಿಂಚಣಿ ನೌಕರರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಬೇಕು. ಕಾಲ ಕಾಲಕ್ಕೆ ಸರ್ಕಾರಿ ನೌಕರರಿಗೆ ವೇತನ ಪರಿಷ್ಕರಣೆ ಆಗುವಂತೆ ನಿವೃತ್ತ ನೌಕರರಿಗೂ ಮಾಡಲಾಗುತ್ತಿತ್ತು. ಆದರೆ ಕೇಂದ್ರ ಸರ್ಕಾರ ಈ ವ್ಯವಸ್ಥೆ ಬಂದ್ ಮಾಡಲು ಮುಂದಾಗಿರುವುದು ಸರಿಯಲ್ಲ ಕೇಂದ್ರ ಸರ್ಕಾರವು ನಿವೃತ್ತ ಪಿಂಚಣಿ ನೌಕರರಿಗೆ ಮರಣ ಶಾಸನವಾ ಗಿರುವ ಬಿಲ್ಲನ್ನು ಮಂಡಿಸಲು ಮುಂದಾದರೆ ರಾಜ್ಯದಲ್ಲಿ ಪ್ರಸ್ತುತ ನಾಲ್ಕುವರೆ ಲಕ್ಷಕ್ಕೂ ಹೆಚ್ಚು ನಿವೃತ್ತ ಪಿಂಚಣಿದಾರರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಲಿದ್ದಾರೆ. ಹಾಗಾಗಿ ಕೂಡಲೇ ಈ ಬಿಲ್ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆ ನಂತರ ತಹಸೀಲ್ದಾರ್ ಲೋಕೇಶ್ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ಸರ್ಕಾರಿ ನಿವೃತ್ತ ನೌಕರರ ಸಂಘದ ನೂರಾರು ಸದಸ್ಯರು ಭಾಗವಹಿಸಿದ್ದರು.

ತ್ವರಿತವಾಗಿ ಸುದ್ದಿ ಬಿತ್ತರಿಸುವಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖ



ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಅವರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜು.29– ತ್ವರಿತವಾಗಿ ಸುದ್ದಿ ಬಿತ್ತರಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಸುದ್ದಿ ಪ್ರಚಾರದ ನಡುವೆಯೂ ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಉತ್ತಮ ಬೆಳವಣಿಗೆ ಎಂದು ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಹೇಳಿದರು.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಕರ್ತರು ಮತ್ತು ಕುಟುಂಬ ಸದಸ್ಯರಿಗೆ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು, ಗುಂಡು ಹಾಗೂ ಭರ್ಜಿ ಎಸೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಕರ್ತರು ಒತ್ತಡದಲ್ಲಿ ಕಾರ್ಯ ಮಾಡುವವರು. ಅವರ ಒತ್ತಡ ಕಡಿಮೆ ಮಾಡಲು ಕ್ರೀಡಾಕೂಟಗಳು ನಡೆಯಬೇಕು. ಪತ್ರಕರ್ತರು ಮತ್ತು ಕುಟುಂಬಸ್ಥರು ಇಷ್ಟು ಆಸಕ್ತಿಯಿಂದ ಕ್ರೀಡಾಕೂಟದಲ್ಲಿ ಭಾಗಿಯಾಗಿರುವುದು ಸಂತಸದ ವಿಚಾರ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಂ ಮಾತನಾಡಿ, ಪ್ರತಿವರ್ಷ ಮಂಡ್ಯ ಪತ್ರಕರ್ತರ ಸಂಘದಿಂದ ಕ್ರೀಡಾಕೂಟ ನಡೆಸಲಾಗುತ್ತಿದೆ. ಪತ್ರಕರ್ತರು ಹಾಗೂ ಅವರ ಕುಟುಂಬ ಕ್ರೀಡಾಕೂಟದಲ್ಲಿ ಭಾಗಿಯಾಗುತ್ತಿರುವುದು ಒಳ್ಳೆಯ ವಿಚಾರ ಎಂದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್ ಮಾತನಾಡಿ, ಒತ್ತಡದಿಂದ ಕಾರ್ಯನಿರ್ವಹಿಸುವ ಪತ್ರಕರ್ತರು ಇಷ್ಟು ಉತ್ಸಾಹದಿಂದ ಕ್ರೀಡಾಕೂಟ ದಲ್ಲಿ ಭಾಗವಹಿಸಿದ್ದಲ್ಲದೇ ಅವರ ಕುಟುಂಬಸ್ಥರನ್ನು ಕರೆತಂದಿದ್ದಾರೆ ಎಂದರು.

ಜಿಲ್ಲೆಯ ವಿವಿಧೆಡೆಗಳಿಂದ 200 ಹೆಚ್ಚು ಪತ್ರಕರ್ತರು ಹಾಗೂ ಕುಟುಂಬ ಸದಸ್ಯರು ಆಗಮಿಸಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿದರು. ಪತ್ರಕರ್ತರ ಸಂಘದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ರಾಜ್ಯ ಪತ್ರಕರ್ತರ ಸಂಘದ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ಜಿಲ್ಲಾ ಸಂಘದ ಮಾಜಿ ಅಧ್ಯಕ್ಷರಾದ ಎಸ್.ಕೃಷ್ಣ ಸ್ವರ್ಣಸಂದ್ರ, ಬಿ.ಪ್ರಕಾಶ್, ನವೀನ್, ಪ್ರಧಾನ ಕಾರ್ಯದರ್ಶಿ ಆನಂದ, ಖಜಾಂಚಿ ನಂಜುಂಡಸ್ವಾಮಿ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



ಮಂಡ್ಯದ ಬಾಲಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ರವೀಂದ್ರ ಕೆಂಪಯ್ಯ, ಪ್ರತಿಮಾ ರಮೇಶ್, ಉಷಾರಾಣಿ, ಚಿಕ್ಕಸಿದ್ದಪ್ಪ, ಹಾಲಹಳ್ಳಿ ಮಹೇಶ್, ಕೆ.ಶಂಭು, ಕೃಷ್ಣ ಸ್ವರ್ಣಸಂದ್ರ, ಜಿ.ವಿ.ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮಹಾರಾಜರ ಬಗ್ಗೆ ಡಾ.ಯತೀಂದ್ರ ಹೇಳಿಕೆ ಖಂಡಿಸಿ ಪ್ರತಿಭಟನೆ



ಎಂಎಲ್‌ಸಿ ಡಾ.ಯತೀಂದ್ರ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಶ್ರೀರಂಗಪಟ್ಟಣ, ಜು.29– ಮೈಸೂರು ಮಹಾರಾಜರ ಬಗ್ಗೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಹೇಳಿಕೆ ಖಂಡಿಸಿ ಪಟ್ಟಣದಲ್ಲಿ ಭೂಮಿ ತಾಯಿ ಹೋರಾಟ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ರೈತ ಮುಖಂಡ ಕೆ.ಎಸ್ ನಂಜುಂಡೇಗೌಡ, ಸಮಿತಿ ಅಧ್ಯಕ್ಷ ಬಿ.ಸಿ.ಕೃಷ್ಣೇಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಡಾ.ಯತೀಂದ್ರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಯದುವಂಶದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಮರೆಯಲು ಸಾಧ್ಯವಿಲ್ಲ. ಅನೇಕ ಉದ್ದಿಮೆಗಳ ತೆರೆದು ಲಕ್ಷಾಂತರ ಜನರಿಗೆ ಉದ್ಯೋಗ ಸೃಷ್ಟಿಸಿ ಅವರ ಬದುಕಿಗೆ ಬೆಳಕಾದರು. ಅಂತಹವರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ. ಯದುವಂಶದ ಹೆಸರೇಳಲು ಯೋಗ್ಯತೆ ಇಲ್ಲದವರು ಇಂದು ಅವರ ಕೊಡುಗೆ ಏನು ಇಲ್ಲ ಎಂದು ಹೇಳುತ್ತಿದ್ದಾರೆ. ಕೂಡಲೇ ಅವರು ತಮ್ಮ ಹೇಳಿಕೆ ಹಿಂಪಡೆದು ಕ್ಷಮೆ ಕೋರಿ, ದೊಡ್ಡ ಮನುಷ್ಯನಾಗಬೇಕು. ಇಲ್ಲದಿದ್ದರೇ ಮುಂದಿನ ಚುನಾವಣೆಯಲ್ಲಿ ಅವರು ಸ್ಪರ್ಧಿಸುವ ಕ್ಷೇತ್ರದಲ್ಲಿ ಮೈಸೂರು ಮಹಾರಾಜರಿಂದ ಅನುಕೂಲ ಪಡೆದ ಪ್ರತಿಯೊಬ್ಬರೂ ಇವರ ವಿರುದ್ಧ ಮತ ಹಾಕಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ಮಾತನಾಡಿ, ಮೈಸೂರು ಮಹಾರಾಜರು ಏಷ್ಯಾ ಖಂಡದಲ್ಲೇ ಮೊಟ್ಟ ಮೊದಲ ಬಾರಿಗೆ ವಿದ್ಯುತ್ ಉತ್ಪಾದಿಸಿ ದಾಖಲೆ ನಿರ್ಮಿಸಿದರು. ಆದರೆ ಸಿಎಂ ಸಿದ್ದರಾಮಯ್ಯ ಅವರು ಬೆಂಗಳೂರಿನಲ್ಲಿ ತನ್ನ ಸೊಸೆ ಹೆಸರಿನಲ್ಲಿ ಏಷ್ಯಾ ಖಂಡಕ್ಕೆ ದೊಡ್ಡದಾದ ಪಬ್ ಕಟ್ಟಿಸಿ ತಮ್ಮ ಕುಟುಂಬದ ಆಸ್ತಿ ಮಾಡಿಕೊಂಡಿರುವುದು ಅವರ ದೊಡ್ಡ ಸಾಧನೆಯಾಗಿದೆ. ಹೀಗಾಗಿ ಮೈಸೂರು ಮಹಾರಾಜರ ಬಗ್ಗೆ ಲಘುವಾಗಿ ಮಾತನಾಡಿರುವ ಎಂಎಲ್‌ಸಿ ಡಾ.ಯತೀಂದ್ರ ತಮ್ಮ ಹೇಳಿಕೆ ವಾಪಸ್ ಪಡೆದು ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದರು.

ಈ ವೇಳೆ ಸಮಿತಿ ಕಾರ್ಯದರ್ಶಿ ಎಂ.ವಿ.ಕೃಷ್ಣ, ಮಹಾದೇವು, ದರ್ಶನ್, ನಾಗರಾಜು, ಜಯರಾಮು, ಮಹದೇವು, ರಾಮಚಂದ್ರು, ಶಿವಣ್ಣ, ರಾಮಕೃಷ್ಣ, ಪುರುಷೋತ್ತಮ್, ಸತ್ಯನಾರಾಯಣ್, ಶಿವರಾಜು, ಶಂಕರ್, ಮಹೇಶ್, ರಾಮಕೃಷ್ಣ, ಕೆಂಪೇಗೌಡ ಸೇರಿದಂತೆ ನೂರಾರು ಮಂದಿ ಇದ್ದರು.

ರೈತರು ಕಡ್ಡಾಯವಾಗಿ ರಾಸು ವಿಮೆ ಮಾಡಿಸಿ



ಅಧಿಕ ಹಾಲು ಪೂರೈಕೆ ಮಾಡಿದ ರೈತರನ್ನು ಸನ್ಮಾನಿಸಲಾಯಿತು.

ಪಾಂಡವಪುರ, ಜು.29– ಹಾಲು ಉತ್ಪಾದಕರ ಸಹಕಾರ ಸಂಘಗಳು ದೇವಸ್ಥಾನವಿದ್ದಂತೆ. ಇಲ್ಲಿ ರಾಜಕೀಯ ಮಾಡಬಾರದು. ಪ್ರತಿಯೊಬ್ಬ ರೈತರು ಕಡ್ಡಾಯವಾಗಿ ರಾಸು ವಿಮೆ ಮಾಡಿಸಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸಲಹೆ ನೀಡಿದರು.

ತಾಲೂಕಿನ ಕಟ್ಟೇರಿ ಡೇರಿ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹಾಲು ಉತ್ಪಾದನೆಯಲ್ಲಿ ಮನ್‌ಮುಲ್ ರಾಜ್ಯಕ್ಕೆ 3ನೇ ಸ್ಥಾನದಲ್ಲಿದೆ. ಹೀಗಾಗಿ ಯುವಕರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ರಾಸುಗಳಿಗೆ ವಿಮೆ ಮಾಡಿಸುವ ವಿಚಾರದಲ್ಲಿ ರೈತರು ನಿರ್ಲಕ್ಷ್ಯ ಮಾಡಬಾರದು, ವಿಮೆ ಮಾಡಿಸದೆ ಹಸುಗಳು ಅಕಾಲಿಕ ಮರಣ ಹೊಂದಿದರೆ ರೈತರಿಗೆ ನಯಾಪೈಸೆ ವಿಮೆ ಪರಿಹಾರ ದೊರೆಯುವುದಿಲ್ಲ. ಹಾಗಾಗಿ ಕಡ್ಡಾಯವಾಗಿ ಪ್ರತಿಯೊಬ್ಬ ಉತ್ಪಾದಕರು ರಾಸು ವಿಮೆ ಮಾಡಿಸಬೇಕು ಎಂದು ಸಲಹೆ ನೀಡಿದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್ ಮಾತನಾಡಿ, ಜಿಲ್ಲೆಯ 1307 ಡೇರಿಗಳ ಪೈಕಿ ಈಗಾಗಲೇ 919 ಡೇರಿಗಳಿಗೆ ಹಾಗೂ ತಾಲೂಕಿನ 148 ಡೇರಿಗಳ ಪೈಕಿ 107 ಡೇರಿಗಳಿಗೆ ಕಾಮನ್ ಸಾಫ್ಟ್‌ವೇರ್ ಅಳವಡಿಸಲಾಗಿದೆ ಎಂದರು.

ಡೇರಿ ಅಧ್ಯಕ್ಷೆ ಕೆ.ಎಸ್.ರಜಿನಿ ಮಾತನಾಡಿದರು. ಈ ವೇಳೆ ಅಧಿಕ ಹಾಲು ಉತ್ಪಾದಿಸಿದ ಕೆಆರ್.ನಾಗರಾಜು, ಶಂಕರ್, ಲಂಕೇಶ್ ಅವರನ್ನು ಅಭಿನಂದಿಸಲಾಯಿತು. ಡೇರಿ ಉಪಾಧ್ಯಕ್ಷೆ ಶಶಿಕಲಾ, ಮಾರ್ಗ ವಿಸ್ತರಣಾಧಿಕಾರಿ ನಾಗೇಂದ್ರ, ನಿರ್ದೇಶಕರಾದ ಸತೀಶ್, ರಾಮಚಂದ್ರ, ಅನಂತ, ರಘು, ಕುಮಾರ್, ಅನಿಲ್ ಕುಮಾರ್, ಮಂಜುನಾಥ್, ನಾಗರಾಜು, ಯಶೋಧಮ್ಮ, ಅನಂತರಾಜು, ಕಾರ್ಯದರ್ಶಿ ಎ.ದೇವ ರಾಜು, ಸಿಬ್ಬಂದಿಗಳಾದ ಸುದೀಪ್, ಪರಮೇಶ್, ಲತಾ ಸೇರಿದಂತೆ ಇತರರು ಹಾಜರಿದ್ದರು.

ಜಯರಾಂ ನಿಧನ



ಶ್ರೀರಂಗಪಟ್ಟಣ, ಜು.29– ಶ್ರೀರಂಗಪಟ್ಟಣ ತಾಲೂಕಿನ ಮಜ್ಜಿಗೆ ಪುರ ಗ್ರಾಮದ ನಿವಾಸಿ ಹಾಗೂ ಇಲವಾಲದ ರಾಘವೇಂದ್ರ ಬಾರ್ ಮಾಲೀಕರು ಮತ್ತು ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕರಾದ ಜಯರಾಂ (83) ಅವರು ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ ಜಯಲಕ್ಷ್ಮಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ (ಬುಧವಾರ) ಸ್ವಗ್ರಾಮ ಮಜ್ಜಿಗೆಪುರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ಹಾಗೂ ನಿರ್ದೇಶಕರು ತೀವ್ರ ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

390 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ



ಮೈಸೂರಿನಲ್ಲಿ ಡ್ರಗ್ಸ್ ದೊರೆತ ಹಿನ್ನೆಲೆಯಲ್ಲಿ ನಗರದ ಹಲವು ಸ್ಥಳಗಳ ಮೇಲೆ ಮಂಗಳವಾರ ದಿಢೀರ್ ದಾಳಿ ಮಾಡಿದ ಅಬಕಾರಿ ಇಲಾಖೆಯವರು ಪರಿಶೀಲನೆ ನಡೆಸಿದರು. ಈ ವೇಳೆ ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು.

ನಗರದ ಕೆಲವೆಡೆ ಅಬಕಾರಿ ಇಲಾಖೆಯವರ ದಾಳಿ

ಮೈಸೂರಿನಲ್ಲಿ ಡ್ರಗ್ಸ್ ಪತ್ತೆಯಾದ ಪ್ರಕರಣದ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆಯವರು ಇಂದು ನಗರದ ಹಲವೆಡೆ ದಿಢೀರ್ ದಾಳಿ ನಡೆಸಿ, ಪರಿಶೀಲನೆ ಮಾಡಿದ್ದಾರೆ. ಮೈಸೂರಿನ ವಂದೇ ಮಾತರಂ ಕಾಲೋನಿ, ಸಾಯಿಬಾಬಾ ಕಾಲೋನಿ, ಯಲ್ಲಮ್ಮ ಕಾಲೋನಿ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದರು. ಆದರೆ, ಯಾವುದೇ ಡ್ರಗ್ಸ್ ಪತ್ತೆಯಾಗಿಲ್ಲ. ಈ ವೇಳೆ ಮಾದಕ ವಸ್ತುಗಳ ಸೇವನೆ, ಮಾರಾಟದ ವಿರುದ್ಧ ಅಬಕಾರಿ ಇಲಾಖೆಯವರು ಜನರಲ್ಲಿ ಜಾಗೃತಿ ಮೂಡಿಸಿದರು. ಅಲ್ಲದೆ ಡ್ರಗ್ಸ್ ಮಾರಾಟದ ಬಗ್ಗೆ ಮಾಹಿತಿ ತಿಳಿದು ಬಂದರೆ ಅಬಕಾರಿ ಅಥವಾ ಪೊಲೀಸರಿಗೆ ತಿಳಿಸಿ ಎಂದು ಸಲಹೆ ನೀಡಿದರು.

ಮುಂಬೈ ಪೊಲೀಸರ ವಿಶೇಷ ತಂಡ ಜು.25 ರಂದು ಮುಂಬೈನ ಬಾಂದ್ರಾ ರಿಕ್ಲಮೇಷನ್ ವಸತಿ ಪ್ರದೇಶದ ಸಲೀಂ ಇಮ್ತಿಯಾಜ್ ಶೇಖ್ ಅಲಿಯಾಸ್ ಸಲೀಂ ಲಾಂಗ್ಡಾ ಎಂಬಾತನ್ನು ಬಂಧಿಸಿದರು. ಸಲೀಂ ಲಾಂಗ್ಡಾನನ್ನು ತೀವ್ರ ವಿಚಾರಣೆಗೊಳಪಡಿಸಿ ದಾಗ ಡ್ರಗ್ಸ್ ಜಾಲ ನಿರ್ಣಾಯಕ ತಿರುವು ಪಡೆಯಿತು. ಮಹಾರಾಷ್ಟ್ರ, ಗುಜರಾತ್ ಸೇರಿದಂತೆ ದೇಶದ ವಿವಿಧೆಡೆಗೆ ಮೈಸೂರಿನಲ್ಲಿ ತಯಾರಾಗುವ ಡ್ರಗ್ಸ್ ಸರಬರಾಜಾಗುತ್ತಿದೆ ಎಂಬ ಸ್ಫೋಟಕ ಮಾಹಿತಿ ನೀಡಿದ್ದ.

ಇದರಿಂದ ಅಲರ್ಟ್ ಆದ ಮುಂಬೈ ಡಿಸಿಪಿ ದತ್ತ ನಲವಾಡೆ ಅವರು ಇನ್ಸ್‌ಪೆಕ್ಟರ್ ಪ್ರಮೋದ್ ದಾವ್ಡೆ, ಸಬ್ ಇನ್ಸ್‌ಪೆಕ್ಟರ್‌ಗಳಾದ ದಯಾನಂದ ವಾಲ್ವೆ ಹಾಗೂ ಪಂಕಜ್ ಪರ್ದೇಶಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿದರು.

ಡ್ರಗ್ಸ್ ತಯಾರಿಕಾ ಜಾಲದ ಬಗ್ಗೆ ಜುಲೈ 25 ರಂದು ಮಾಹಿತಿ ಪಡೆದಿದ್ದು, ಜುಲೈ 26ರಂದು ಮುಂಬೈ ಪೊಲೀಸರ ತಂಡ ಮೈಸೂರಿಗೆ ಬಂದಿಳಿದಿತ್ತು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರ ಜೊತೆ ಸಮಾಲೋಚಿಸಿ, ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಾಳಿ ಮಾಡಲು ಯೋಜನೆ ರೂಪಿಸಿತ್ತು.

ಜು.26ರಂದು ಸಂಜೆ ಮೈಸೂರು ಪೊಲೀಸರ ನೆರವಿನೊಂದಿಗೆ ಮುಂಬೈ ಪೊಲೀಸರು ರಿಂಗ್ ರಸ್ತೆಯಲ್ಲಿರುವ ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಿಢೀರ್ ದಾಳಿ ಮಾಡಿದ್ದರು. ದಾಳಿ ವೇಳೆ ಮೆಫೆಡ್ರೋನ್ (ಎಂಡಿ) ಕ್ಯಾಥಿನೋನ್‌ಗೆ ಸಂಬಂಧಿಸಿದ ರಾಸಾಯನಿಕ ವಸ್ತುಗಳು ಪತ್ತೆಯಾದವು. ಈ ರಾಸಾಯನಿಕದಿಂದ ಎಂಡಿಎಂಎ ಮತ್ತು ಕೋಕೇನ್‌ನಂತಹ ಡ್ರಗ್ಸ್ ತಯಾರಿಸುತ್ತಿರುವುದು ಕಂಡು ಬಂದಿತ್ತು.

ಡ್ರಗ್ಸ್ ತಯಾರಿಕೆಗೆ ಬಳಸುವ ಓವನ್‌ಗಳು, ಹೀಟರ್‌ಗಳು, ಕಂಟೇನರ್‌ಗಳು, ಭಟ್ಟಿ ಇಳಿಸುವ ಉಪಕರಣಗಳು, ಪ್ಲಾಸ್ಟಿಕ್ ಕ್ರೇಟ್‌ಗಳು ಹಾಗೂ ಡ್ರಗ್ಸ್ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಒಟ್ಟಾರೆ ಡ್ರಗ್ಸ್ ತಯಾರಿಕಾ ಹಾಗೂ ಮಾರಾಟ ಜಾಲವನ್ನು ಜಾಲಾಡಿರುವ ಪೊಲೀಸರು ಅಂತರ ರಾಷ್ಟ್ರೀಯ ಮಾರುಕಟ್ಟೆ ಯಲ್ಲಿ 390 ಕೋಟಿ ರೂಪಾಯಿ ಮೌಲ್ಯದ 192 ಕೆ.ಜಿ. ಡ್ರಗ್ಸ್‌ನ್ನು ವಶಪಡಿಸಿಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ.

ಅನುಮಾನಾಸ್ಪದ ವಾತಾವರಣವಿದ್ದರೆ ಪೊಲೀಸರಿಗೆ ತಿಳಿಸಿ

ಮೈಸೂರಿನ ಶೆಡ್‌ಗಳಲ್ಲಿ ಅಕ್ರಮ ವಸ್ತುಗಳನ್ನು ತಯಾರಿಸುತ್ತಿದ್ದ ಎರಡನೇ ಪ್ರಕರಣ ಇದಾಗಿದೆ. ಈ ಮೊದಲು ಮೈಸೂರಿನ ಚಾಮುಂಡಿ ಬೆಟ್ಟದ ಬಳಿಯ ಹೊಸಹುಂಡಿ ಬಳಿ ಪ್ರಸಿದ್ಧ ನಂದಿನಿಯ ಹೆಸರಲ್ಲಿ ನಕಲಿ ತುಪ್ಪ ತಯಾರಿಸುತ್ತಿರುವುದು ಬಯಲಾಗಿತ್ತು. ಮೈಮುಲ್ ಅಧಿಕಾರಿಗಳ ಜೊತೆ ಪೊಲೀಸರು ನಕಲಿ ತುಪ್ಪ ತಯಾರಿಕೆ ಘಟಕದ ಮೇಲೆ ದಾಳಿ ಮಾಡಿ ನಾಲ್ವರನ್ನು ಬಂಧಿಸಿದ್ದರು.

ಈಗ ಡ್ರಗ್ಸ್ ತಯಾರಾಗುತ್ತಿದ್ದ ಸ್ಥಳ ಕೂಡ ಶೆಡ್ ಆಗಿದೆ. ನೋಡಲು ಕಾರ್ ಗ್ಯಾರೇಜ್‌ನಂತೆ ಕಂಡರೂ ಒಳಗೆ ಡ್ರಗ್ಸ್ ತಯಾರು ಮಾಡ ಲಾಗುತ್ತಿತ್ತು. ಡ್ರಗ್ಸ್ ತಯಾರಿಸುವಾಗ ಭಟ್ಟಿ ಇಳಿಸಲಾಗುತ್ತದೆ. ಆ ವೇಳೆ ಹೊರಗೆ ಹೊಗೆ ಬರುವುದನ್ನು ಯಾರೂ ಗಮನಿಸಿಲ್ಲ. ತಮ್ಮ ಮನೆಯ ಅಕ್ಕಪಕ್ಕ ಇಂತಹ ಶೆಡ್‌ಗಳು ಕಂಡು ಬಂದರೆ ಅಲ್ಲಿನ ವಾತಾವರಣ ಅನುಮಾನ ಹುಟ್ಟಿಸಿದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವಂತೆ ಪೊಲೀಸರು ಕೋರಿದ್ದಾರೆ.

ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ!

ಮಧ್ಯೆಯೇ ಸಾಕಷ್ಟು ತಿಕ್ಕಾಟಗಳಿವೆ, ಮೊದಲು ಆ ಸಮಸ್ಯೆಗಳನ್ನು ಸರಿಮಾಡಿಕೊಳ್ಳಲಿ ಎಂದರು.

ಇದು ಹೊಸದೇನಲ್ಲ: ಮತ್ತೊಂದೆಡೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಮುಂದಿನ ಎರಡೂವರೆ ವರ್ಷಗಳಲ್ಲಿ ಕ್ಷೇತ್ರವಾರು ಸಾಧ್ಯವಿರುವ ಅಭಿವೃದ್ಧಿ ಕಾರ್ಯ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಸಕರ ಸಭೆ ಕರೆದಿದ್ದಾರೆ.

ಇತರೆ ಅಭಿವೃದ್ಧಿ ಕಾರ್ಯ ಹಾಗೂ ಪಕ್ಷ ಸಂಘಟನೆ ಬಗ್ಗೆಯೂ ಮಾತನಾಡುತ್ತಾರೆ. ಇದು ಹೊಸದೇನಲ್ಲ. 2013ರಿಂದ 2018ರವರೆಗೆ ಕೆಪಿಸಿಸಿ ಕಚೇರಿಯಲ್ಲಿ ಸಭೆ ಮಾಡಿದ್ದರು. ಆಗ ನಾನು ಅಧ್ಯಕ್ಷನಾಗಿದ್ದೆ, ಎಲ್ಲ ಶಾಸಕರ ಸಮಸ್ಯೆ ಆಲಿಸಿದ್ದೆವು, ಪ್ರಸಕ್ತ ಐದು ವರ್ಷ ಆಡಳಿತಾವಧಿಯ ಮಧ್ಯದಲ್ಲಿದ್ದೇವೆ. ಶಿವಕುಮಾರ್ ಅವರನ್ನು ಶಾಸಕರ ಸಭೆಗೆ ಮುಖ್ಯಮಂತ್ರಿ ಕರೆದಿರಬಹುದು. ಆದರೆ, ಅವರಿಗೆ ಆರೋಗ್ಯ ಸರಿಯಿಲ್ಲ ಡೆಂಗ್ಯೂ ಇದೆ ಎಂಬುದಾಗಿ ಕೇಳಿದ್ದೆ. ಈ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದರು.

ಬೆಳ್ಳಿ ಪದಾರ್ಥ ಕಳವು

ಇಬ್ಬರು ಭದ್ರತಾ ಸಿಬ್ಬಂದಿಗಳಲ್ಲಿ ಓರ್ವ ಹೊರರಾಜ್ಯದವನು. ಸಿಸಿಟಿವಿ ದೃಶ್ಯಗಳನ್ನ ಆಧರಿಸಿ ಶೀಘ್ರವೇ ಕಳ್ಳರನ್ನ ಬಂಧಿಸುತ್ತೇವೆ. ಇದಕ್ಕಾಗಿ ನಾಲ್ಕು ತಂಡ ರಚನೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಲಾಕರ್ ತೆಗೆಯಲಾಗಿಲ್ಲ: ವಿವಿಧ ವಸ್ತುಗಳ ಅಚ್ಚಿನಲ್ಲಿ ತುಂಬಿದ್ದ ಬೆಳ್ಳಿಯನ್ನು ಮಾತ್ರ ಖದೀಮರು ಕದ್ದೊಯ್ದಿದ್ದಾರೆ. ಲಾಕರ್ ತೆಗೆಯಲು ನಡೆಸಿರುವ ಪ್ರಯತ್ನ ವಿಫಲವಾಗಿದೆ. ಏನಾದರೂ ಲಾಕರ್ ತೆರೆದಿದ್ದರೆ 350 ಕೆಜಿಗಿಂತಲೂ ಹೆಚ್ಚು ಪ್ರಮಾಣದ ಬೆಳ್ಳಿ ಖದೀಮರ ಪಾಲಾಗುತ್ತಿತ್ತು. ಭದ್ರತಾ ಸಿಬ್ಬಂದಿಗೆ ಗನ್ ತೋರಿಸಿ ಬೆದರಿಸಿದ್ದರು. ಸಿಸಿಟಿವಿ ಸಿಡಿಆರ್ ಅನ್ನೂ ಕದ್ದೊಯ್ದಿದ್ದಾರೆ ಎಂದು ಮತ್ತೊಂದು ಮೂಲದಿಂದ ತಿಳಿದುಬಂದಿದೆ. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಕ ವಸ್ತು ಜಾಲವನ್ನು ಜಾಲಾಡುತ್ತಿರುವ ಮೈಸೂರು ನಗರ ಪೊಲೀಸರು

ಹಲವರ ವಿರುದ್ಧ ಪ್ರಕರಣ ದಾಖಲು



ಮಂಗಳವಾರ ರಾತ್ರಿ ವಶಪಡಿಸಿಕೊಂಡ ಗಾಂಜಾ



ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಎನ್.ಆರ್.ಮೊಹಲ್ಲಾದ ವಿವಿಧೆಡೆ ಮಂಗಳವಾರ ರಾತ್ರಿ ಕಾರ್ಯಾಚರಣೆ ನಡೆಸಲಾಯಿತು.

ಮೈಸೂರು, ಜು.29(ಎಸ್‌ಬಿಡಿ)– ಮಾದಕ ವಸ್ತು ಜಾಲದ ವಿರುದ್ಧ ಸಮರ ಸಾರಿರುವ ಮೈಸೂರು ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ಮುಂದುವರೆಸಿದ್ದು, ಮಂಗಳವಾರ ರಾತ್ರಿ ಎನ್.ಆರ್.ಮೊಹಲ್ಲಾ ಸೇರಿದಂತೆ ವಿವಿಧೆಡೆ ತಲಾಶ್ ನಡೆಸಿದ್ದಾರೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಡಿಸಿಪಿಗಳು, ಎಸಿಪಿಗಳು ಸೇರಿದಂತೆ ಎಲ್ಲಾ ಹಂತದ ಅಧಿಕಾರಿ ಹಾಗೂ ಸಿಬ್ಬಂದಿ ಮಿಂಚಿನ ಕಾರ್ಯಾಚರಣೆ ನಡೆಸಿ, ಗಾಂಜಾ ನಶೆಯಲ್ಲಿದ್ದವರಿಗೆ ಬಿಸಿ ಮುಟ್ಟಿಸಿದ್ದಾರೆ.

ಇಂದಿನ ಕಾರ್ಯಾಚರಣೆ ವೇಳೆ 584 ಗ್ರಾಂ ಗಾಂಜಾ ಹಾಗೂ 5 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಮಾದಕ ವಸ್ತು ಸೇವನೆ ಮಾಡಿದ್ದ 28 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ಇನ್ನೂ 48 ಮಂದಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಉದಯಗಿರಿ ಠಾಣೆ ವ್ಯಾಪ್ತಿಯಲ್ಲಿ ನಾಲ್ಕು, ಮಂಡಿ ಠಾಣೆ ವ್ಯಾಪ್ತಿಯಲ್ಲಿ ನಾಲ್ಕು ಹಾಗೂ ಲಷ್ಕರ್ ಠಾಣೆ ವ್ಯಾಪ್ತಿಯಲ್ಲಿ 2 ಮೆಡಿಕಲ್ ಶಾಪ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಲಾಗಿದ್ದು, ಮಾದಕ ವಸ್ತುವಾಗಿ ಮಾರಾಟವಾಗುತ್ತಿದೆ ಎನ್ನಲಾದ ಕೆಲ ಔಷಧಗಳ ಸ್ಯಾಂಪಲ್ ಸಂಗ್ರಹಿಸಲಾಗಿದೆ. ಹಾಗೆಯೇ ಪಡುವಾರಹಳ್ಳಿ, ಜಯಲಕ್ಷ್ಮೀಪುರಂ ವ್ಯಾಪ್ತಿಯ ಐದು ಪಿಜಿಗಳಲ್ಲಿ ಪರಿಶೀಲನೆ ನಡೆಸಿ, ನಿವಾಸಿಗಳು ಹಾಗೂ ಮಾಲೀಕರ ವಿಚಾರಣೆ ನಡೆಸಲಾಗಿದೆ.

ಕೆ.ಆರ್.ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಸಾಗಿಸುತ್ತಿದ್ದ ಅಪ್ರಾಪ್ತನೊಬ್ಬನನ್ನು ವಶಕ್ಕೆ ಪಡೆದಿದ್ದು, ಸಾರ್ವಜನಿಕರ ಮಾಹಿತಿ ಮೇರೆಗೆ ಗಾಂಜಾ ಸೇವನೆಗೆ ಗುಂಪುಗೂಡುವ ಸ್ಥಳಗಳ ಮೇಲೆ ನಿಗಾ ವಹಿಸಲಾಗಿದೆ. ಎನ್.ಆರ್.ಮೊಹಲ್ಲಾದಲ್ಲಿ ಕಾರು, ಆಟೋ, ದ್ವಿಚಕ್ರ ವಾಹನ ಸೇರಿದಂತೆ ಎಲ್ಲಾ ವಾಹನಗಳನ್ನು ಪರಿಶೀಲಿಸ ಲಾಗುತ್ತಿದೆ. ಗಲ್ಲಿಗಳ ಮೂಲೆ ಮೂಲೆಗಳನ್ನೂ ಬಿಡದೆ ನಶೆಯಲ್ಲಿದ್ದವರಿಗೆ ಬಿಸಿ ಮುಟ್ಟಿಸಲಾಗುತ್ತಿದೆ. ಅಪ್ರಾಪ್ತರು, 20 ವರ್ಷ ಆಸುಪಾಸಿನ ಯುವಕರೂ ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕಿಬಿದ್ದಿದ್ದಾರೆ. ಚಿಮಣಿ, ಸಿಗರೇಟ್, ಬೀಡಿ ನಳಿಗೆಗಳಲ್ಲಿ ಗಾಂಜಾ ತುಂಬಿಕೊಂಡು ಸಾರ್ವಜನಿಕ ಸ್ಥಳದಲ್ಲೇ ಸೇವನೆ ಮಾಡುವವರು ಕಾರ್ಯಾಚರಣೆಯಲ್ಲಿ ಪತ್ತೆಯಾಗಿದ್ದಾರೆ.

ಧರ್ಮಸ್ಥಳ ಪ್ರಕರಣ: 8 ಅಡಿ ಅಗೆದರೂ ಸಿಕ್ಕಿಲ್ಲ ಒಂದೂ ಕಳೇಬರ



ಧರ್ಮಸ್ಥಳ: ಧರ್ಮಸ್ಥಳ ರಹಸ್ಯ ಸಮಾಧಿ ಪ್ರಕರಣದ ತನಿಖೆ ನಿರ್ಣಾಯಕ ಹಂತ ತಲುಪಿದ್ದು, ಪ್ರಕರಣದ ಸಾಕ್ಷಿ-ದೂರುದಾರನಾಗಿರುವ ವ್ಯಕ್ತಿ ಶವಗಳನ್ನು ಹೂತಿದ್ದ 13 ಸ್ಥಳಗಳನ್ನು ಅಧಿಕಾರಿಗಳಿಗೆ ತೋರಿಸಿದ್ದನು. ಹೀಗಾಗಿ ಎಸ್‌ಐಟಿ ಅಧಿಕಾರಿಗಳು ಎಲ್ಲಾ ಕಾನೂನು ಪ್ರಕ್ರಿಯೆ ಮೂಲಕ ಸಮಾಧಿ ಅಗೆದಿದ್ದಾರೆ. ನೇತ್ರಾವತಿ ಸ್ನಾನಘಟ್ಟದ ಪಕ್ಕದಲ್ಲಿ ಗುರುತಿಸಿದ್ದ ಸಮಾಧಿ ಸ್ಥಳವನ್ನು ಅಗೆಯಲಾಗಿತ್ತು. ಆದರೆ ಮೊದಲ ಪ್ರಯತ್ನದಲ್ಲೇ ಎಸ್‌ಐಟಿ ತಂಡಕ್ಕೆ ಹಿನ್ನಡೆಯಾಗಿದೆ.

ಮೊದಲಿಗೆ ಕಾರ್ಮಿಕರ ಮೂಲಕ 4 ಅಡಿ ಅಗೆಯಲಾಗಿತ್ತು. ನಂತರ ಜೆಸಿಬಿ ಮೂಲಕ 8 ಅಡಿ ಅಗೆದರೂ ಯಾವುದೇ ಅಸ್ಥಿಪಂಜರ ಪತ್ತೆಯಾಗಿಲ್ಲ. ಹೀಗಾಗಿ ಮೊದಲ ಸಮಾಧಿ ಸ್ಥಳದ ಕಾರ್ಯಾಚರಣೆ ಅಂತ್ಯಗೊಳಿಸಲಾಗಿದೆ. ದೂರದಾರ ವ್ಯಕ್ತಿ 6 ಅಡಿಯಲ್ಲಿ ಶವ ಹೂತಿಟ್ಟಿರುವುದಾಗಿ ಹೇಳಿದ್ದನು. ಆದರೆ 6 ಅಡಿಯಲ್ಲೂ ಸಿಗದ ಕಾರಣ 8 ಅಡಿ ಅಗೆಯಲಾಗಿತ್ತು. ಹೀಗಾಗಿ ಸಮಾಧಿ ಕಾರ್ಯಾಚರಣೆ ಅಂತ್ಯಗೊಳಿಸಲಾಗಿದೆ. ಇದೀಗ ದೂರುದಾರ ಗುರುತಿಸಿದ 2ನೇ ಸಮಾಧಿ ಸ್ಥಳ ಅಗೆಯುವ ಕಾರ್ಯ ನಾಳೆ ಆರಂಭಗೊಳ್ಳಲಿದೆ.

ಮೆಹಫಿಲ್-ಇ-ದಾರುದ್ ಷರೀಫ್; ಗ್ಯಾರ್‌ವಿ ಷರೀಫ್, ಖತ್ಮೆ ಖಾದ್ರಿಯಾ ಆಚರಣೆ

ಮೈಸೂರು, ಜು.29– ಹಝರತ್ ಸೈಯದ್ ಷಾ ಮೊಹಮ್ಮದ್ ಅಲ್ತಾಫ್ ಪೀರಾನ್ ಖಾದ್ರಿಯ ಶುತ್ತಾರಿ ಸಾಹೆಬ್, ಸಜ್ಜದ ನಷೀನ್ (ದರ್ಗಾ), ಬಡಾ ಮಕಾನ್, ಟಿಪ್ಪು ಸರ್ಕಲ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಮೆಹಫಿಲ್ ದಾರುದ್ ಷರೀಫ್, ಗ್ಯಾರ್‌ವಿ ಷರೀಫ್, ಖತ್ಮೆ ಖಾದ್ರಿಯ ಆಯೋಜಿಸಲಾಗಿತ್ತು.

ಮೈಸೂರಿನ ಪ್ರಖ್ಯಾತ ತಂಡ ಸೈಯದ್ ಅಕ್ಬರ್ ಅವರು ಮೆಹಫಿಲ್ ನಾತ್-ಒ-ಷರೀಫ್ - ಪ್ರವಾದಿ ಮೊಹಮ್ಮದ್ ಪಿಬಿಹೆಚ್‌ಯು ಶ್ಲೋಕಗಳನ್ನು ಪ್ರಸ್ತುತಪಡಿಸಿದರು. ನಂತರ ಫಾತೆಹಾಖಾನಿ, ದಾರುದ್ ಸಲಾಂ, ದುವಾ ನೆರವೇರಿಸಲಾಯಿತು. ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿಯ ಅಧ್ಯಕ್ಷ ಅಜೀಜ್ ಉಲ್ಲಾ (ಅಜ್ಜು) ಹಝರತ್ ಚಾರ್ ಬರಸ್ ಕೆ ಪೀರ್ (ಆರ್.ಎ) ಗೋರಿಗೆ ಹೂವನ್ನು ಹರಡಿ ಪುಷ್ಪ ನಮನ ಸಲ್ಲಿಸಿದರು.

ಮೆಹಫಿಲ್ ಕಾರ್ಯಕ್ರಮದಲ್ಲಿ ಮೆಹನಾಜ್-ಉಲ್-ಕುರಾನ್ ಮೈಸೂರು ಶಾಖೆಯ ಪದಾಧಿಕಾರಿಗಳಾದ ಸೈಯದ್ ಸರ್ವರ್ ಸಾಹೆಬ್, ರೆಹಮಾನ್ ಷರೀಫ್, ಸೈಯದ್ ಅಹಮದ್ ಅಶ್ರಫಿ ಮತ್ತು ಹೆಚ್ಚಿನ ಸಂಖ್ಯೆಯ ಗಣ್ಯರು ಭಾಗವಹಿಸಿದ್ದರು.



ಮೈಸೂರು ಮಿತ್ರ

ಬುಧವಾರ 30 ಜುಲೈ 2025

ಮೈಸೂರು ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರಗಳ ಕೊರತೆ ಇಲ್ಲ

ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ಸ್ಪಷ್ಟನೆ

ಮೈಸೂರು, ಜು.29(ಎಂಕೆ)– ಮೈಸೂರು ಜಿಲ್ಲೆಯಲ್ಲಿ ಯೂರಿಯಾ ಸೇರಿದಂತೆ ಯಾವುದೇ ಬಗೆಯ ರಾಸಾಯನಿಕ ಗೊಬ್ಬರಗಳ ಕೊರತೆ ಇಲ್ಲ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ತಿಳಿಸಿದ್ದಾರೆ.

ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ಜಿಲ್ಲೆಯಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿಯೇ ರಾಸಾಯನಿಕ ಗೊಬ್ಬರ ದಾಸ್ತಾನು ಇದ್ದು, ಮುಂದಿನ ಆಗಸ್ಟ್ ತಿಂಗಳಿನಲ್ಲಿಯೂ ಕೇಂದ್ರ ಕಚೇರಿಯಿಂದ ರಸಗೊಬ್ಬರ ಪೂರೈಕೆಯಾಗಲಿದೆ. ಹಾಗಾಗಿ ರೈತರು ಅನಗತ್ಯ ಗೊಂದಲಕ್ಕೀಡಾಗಬಾರದು ಎಂದಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 59,173 ಮೆಟ್ರಿಕ್ ಟನ್ ರಾಸಾಯನಿಕ ಗೊಬ್ಬರ ಬೇಡಿಕೆ ಇದ್ದು, ಕಳೆದ ವರ್ಷಕ್ಕಿಂತ ಹೆಚ್ಚು ಪ್ರದೇಶದಲ್ಲಿ ಈ ವರ್ಷ ಬಿತ್ತನೆಯಾಗಿರುವುದರಿಂದ ಇದುವರೆಗೆ 91,508 ಮೆಟ್ರಿಕ್ ಟನ್ ವಿವಿಧ ಬಗೆಯ ರಾಸಾಯನಿಕ ಗೊಬ್ಬರ ಮಾರಾಟವಾಗಿದೆ. ಕಳೆದ ವರ್ಷ ಇದೇ ವೇಳೆಗೆ ಶೇ.50ರಷ್ಟು ಬಿತ್ತನೆಯಾಗಿದ್ದು, ಈ ವರ್ಷ ಶೇ.57 ರಷ್ಟಾಗಿದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಮಳೆ ಆಗಿರಲಿಲ್ಲ. ಈ ವರ್ಷ ಏಪ್ರಿಲ್‌ನಲ್ಲಿ ಉತ್ತಮ ಮಳೆಯಾಗಿದೆ. 56 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನಜೋಳ ಬಿತ್ತನೆ ಗುರಿಯಿದ್ದು, ಈಗಾಗಲೇ 58 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುವುದರಿಂದ ಅಗತ್ಯಕ್ಕಿಂತ ಹೆಚ್ಚಾಗಿ ರಾಸಾಯನಿಕ ಗೊಬ್ಬರ ಬಳಕೆ ಮಾಡಲಾಗಿದೆ ಎಂದು ತಿಳಿಸಿದರು.



ಕೆ.ಹೆಚ್.ರವಿ

ಆಗಸ್ಟ್ ತಿಂಗಳಿಗೆ 7,400 ಮೆಟ್ರಿಕ್ ಟನ್ ಯೂರಿಯಾ, 1,167 ಮೆಟ್ರಿಕ್ ಟನ್ ಡಿಎಪಿ, 833 ಮೆಟ್ರಿಕ್ ಟನ್ ಪೊಟ್ಯಾಷ್ (ಎಂಒಪಿ), 6,628 ಮೆಟ್ರಿಕ್ ಟನ್ ಎನ್‌ಪಿಕೆ(ಸಂಯುಕ್ತ ರಾಸಾಯನಿಕ ಗೊಬ್ಬರ), 522 ಮೆಟ್ರಿಕ್ ಟನ್ ಸಿಂಗಲ್ ಸಲ್ಫೇಟ್ ಪಾಸ್ಫೇಟ್ ಸೇರಿ ಒಟ್ಟು 16,550 ಮೆಟ್ರಿಕ್ ಟನ್ ಅಗತ್ಯವಿದೆ. ಸದ್ಯಕ್ಕೆ ಜಿಲ್ಲೆಯಲ್ಲಿ 8,288 ಮೆಟ್ರಿಕ್ ಟನ್ ಯೂರಿಯಾ, 1,913 ಮೆಟ್ರಿಕ್ ಟನ್ ಡಿಎಪಿ, 2,972 ಮೆಟ್ರಿಕ್ ಟನ್ ಪೊಟ್ಯಾಷ್, 15,600 ಮೆಟ್ರಿಕ್ ಟನ್ ಎನ್‌ಪಿಕೆ, 1,677 ಮೆಟ್ರಿಕ್ ಟನ್ ಸಿಂಗಲ್ ಸಲ್ಫೇಟ್ ಪಾಸ್ಫೇಟ್ ಸೇರಿ ಇದೆ ಒಟ್ಟು 30,450 ವಿವಿಧ ಬಗೆಯ ರಾಸಾಯನಿಕ ಗೊಬ್ಬರಗಳು ಸ್ಟಾಕ್ ಇದೆ ಎಂದು ಮಾಹಿತಿ ನೀಡಿದರು.

ಮೂಲ ಗೊಬ್ಬರವಾಗಿ ಯೂರಿಯಾ ಬಳಸಬೇಡಿ: ರೈತರು ಪ್ರಮುಖವಾಗಿ ಭತ್ತ ನಾಟಿ ವೇಳೆ ಯಾವುದೇ ಕಾರಣಕ್ಕೂ ಯೂರಿಯಾವನ್ನು ಮೂಲ ಗೊಬ್ಬರವಾಗಿ ಬಳಸಬೇಡಿ. ಯಾವುದಾದರೂ ಸಂಯುಕ್ತ ರಾಸಾಯನಿಕ(ಎನ್‌ಪಿಕೆ) ಗೊಬ್ಬರ ಬಳಸಿ. ನಾಟಿಯಾದ 25 ದಿನಗಳ ನಂತರ ಮೊದಲ ಬಾರಿಗೆ ಹಾಗೂ 45–50 ದಿನಗಳಾದಾಗ ಎರಡನೇ ಬಾರಿಗೆ ಮೇಲು ಗೊಬ್ಬರವಾಗಿ ಯೂರಿಯಾ ಬಳಸಬೇಕು. ಹಾಗೆಯೇ ಯೂರಿಯಾ ಕಾಳು ದಪ್ಪಗಿದ್ದರೆ ಯಾವುದೇ ಸಮಸ್ಯೆ ಇಲ್ಲ. ಹಾಗಾಗಿ ರೈತರು ವಿವೇಚನಾ ಸಹಿತವಾಗಿ ಯೂರಿಯಾ ಬಳಕೆ ಮಾಡಿ ಎಂದು ತಿಳಿ ಹೇಳಿದರು.

ಲೈಸೆನ್ಸ್ ರದ್ದು: ಯೂರಿಯಾ ಹಾಗೂ ಇನ್ನಿತರೆ ರಾಸಾಯನಿಕ ಗೊಬ್ಬರಗಳು ಸಿಗಲ್ಲ ಎಂದು ಅನಧಿಕೃತವಾಗಿ ದಾಸ್ತಾನು ಮಾಡಿಕೊಳ್ಳುವುದು ಹಾಗೂ ಕೃತಕವಾಗಿ ಅಭಾವ ಸೃಷ್ಟಿಸಿದರೆ ಅಂತಹವರ ಲೈಸೆನ್ಸ್ ರದ್ದು ಮಾಡಲಾಗುವುದು ಎಂದು ಕೆ.ಹೆಚ್.ರವಿ ಎಚ್ಚರಿಸಿದರು.

ಕಾಂಗ್ರೆಸ್ ಸರ್ಕಾರದಿಂದ ಕಾಳಸಂತೆಯಲ್ಲಿ ಯೂರಿಯಾ ರಸಗೊಬ್ಬರ ಮಾರಾಟ!

ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಆರೋಪ

ಮೈಸೂರು, ಜು.29(ಎಂಕೆ)– ರೈತ ವಿರೋಧಿ ಕಾಂಗ್ರೆಸ್ ಸರ್ಕಾರ ಕಾಳ ಸಂತೆಯಲ್ಲಿ ಯೂರಿಯಾ ರಸಗೊಬ್ಬರ ಮಾರಾಟ ಮಾಡುತ್ತಿದೆ ಎಂದು ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಆರೋಪಿಸಿದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಸುದ್ದಿಗೋಷ್ಠಿ ನಡೆಸಿದರು. ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ನಗರಾಧ್ಯಕ್ಷ ಹೆಚ್.ಎಸ್.ದೇವರಾಜು ಮತ್ತಿತರರಿದ್ದರು.

ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯಕ್ಕೆ 6.30 ಲಕ್ಷ ಮೆಟ್ರಿಕ್ ಟನ್ ಯೂರಿಯಾ ರಸಗೊಬ್ಬರ ಅಗತ್ಯವಿದ್ದು, ಕೇಂದ್ರ ಸರ್ಕಾರ ಅಗತ್ಯಕ್ಕೂ ಹೆಚ್ಚು ಅಂದರೆ 8.73 ಲಕ್ಷ ಮೆಟ್ರಿಕ್ ಟನ್ ಯೂರಿಯಾ ನೀಡಿದೆ. ಆದರೆ, ರಾಜ್ಯ ಸರ್ಕಾರ ರೈತರಿಗೆ ವಿತರಣೆ ಮಾಡದೆ ಉಳಿದ 2.43 ಲಕ್ಷ ಮೆಟ್ರಿಕ್ ಟನ್ ಯೂರಿಯಾವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದೆ ಎಂದು ದೂರಿದರು.

ಎರಡು ವರ್ಷಗಳಿಂದ ಜನವಿರೋಧಿ ಆಡಳಿತ ನಡೆಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ರೈತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಿಜೆಪಿ ಸರ್ಕಾರ ನೀಡುತ್ತಿದ್ದ 'ರೈತ ವಿದ್ಯಾನಿಧಿ' ಯೋಜನೆ ನಿಲ್ಲಿಸಿದೆ. 52 ಲಕ್ಷ ರೈತರಿಗೆ ಬಿಜೆಪಿ ಸರ್ಕಾರ ನೀಡುತ್ತಿದ್ದ 4,000 ರೂ. 'ಕಿಸಾನ್ ಸಮ್ಮಾನ್ ನಿಧಿ' ಯನ್ನು ನಿಲ್ಲಿಸಿದೆ. ರೈತರ ಕೃಷಿ ಪಂಪ್‌ಸೆಟ್‌ಗೆ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಅನುದಾನ ನೀಡುತ್ತಿಲ್ಲ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಪ್ರತಿ ಕ್ವಿಂಟಾಲ್ ಬಿತ್ತನೆ ಬೀಜದ ಬೆಲೆ ಶೇ.20ರಷ್ಟು ಏರಿಕೆ ಮಾಡಲಾಗಿದೆ. ಬರ ಪರಿಹಾರಕ್ಕೆ ಕೇಂದ್ರ ಸರ್ಕಾರ ನೀಡಿದ್ದ 3,454 ಕೋಟಿ ರೂ. ಅನುದಾನವನ್ನು ಫಲಾನುಭವಿಗಳಿಗೆ ನೀಡದೆ ಲೂಟಿ ಹೊಡೆದಿದ್ದಾರೆ. ಕಳೆದ ಎರಡು ವರ್ಷದಲ್ಲಿ 3,400 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಭೂ ಸಿರಿ' ಯೋಜನೆಯಡಿ ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10,000 ರೂ. ಪ್ರೋತ್ಸಾಹ ಧನವನ್ನು ನಿಲ್ಲಿಸಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು.

ರೈತರಿಗೆ ನೀಡಬೇಕಾದ ಹಾಲಿನ ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿರುವ ರಾಜ್ಯ ಸರ್ಕಾರ, ಹಾವೇರಿ ಮತ್ತು ರಾಣಿಬೆನ್ನೂರಿನಲ್ಲಿ ರಸಗೊಬ್ಬರ ಖರೀದಿಸಲು ಮುಂದಾಗಿದ್ದ ರೈತರ ಮೇಲೆ ಲಾಠಿಚಾರ್ಜ್ ನಡೆಸಿರುವುದು ಅತ್ಯಂತ ಖಂಡನೀಯ. ಒಟ್ಟಾರೆ ಇದೊಂದು ರೈತ ವಿರೋಧಿ ಸರ್ಕಾರ ಎಂಬುದು ಸ್ಪಷ್ಟವಾಗಿದೆ ಎಂದು ಹೇಳಿದರು.

ಪ್ರತಿಭಟನೆ ಕೈ ಬಿಟ್ಟಿದ್ದೇವೆ: ರಾಜ್ಯದಲ್ಲಿ ಉಂಟಾಗಿರುವ ಯೂರಿಯಾ ಕೊರತೆ ಸಂಬಂಧ ಬಿಜೆಪಿ ಸಂಸದರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ಕೇಂದ್ರದಿಂದ ಯೂರಿಯಾ ಪೂರೈಕೆ ಮಾಡಲು ಒಪ್ಪಿಗೆ ನೀಡಲಾಗಿದೆ. ಹಾಗಾಗಿ ಪ್ರತಿಭಟನೆ ಕೈ ಬಿಟ್ಟಿದ್ದೇವೆ. ಇದೇ ಸಂದರ್ಭದಲ್ಲಿ ರಾಜ್ಯದ ರೈತರ ಕಷ್ಟಕ್ಕೆ ಸ್ಪಂದಿಸಿದ ಬಿಜೆಪಿ ಸಂಸದರಿಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದರು.

ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ನಗರಾಧ್ಯಕ್ಷ ಹೆಚ್.ಎಸ್.ದೇವರಾಜು, ಪ್ರಧಾನ ಕಾರ್ಯದರ್ಶಿಗಳಾದ ಮಡವಾಡಿ ಮಹೇಶ್, ಕಿರಣ್ ಜೈ ರಾಮೇಗೌಡ, ಮಹೇಶ್ ಬಾಬು, ವೆಂಕಟೇಶ್, ಜಿಲ್ಲಾ ವಕ್ತಾರ ದಯಾನಂದ ಪಟೇಲ್, ಮುಖಂಡ ರಮೇಶ್ ಕುಮಾರ್, ಜಿಲ್ಲಾ ಮಾಧ್ಯಮ ಸಂಚಾಲಕ ಮಹದೇವಸ್ವಾಮಿ, ನಗರ ಮಾಧ್ಯಮ ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಬಂಧಿಸಿ, ಪಕ್ಷದಿಂದ ಉಚ್ಚಾಟಿಸಿದ ಮಾತ್ರಕ್ಕೇ ಎಲ್ಲವೂ ಮುಗಿಯುವುದಿಲ್ಲ...!

“ಟಿ.ನರಸೀಪುರ ಪುರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ನಂಜುಂಡಸ್ವಾಮಿ ಕೋಟ್ಯಾಂತರ ರೂಪಾಯಿ ತೆರಿಗೆ ಹಣ ಗುಳುಂ ವಿಚಾರಕ್ಕೆ ಪ್ರತಿಕ್ರಿಯಿಸಿ, ಈ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಪುರಸಭೆ ಮುಖ್ಯಾಧಿಕಾರಿಯೇ ಮಾತನಾಡಿರುವ ಮೊಬೈಲ್ ಆಡಿಯೋದಲ್ಲಿ 40 ಕೋಟಿ ರೂ.ಅವ್ಯವಹಾರ ಆಗಿದೆ ಎಂದಿದ್ದಾರೆ. ಈ ಪ್ರಕರಣದ ಸಂಬಂಧ ನಂಜುಂಡಸ್ವಾಮಿಯನ್ನು ಬಂಧಿಸಲಾಗಿದೆ. ಕಾಂಗ್ರೆಸ್‌ನಿಂದಲೂ ಉಚ್ಚಾಟಿಸಲಾಗಿದೆ. ಬಂಧಿಸಿ, ಪಕ್ಷದಿಂದ ಉಚ್ಚಾಟಿಸಿದ ಮಾತ್ರಕ್ಕೇ ಎಲ್ಲವೂ ಮುಗಿಯುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರದಲ್ಲಿ ಈ ಪ್ರಕರಣ ನಡೆದಿದೆ. ಇದರ ಹಿಂದೆ ನಂಜುಂಡಸ್ವಾಮಿ ಮಾತ್ರವಲ್ಲದೇ, ಕೆಲ ಅಧಿಕಾರಿಗಳು ಕೂಡ ಶಾಮೀಲಾಗಿರುವ ಸಾಧ್ಯತೆ ಇದ್ದು, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಕೂಲಂಕುಷವಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು.

–ಕುಂಬರಹಳ್ಳಿ ಸುಬ್ಬಣ್ಣ, ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ

ಉಚಿತ ಕಿವಿ ತಪಾಸಣಾ ಶಿಬಿರ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಬ್ಯಾಂಕಿನ ಸದಸ್ಯರಿಗೆ (ಶ್ರವಣ) ಉಚಿತ ಕಿವಿ ತಪಾಸಣಾ ಶಿಬಿರವನ್ನು ಬ್ಯಾಂಕಿನಲ್ಲಿ ನಡೆಸಲಾಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ರವಿ, ನಿರ್ದೇಶಕರಾದ ಎಸ್‌ಬಿಎಂ ಮಂಜು, ಎನ್.ಯೋಗಾನಂದ್, ಜಿ.ನಿರಂಜನ್, ಆರ್.ರವಿಕುಮಾರ್, ಆರ್.ಸೋಮಣ್ಣ, ಕೆಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಎಂ.ಪ್ರಮೀಳಾ, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ

ಮೈಸೂರು: ಡಾ.ಜಿ.ಹೆಚ್.ನಾಗರಾಜ ಅವರ ಮಾರ್ಗದರ್ಶನದಲ್ಲಿ ಎಂ.ಸುರೇಶ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಣೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 26ನೇ ವರ್ಷದ ಕಾರ್ಗಿಲ್ ವಿಜಯ ದಿವಸ ಆಚರಣೆಯ ಅಂಗವಾಗಿ ಹುತಾತ್ಮರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಡಾ.ಪುಷ್ಪರಾಣಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಲೆಫ್ಟಿನೆಂಟ್ ಗಾಯತ್ರಿ, ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಹೆಚ್.ಶ್ರೀಧರ, ಸುಬೇದಾರ್ ಶಿವಸಿಂಗ್, ಅಧ್ಯಾಪಕ ಹಾಗೂ ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.29–ಜುಲೈ 30ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ರಾಜೀವ್‌ನಗರ 2ನೇ ಹಂತ, ವಾಟರ್ ಟ್ಯಾಂಕ್ ಹತ್ತಿರ, 80 ಅಡಿ ರಸ್ತೆ, ಡಾಲರ್ಸ್ ಕಾಲೋನಿ, ಮುನೇಶ್ವರ ದೇವಸ್ಥಾನ, ಎ.ಜೆ ಪಂಕ್ಷನ್ ಹಾಲ್, ಎಂಪೈರ್ ಬಡಾವಣೆ, ಸತ್ಯನಾರಾಯಣ ದೇವಸ್ಥಾನದ ಸುತ್ತ–ಮುತ್ತ, ತಾತಪ್ಪ ಬಡಾವಣೆ, ಕ್ಯೂಬಾ ಮಸೀದಿ, ಅಬ್ದುಲ್ ರೆಹಮಾನ್ ರಸ್ತೆ, ಉದಯಗಿರಿ, ಕೆ.ಹೆಚ್.ಬಿ ಕಾಲೋನಿ, ಜಕ್ರಿಯಾ ಮಸೀದಿ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ನಾಳೆ ಲಂಕೇಶ್ ಮಾಧ್ಯಮ ಪ್ರಶಸ್ತಿ ಪ್ರದಾನ

ಮೈಸೂರು,ಜು.29–ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲೂಕು ಸಿರಿಗೇರಿಯ ಅನ್ನಪೂರ್ಣ ಪ್ರಕಾಶನದ ವತಿಯಿಂದ ಕೊಡಮಾಡುವ ಲಂಕೇಶ್ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ ಜು.31ರಂದು ಸಂಜೆ 5ಕ್ಕೆ ಮೈಸೂರಿನ ಶ್ರೀ ನಟರಾಜ ಸಭಾ ಭವನದಲ್ಲಿ ನಡೆಯಲಿದೆ. ಮೈಸೂರಿನ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು, ತುಮಕೂರು ಪ್ರಜಾಪ್ರಗತಿ ಪತ್ರಿಕೆ ಸಂಪಾದಕ ಡಾ.ಎಸ್.ನಾಗಣ್ಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ನಟ ಪ್ರಕಾಶ್‌ರಾಜ್, ಪಿ.ಲಂಕೇಶ್ ಕುರಿತು ಮಾತನಾಡಲಿದ್ದು, ಲಂಕೇಶ್ ಅವರ ಪುತ್ರಿಯಾದ ನಿರ್ದೇಶಕಿ ಕವಿತಾ ಲಂಕೇಶ್, ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಕಾಶಕ ಸಿರಿಗೇರಿ ಯರಿಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿ ವಿತರಣೆ...



ಮೈಸೂರಿನ ಹೆಚ್.ವಿ.ರಾಜೀವ್ ಸ್ನೇಹ ಬಳಗ, ಮೈಸೂರಿನ ಪ್ರತಿಭೆ ವೇದಿಕೆ ವತಿಯಿಂದ ಕೃಷ್ಣಮೂರ್ತಿಪುರಂನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಊಟದ ತಟ್ಟೆ, ಲೋಟ, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು. ಪ್ರತಿಭೆ ವೇದಿಕೆ ಅಧ್ಯಕ್ಷ ಎಸ್.ರಾಜರತ್ನಂ, ಪ್ರಧಾನ ಕಾರ್ಯದರ್ಶಿ ಕೆ.ಇಂದುಮತಿ, ಹೆಚ್.ವಿ.ರಾಜೀವ್ ಸ್ನೇಹ ಬಳಗದ ಭಾಗ್ಯಶ್ರೀ ಆರ್.ಭಟ್, ಸಮಾಜ ಸೇವಕಿ ಜಯಶ್ರೀ, ಶಾಲಾ ಮುಖ್ಯ ಶಿಕ್ಷಕ ಮೋಹನ್‌ಕುಮಾರ್, ಶಿಕ್ಷಕಿ ಚಂಪಶ್ರೀ, ಸಹಾಯಕಿ ರೇಖಾ ಉಪಸ್ಥಿತರಿದ್ದರು.

ಮೈಸೂರು ಸಂಸ್ಥಾನದ ರಾಜರ ವಿರುದ್ಧ ಹೇಳಿಕೆ: ಡಾ.ಯತೀಂದ್ರ ಕ್ಷಮೆ ಯಾಚನೆಗೆ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಟ, ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ಮಾತನಾಡಿದರು.

ಬಿಜೆಪಿ ಮುಖಂಡ ಜಯಪ್ರಕಾಶ್ ಆಗ್ರಹ

ಮೈಸೂರು, ಜು.29(ಜಿಎ)–ಮೈಸೂರಿನ ರಾಜ ಸಂಸ್ಥಾನದ ವಿರುದ್ಧ ಯಾರೇ ಮಾತನಾಡಿದರು ಅದು ನಾಡಿನ ಜನತೆಗೆ ಮಾಡಿದ ಅಪಮಾನ. ಈ ಹಿನ್ನೆಲೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಬಹಿರಂಗ ಕ್ಷಮೆ ಯಾಚಿಸಬೇಕು ಎಂದು ನಟರೂ ಆದ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ (ಜೆಪಿ) ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯತೀಂದ್ರ ಸಿದ್ದರಾಮಯ್ಯ ತಮ್ಮ ತಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿವೃದ್ಧಿ ಕಾರ್ಯಗಳನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಮಹತ್ಕಾರ್ಯಗಳಿಗೆ ಹೋಲಿಕೆ ಮಾಡಿರುವುದು ತೀವ್ರ ಖಂಡನೀಯ ಎಂದು ಹೇಳಿದರು.

ನಾಡಿಗೆ ಹಲವು ಪ್ರಥಮಗಳನ್ನು ಕೊಟ್ಟಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಕೆಲಸಗಳು ನಾಡಿನಲ್ಲಿ ಇಂದಿಗೂ ಹಸಿರಾಗಿವೆ. ಶಿಕ್ಷಣ, ಆರೋಗ್ಯ, ನೀರಾವರಿ, ಕೈಗಾರಿಕೆ, ಸಾಮಾಜಿಕ ನ್ಯಾಯವನ್ನು ಒದಗಿಸಿದ ನಾಲ್ವಡಿ ಅವರ ಆಡಳಿತ ನಾಡಿನ ಸುವರ್ಣ ಯುಗ. ಹೀಗಾಗಿ ರಾಜರ ಸೇವೆಗಳನ್ನು ಮತ್ತೊಬ್ಬರಿಗೆ ಹೋಲಿಸಿ ಮಾತನಾಡುವುದೇ ತಪ್ಪು ಎಂದರು.

ಡಾ.ಯತೀಂದ್ರ, ಮಹಾರಾಜರ ಸಂಸ್ಥಾನದ ಚರಿತ್ರೆ ಸರಿಯಾಗಿ ಅಭ್ಯಾಸ ಮಾಡಿ ನಂತರ ಅವರ ಬಗ್ಗೆ ಮಾತನಾಡುವುದು ಸೂಕ್ತ. ರಾಜವಂಶಸ್ಥರ ತ್ಯಾಗವನ್ನು ಅರ್ಥಮಾಡಿಕೊಳ್ಳದೆ ಅವರನ್ನು ಯಾರಿಗೂ ಹೋಲಿಸಿ ಮಾತನಾಡಬಾರದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರು ಮೈಸೂರಿಗೆ ನೀಡಿರುವ ಯೋಜನೆಗಳನ್ನು, ಸೇವೆ ಬಗ್ಗೆ ಎಷ್ಟು ಬೇಕಾದರು ಹೊಗಳಲಿ. ಯಾವುದೇ ರಾಜಕಾರಣಿಗಳಿಗೆ ಹೋಲಿಸಿಕೊಳ್ಳಲಿ. ಆದರೆ ರಾಜರ ಜೊತೆ ಹೋಲಿಸಿಕೊಳ್ಳಲು ಹೋಗಬೇಡಿ. ಈ ರೀತಿಯ ಹೊಗಳಿಕೆ ಯಾವ ರಾಜಕೀಯ ಪಕ್ಷದವರು ಸಹಿಸುವುದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ತೇಜಸ್ ಲೋಕೇಶ್‌ಗೌಡ, ಭಾಗ್ಯಮ್ಮ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪೋದ್ದಾರ್ ಕಂಪನಿಯಿಂದ ರಾಜ್ಯದಲ್ಲಿ 758 ಕೋಟಿ ಹೂಡಿಕೆ; 3 ಸಾವಿರ ಉದ್ಯೋಗ

ಬೆಂಗಳೂರು, ಜು.29 (ಕೆಎಂಶಿ)– ಸಿಪಿಸಿ ಮತ್ತು ಪಿವಿಸಿ ಪೈಪ್ ಉತ್ಪಾದನೆಯ ಪೋದ್ದಾರ್ ಕಂಪನಿ ರಾಜ್ಯದಲ್ಲಿ 758 ಕೋಟಿ ರೂ. ಹೂಡಿಕೆ ಮಾಡಲಿದ್ದು, ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದ ಹಂತ–2ರಲ್ಲಿ 33 ಎಕರೆ ಜಮೀನು ನೀಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.



ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅಧಿಕಾರಿಗಳ ಸಭೆ ನಡೆಸಿದರು.

ಕಂಪನಿಯು 2026ರ ಆಗಸ್ಟ್ ವೇಳೆಗೆ ತಯಾರಿಕಾ ಚಟುವಟಿಕೆ ಆರಂಭಿಸಲಿದೆ, ಮುಂದಿನ ದಿನಗಳಲ್ಲಿ ವಿಜಯಪುರ ಜಿಲ್ಲೆಯಲ್ಲೂ ಘಟಕ ತೆರೆಯಲಿದೆ.

ಕಂಪನಿ ಈ ಹಿಂದೆ 492 ಕೋಟಿ ರೂ. ಹೂಡಿಕೆ ಮಾಡುವುದಾಗಿ ಹೇಳಿತ್ತು. ಈಗ ಅದನ್ನು 758 ಕೋಟಿ ರೂ.ಗೆ ಏರಿಸಲು ಅನುಮೋದನೆ ಕೋರಿದೆ. ಈ ಯೋಜನೆಯಿಂದ 3 ಸಾವಿರ ನೇರ ಉದ್ಯೋಗ ಮತ್ತು 9 ಸಾವಿರ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಮುಂದಿನ 10 ವರ್ಷಗಳಲ್ಲಿ ತನ್ನ ವಾರ್ಷಿಕ ವಹಿವಾಟನ್ನು 1,500 ಕೋಟಿ ರೂ.ಗಳಿಗೆ ಕೊಂಡೊಯ್ಯುವುದಾಗಿ ಕಂಪನಿ ಹೇಳಿದೆ. ಇದರಿಂದ ಸರ್ಕಾರಕ್ಕೆ 3 ಸಾವಿರ ಕೋಟಿ ರೂ. ತೆರಿಗೆ ರೂಪದಲ್ಲಿ ಬರಲಿದೆ.

ಕಂಪನಿ ಈಗಾಗಲೇ ಆಶೀರ್ವಾದ್ ಬ್ರ್ಯಾಂಡ್ ಹೆಸರಿನ ಪೈಪ್ ಸಂಸ್ಥೆ ಪ್ರವರ್ತಕ ಸ್ಥಾನದಲ್ಲಿತ್ತು. ವಾರ್ಷಿಕ 5 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ವಹಿವಾಟು ನಡೆಸುತ್ತಿದ್ದು, 7 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿತ್ತು, ಈಗ ಅದೇ ಸಂಸ್ಥೆ ಪೋದ್ದಾರ್ ಹೆಸರಿನಲ್ಲಿ ಪ್ರತ್ಯೇಕ ಕಂಪನಿ ನಿರ್ಮಿಸಿಕೊಂಡಿದೆ ಎಂದರು.

ದೇಶ - ವಿದೇಶ

ಚೀನಾದಲ್ಲಿ ಭಾರಿ ಪ್ರವಾಹ: 30 ಮಂದಿ ಸಾವು

ಬೀಜಿಂಗ್: ಚೀನಾದಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಲ್ಲಿ 30 ಜನರು ಸಾವಿಗೀಡಾಗಿದ್ದು, 80,000ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಬೀಜಿಂಗ್ ನಗರ ಸಭೆಯ ಪ್ರವಾಹ ನಿಯಂತ್ರಣ ನಿರ್ವಹಣಾ ಕೇಂದ್ರ ಕಚೇರಿ ತಿಳಿಸಿದೆ. ಪರ್ವತ ಶ್ರೇಣಿಯ ಜಿಲ್ಲೆಗಳಾದ ಮಿಯುನ್‌ನಲ್ಲಿ 28 ಮತ್ತು ಯಾಂಕಿಂಗ್‌ನಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಬೀಜಿಂಗ್‌ನಲ್ಲಿ ಒಟ್ಟು 80,332 ಜನರನ್ನು ಸ್ಥಳಾಂತರಿಸಲಾಗಿದೆ. ಮಿಯುನ್‌ನಲ್ಲಿ ಗರಿಷ್ಟ ಮಳೆಯಾಗಿದ್ದು, 543.4 ಮಿಮೀ ತಲುಪಿದೆ. ಮಳೆಗಾಳಿಯಿಂದ 31 ರಸ್ತೆಗಳು ಹಾನಿಗೊಳಗಾಗಿದ್ದು, 136 ಹಳ್ಳಿಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ವಾರಾಂತ್ಯದಲ್ಲಿ ಆರಂಭವಾದ ಮಳೆ ಬೀಜಿಂಗ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೋಮವಾರ ತೀವ್ರಗೊಂಡಿದೆ. 8 ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ. ಕಾಣೆಯಾದವರನ್ನು ಹುಡುಕುವ, ಪ್ರವಾಹದಲ್ಲಿ ಸಿಕ್ಕಿಬಿದ್ದವರನ್ನು ರಕ್ಷಿಸುವ ಕೆಲಸ ಮತ್ತು ಅಪಾಯದಲ್ಲಿರುವವರನ್ನು ತಕ್ಷಣ ಸ್ಥಳಾಂತರಿಸುವ ಮೂಲಕ ಸಾವುನೋವುಗಳನ್ನು ಕಡಿಮೆ ಮಾಡಲು ಅಧ್ಯಕ್ಷ ಷಿ ಜಿನ್‌ಪಿಂಗ್ ಕರೆ ನೀಡಿದ್ದಾರೆ.



ಬಸ್–ಟ್ರಕ್ ಡಿಕ್ಕಿ: ಐವರು ಕಾವಡ್ ಯಾತ್ರಿಕರ ಸಾವು, 23 ಮಂದಿಗೆ ಗಾಯ

ದಿಯೋಘರ್: ಜಾರ್ಖಂಡ್‌ನ ದಿಯೋಘರ್ ಜಿಲ್ಲೆಯಲ್ಲಿ ಬಸ್ ಮತ್ತು ಟ್ರಕ್ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಐವರು ಕಾವಡ್ ಯಾತ್ರಿಕರು ಸ್ಥಳದಲ್ಲೇ ಮೃತಪಟ್ಟಿದ್ದು, 23 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೋಹನಪುರ ಪೊಲೀಸ್ ಠಾಣೆ ವ್ಯಾಪ್ತಿಯ ಜಮುನಿಯಾ ಅರಣ್ಯದ ಬಳಿ ಮುಂಜಾನೆ 4.30ರ ಸುಮಾರಿಗೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ತುಂಬಿದ್ದ ಟ್ರಕ್‌ಗೆ ಬಸ್ ಡಿಕ್ಕಿ ಹೊಡೆದಿದೆ.




ಗಾಯಾಳುಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ದುಮ್ಕಾ ವಲಯದ ಹಿರಿಯ ಪೊಲೀಸ್ ಅಧಿಕಾರಿ ಶೈಲೇಂದ್ರ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

ಹಲವಾರು ಗಾಯಾಳುಗಳ ಸ್ಥಿತಿ ಗಂಭೀರವಾಗಿದ್ದು, ಸಾವುನೋವು ಹೆಚ್ಚಾಗಬಹುದು ಎಂದು ಕುಮಾರ್ ಹೇಳಿದ್ದಾರೆ. ನನ್ನ ಲೋಕಸಭಾ ಕ್ಷೇತ್ರದ ದಿಯೋಘರ್‌ನಲ್ಲಿ ಬಸ್–ಟ್ರಕ್ ನಡುವೆ ಭೀಕರ ಅಪಘಾತ ಸಂಭವಿಸಿದ್ದು, 18 ಮಂದಿ ಭಕ್ತರು ಮೃತಪಟ್ಟಿದ್ದಾರೆ. ಮೃತರ ಕುಟುಂಬಗಳಿಗೆ ನೋವು ಭರಿಸುವ ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಸಂಸದ ನಿಶಿಕಾಂತ್ ದುಬೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಾನಿಲ್ಲದಿದ್ದರೆ ಪಾಕಿಸ್ತಾನದ ವಿರುದ್ಧ ಭಾರತ ಯುದ್ಧ ಮಾಡುತ್ತಿತ್ತು


ಲಂಡನ್: ಎಲ್ಲ ವ್ಯಾಪಾರ ಒಪ್ಪಂದಗಳನ್ನು ಸ್ಥಗಿತಗೊಳಿಸುವ ಬೆದರಿಕೆ ಹಾಕುವ ಮೂಲಕ ಸಕಾಲಕ್ಕೆ ಮಧ್ಯಪ್ರವೇಶಿಸಿದ್ದರಿಂದ ಭಾರತ ಮತ್ತು ಪಾಕಿಸ್ತಾನ ಯುದ್ಧ ನಿಲ್ಲಿಸಿದವು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಹೇಳಿದ್ದಾರೆ.



ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರೊಂದಿಗಿನ ಮಾತುಕತೆಗೂ ಮುನ್ನ ಸ್ಕಾಟ್ಲೆಂಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಭಾರತ ಮತ್ತು ಪಾಕಿಸ್ತಾನ ಸೇರಿದಂತೆ ಜಗತ್ತಿನ 6 ಪ್ರಮುಖ ಯುದ್ಧಗಳನ್ನು ತಡೆಯಲಾಗಿದೆ ಎಂದಿದ್ದಾರೆ. ಹಲವೆಡೆ ಕದನ ವಿರಾಮ ಘೋಷಿಸಲಾಗಿದೆ. ನಾನಿಲ್ಲದಿದ್ದರೆ ಭಾರತ ಹಾಗೂ ಪಾಕಿಸ್ತಾನದ ನಡುವಿನ ಯುದ್ಧ ಇಂದಿಗೂ ಮುಂದುವರಿಯುತ್ತಿತ್ತು ಎಂದು ಪುನರುಚ್ಚರಿಸಿದ್ದಾರೆ. ಭಾರತ ಹಾಗೂ ಪಾಕಿಸ್ತಾನದ ನಾಯಕರನ್ನು ಚೆನ್ನಾಗಿ ಬಲ್ಲೆ. ಅವರು ವ್ಯಾಪಾರ ಒಪ್ಪಂದಗಳ ಕುರಿತು ಚರ್ಚಿಸುತ್ತಿದ್ದಾರೆ. ಆದರೂ, ಪರಮಾಣು ಶಸ್ತ್ರಾಸ್ತ್ರಗಳ ಬಗ್ಗೆಯೂ ಮಾತನಾಡುತ್ತಿದ್ದಾರೆ. ಇದು ಹುಚ್ಚುತನವಾಗಿದೆ. ಹೀಗಾಗಿ, ನಾನು ನಿಮ್ಮೊಂದಿಗೆ ವ್ಯಾಪಾರ ಒಪ್ಪಂದ ಮಾಡುವುದಿಲ್ಲವೆಂದು ಹೇಳಿದ್ದೆ. ಅವರಿಗೆ ವ್ಯಾಪಾರ ಒಪ್ಪಂದ ಅಗತ್ಯವಿತ್ತು. ನೀವು ಯುದ್ಧ ಮುಂದುವರಿಸಿದರೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ್ದೆ ಎಂದು ಟ್ರಂಪ್ ತಿಳಿಸಿದ್ದಾರೆ.

ಅಮರನಾಥ ಯಾತ್ರೆಗೆ ತೆರಳಿದ 1490 ಯಾತ್ರಿಕರ 27ನೇ ತಂಡ

ಜಮ್ಮು: ದಕ್ಷಿಣ ಕಾಶ್ಮೀರ ಹಿಮಾಲಯದಲ್ಲಿರುವ 3,880 ಮೀಟರ್ ಎತ್ತರದ ಅಮರನಾಥ ಗುಹಾ ದೇವಾಲಯದ ಅವಳಿ ಮೂಲ ಶಿಬಿರಗಳಿಗೆ 1490 ಯಾತ್ರಿಕರ 27ನೇ ತಂಡ ಜಮ್ಮುವಿನಿಂದ ಬಿಗಿ ಭದ್ರತಾ ವ್ಯವಸ್ಥೆಗಳ ನಡುವೆ ಹೊರಟಿತು. ಜುಲೈ 3ರಂದು ಕಣಿವೆಯಿಂದ 38 ದಿನಗಳ ತೀರ್ಥಯಾತ್ರೆ ಪ್ರಾರಂಭವಾದಾಗಿನಿಂದ 3.86 ಲಕ್ಷಕ್ಕೂ ಹೆಚ್ಚು ಯಾತ್ರಿಕರು ಗುಹಾ ದೇವಾಲಯದಲ್ಲಿರುವ ಶಿವನ ಹಿಮಲಿಂಗಕ್ಕೆ ಪೂಜೆ ಸಲ್ಲಿಸಿದ್ದಾರೆ. 1,262 ಪುರುಷರು, 186 ಮಹಿಳೆಯರು, 42 ಸಾಧುಗಳು ಮತ್ತು ಸಾಧ್ವಿಗಳು ಸೇರಿದಂತೆ 27ನೇ ತಂಡವು ಭಗವತಿ ನಗರ ಮೂಲ ಶಿಬಿರದಿಂದ 61 ವಾಹನಗಳಲ್ಲಿ ಕಾಶ್ಮೀರದ ಅವಳಿ ಮೂಲ ಶಿಬಿರಗಳಿಗೆ 61 ವಾಹನಗಳಲ್ಲಿ ಸಿಆರ್‌ಪಿಎಫ್ ಮತ್ತು ಪೊಲೀಸ್ ಸಿಬ್ಬಂದಿಯ ಬೆಂಗಾವಲಿನೊಂದಿಗೆ ಬೆಳಗಿನ ಜಾವ 3:25ರಿಂದ 3.57ರ ನಡುವೆ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 16 ವಾಹನಗಳಲ್ಲಿ 327 ಯಾತ್ರಿಕರನ್ನು ಹೊತ್ತ ಮೊದಲ ಯಾತ್ರಿಕರ ಬೆಂಗಾವಲು 14 ಕಿಮೀ ಬಾಲ್ಟಾಲ್ ಮಾರ್ಗಕ್ಕೆ, ನಂತರ 45 ವಾಹನಗಳಲ್ಲಿ 1,163 ಯಾತ್ರಿಕರ ಎರಡನೇ ಬೆಂಗಾವಲು ಯಾತ್ರೆಯನ್ನು ಕೈಗೊಂಡಿದ್ದಾರೆ.



ನ್ಯೂಯಾರ್ಕ್ ಸಿಟಿ ಆಫೀಸ್ ಕಟ್ಟಡದಲ್ಲಿ ಗುಂಡಿನ ದಾಳಿ: ನಾಲ್ವರು ಸಾವು

ವಾಷಿಂಗ್ಟನ್: ನ್ಯೂಯಾರ್ಕ್‌ನ ಕೇಂದ್ರ ಮ್ಯಾನ್ ಹ್ಯಾಟನ್‌ನಲ್ಲಿ ಸೋಮವಾರ ನಡೆದ ಗುಂಡಿನ ದಾಳಿಯಲ್ಲಿ ನ್ಯೂಯಾರ್ಕ್ ಪೊಲೀಸ್ ಇಲಾಖೆ ಅಧಿಕಾರಿ ಸೇರಿದಂತೆ ಕನಿಷ್ಠ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.



ಗುಂಡಿನ ದಾಳಿಕೋರನನ್ನು ಲಾಸ್ ವೇಗಾಸ್‌ನ 27 ವರ್ಷದ ಶೇನ್ ಟಮುರಾ ಎಂದು ತಾತ್ಕಾಲಿಕವಾಗಿ ಗುರುತಿಸಲಾಗಿದ್ದು, ಸ್ವಯಂ–ಉಂಟುಮಾಡಿಕೊಂಡ ಗಾಯದಿಂದ ಸಾವನ್ನಪ್ಪಿದ್ದಾನೆ ಎಂದು ಸಿಎನ್‌ಎನ್ ವರದಿ ತಿಳಿಸಿದೆ.

ಶಂಕಿತ ಬಂದೂಕುಧಾರಿ, ಈಗ ಮೃತಪಟ್ಟಿದ್ದು, ಹ್ಯಾಂಡ್‌ಗನ್ ಪರವಾನಗಿಯನ್ನು ಹೊಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಸಿಎನ್‌ಎನ್ ವರದಿ ಪ್ರಕಾರ, ಆತನ ಬಳಿ ಅವಧಿ ಮೀರಿದ ಖಾಸಗಿ ತನಿಖಾಧಿಕಾರಿ ಪರವಾನಗಿಯೂ ಇತ್ತು. ಮಿಡ್‌ಟೌನ್ ಮ್ಯಾನ್‌ಹ್ಯಾಟನ್‌ನ ಜನದಟ್ಟಣೆಯ ಭಾಗದಲ್ಲಿರುವ ಪಾರ್ಕ್ ಅವೆನ್ಯೂ ಗಗನಚುಂಬಿ ಕಟ್ಟಡದೊಳಗೆ ಗುಂಡು ನಿರೋಧಕ ವೆಸ್ಟ್ ಧರಿಸಿ AR style ರೈಫಲ್ ಹೊಂದಿದ್ದ ಬಂದೂಕುಧಾರಿಯೊಬ್ಬ ಗುಂಡು ಹಾರಿಸಿದ್ದಾನೆ ಎಂದು ಹೆಸರು ಬಹಿರಂಗಪಡಿಸದ ಪೊಲೀಸ್ ಮೂಲಗಳನ್ನು ಉಲ್ಲೇಖಿಸಿ ನ್ಯೂಯಾರ್ಕ್ ಪೋಸ್ಟ್ ಪತ್ರಿಕೆ ವರದಿ ಮಾಡಿದೆ.

ಮೈಸೂರು ಮಿತ್ರ ಬುಧವಾರ 30 ಜುಲೈ 2025

ಅರೆ ಭಾಷೆಲಿ ಕಥೆ ಬರೆಮೋ ಕಾರ್ಯಾಗಾರ

ನಾಪೋಕ್ಲು, ಜು.29– ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಚೇರಂಬಾಣೆ ಗೌಡ ಸಮಾಜ ಮತ್ತು ಗೌಡ ಮಹಿಳಾ ಒಕ್ಕೂಟ ಚೇರಂಬಾಣೆ ಸಹಯೋಗದಲ್ಲಿ ಅರೆ ಭಾಷೆಲಿ ಕಥೆ ಬರೆಮೋ ಕಾರ್ಯಾಗಾರ ನಡೆಯಿತು.



ಅರೆ ಭಾಷೆಲಿ ಕಥೆ ಬರೆಮೋ ಕಾರ್ಯಾಗಾರವನ್ನು ಪುಟಾಣಿ ಕೊಡಕಂಡಿ ಅನ್ವಿತ ಸುದೀಪ್ ದೀಪಬೆಳಗುವ ಮೂಲಕ ಉದ್ಘಾಟಿಸಿದರು.

ಅಕಾಡೆಮಿ ಸದಸ್ಯೆ ಬಡ್ಡಡ್ಕ ಚಂದ್ರಾವತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಪುಟಾಣಿ ಕೊಡಕಂಡಿ ಅನ್ವಿತ ಸುದೀಪ್ ದೀಪಬೆಳಗುವ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಮಾಜದ ಅಧ್ಯಕ್ಷ ಕೊಡಪಾಲು ಗಣಪತಿ ಮಾತನಾಡಿ ಸಮಾಜದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಒಂದು ಅಪರೂಪದ ಸುವರ್ಣ ಅವಕಾಶ ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ನುಡಿದರು.

ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಮಾತನಾಡಿ ಚೇರಂಬಾಣೆ ಗೌಡ ಸಮಾಜ ಕೇವಲ ಮದುವೆ ಸಮಾರಂಭಗಳಿಗೆ ಮೀಸಲಾಗಿರದೆ ಕಲೆ ಕ್ರೀಡೆ ಸಾಂಸ್ಕೃತಿಕ ಮತ್ತು ಸಾಹಿತ್ಯ ಕಾರ್ಯಕ್ರಮಗಳಿಗೂ ನೆರಳಾಗಬೇಕು ಎಂಬ ಉದ್ದೇಶದಿಂದ ಮಹಿಳಾ ಒಕ್ಕೂಟವನ್ನು ರಚಿಸಲಾಗಿದೆ ವಿದ್ಯಾರ್ಥಿಗಳಿಗಾಗಿ ಇದು ಚೊಚ್ಚಲ ಕಾರ್ಯಕ್ರಮವಾಗಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಅಕಾಡೆಮಿ ಸದಸ್ಯ ಚಂದ್ರಾವತಿ ಬಡ್ಡಡ್ಕ ಅವರು ಮಾತನಾಡಿ ಮಕ್ಕಳನ್ನು ಭವಿಷ್ಯದ ಸಾಂಸ್ಕೃತಿಕ ರೂವಾರಿಗಳನ್ನಾಗಿಸ ಬೇಕು. ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಿಸಿದರೆ ಅವರು ಮುಂದಿನ ತಲೆಮಾರಿಗೆ ಆಸ್ತಿಯಾಗುತ್ತಾರೆ. ಎಂದರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಅಕಾಡೆಮಿ ಸದಸ್ಯ ವಿನೋದ್ ಮೂಡಗದ್ದೆ ಅವರು ಮಕ್ಕಳ ಸ್ವರಚಿತ ಕತೆಗಳನ್ನು ಅಕಾಡೆಮಿಯು ಪ್ರಕಟಿಸುವ ತ್ರೈಮಾಸಿಕ 'ಹಿಂಗಾರ'ದಲ್ಲಿ ಪ್ರಕಟಿಸುವುದಾಗಿ ನುಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಹಿರಿಯ ಸಾಹಿತಿ ಭಾರಿಯಂಡ ಜೋಯಪ್ಪ ಮತ್ತೊಬ್ಬ ಸಂಪನ್ಮೂಲ ವ್ಯಕ್ತಿ ಡಾ. ಪುನೀತ್ ರಾಘವೇಂದ್ರ ಕುಂಟುಕಾಡು ಮಾತನಾಡಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಶಂಸನಾ ಪತ್ರ ನೀಡಲಾಯಿತು.

ಮಳೆಯ ನಡುವೆಯೂ ವಿದ್ಯಾರ್ಥಿಗಳು ಆಸಕ್ತಿಯಿಂದ ಪೋಷಕರೊಂದಿಗೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗಳಿಸಿದರು.

ಬಾಂಗ್ಲಾ ದೇಶಿಗರ ಗಡಿಪಾರಿಗೆ ಆಗ್ರಹ

ಮಡಿಕೇರಿ, ಜು.29–ಅಸ್ಸಾಮಿಗರ ಹೆಸರಿನಲ್ಲಿ ನಕಲಿ ದಾಖಲೆಗಳ ಮೂಲಕ ಜಿಲ್ಲೆಯಲ್ಲಿ ನೆಲೆಸಿರುವ ವರನ್ನು ಪತ್ತೆ ಹಚ್ಚಿ ಬಂಧಿಸಿ ದೇಶದಿಂದಲೆ ಗಡಿಪಾರು ಮಾಡುವಂತೆ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಆಗ್ರಹಿಸಿದ್ದಾರೆ.




ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕಿಲನ್, ಜಿಲ್ಲಾ ವಕ್ತಾರರಾದ ತಳೂರು ಕಿಶೋರ್ ಕುಮಾರ್, ಬಿ.ಕೆ. ಅರುಣ್ ಕುಮಾರ್, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಈಗಾಗಲೇ ಕೊಡಗು ಜಿಲ್ಲೆಯಲ್ಲಿ ಕಾರ್ಮಿಕರ ಸೋಗಿನಲ್ಲಿ ಅಸ್ಸಾಮಿಗಳೆಂದು ಕರೆದುಕೊಳ್ಳುವ ಕಾರ್ಮಿಕರು ಅನೇಕರಿದ್ದಾರೆ. ಜಿಲ್ಲಾ ಪೊಲೀಸ್ ಮತ್ತು ಜಿಲ್ಲಾಡಳಿತವು ಅಸ್ಸಾಮಿಗರೆಂದು ಕರೆದುಕೊಳ್ಳುವ ಕಾರ್ಮಿಕರ ದಾಖಲೆ ಪತ್ರಗಳನ್ನು ಪರಿಶೀಲಿಸಿ ಅವುಗಳು ನಕಲಿಯಾಗಿದ್ದರೆ ಬಂಧಿಸಿ ಕ್ರಮ ಕೈಗೊಳ್ಳುವ ಅಗತ್ಯವಿದೆ. ಅಸ್ಸಾಮಿಗರ ಹೆಸರಿನಲ್ಲಿ ಕೊಡಗಿನಲ್ಲಿರುವ ಈ ನುಸುಳುಕೋರರಿಂದ ಅಕ್ರಮ ಗೋ ಸಾಗಾಟ, ಕಳ್ಳತನ, ಹಲ್ಲೆ, ದರೋಡೆ ಪ್ರಕರಣಗಳು ನಡೆಯುತ್ತಿದೆ. ಇದನ್ನು ಮಟ್ಟ ಹಾಕುವುದಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ಮತ್ತು ಆಯಾ ಗ್ರಾಮ ಪಂಚಾಯಿತಿಗಳು ಜಂಟಿಯಾಗಿ ತಮ್ಮ ವ್ಯಾಪ್ತಿಯಲ್ಲಿರುವ ಹೊರ ರಾಜ್ಯದ ಕಾರ್ಮಿಕರ ದಾಖಲೆಗಳನ್ನು ಆಮೂಲಾಗ್ರ ಪರಿಶೀಲನೆಗೆ ಒಳಪಡಿಸಬೇಕೆಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು. ಜಿಲ್ಲೆಯಲ್ಲಿರುವ ಅಸ್ಸಾಮಿಗರೆಂದು ಕರೆದು ಕೊಳ್ಳುವ ಕಾರ್ಮಿಕರ ದಾಖಲೀಕರಣ ಕಾರ್ಯವನ್ನು ಶೀಘ್ರ ನಡೆಸಿ ಅಕ್ರಮವಾಗಿ ಜಿಲ್ಲೆಯಲ್ಲಿರುವವರನ್ನು ಗುರುತಿಸಿ ಹೊರಗಟ್ಟುವ ಕಾರ್ಯ ನಡೆಯದಿದ್ದಲ್ಲಿ ಮುಂದೊಂದು ದಿನ ದೊಡ್ಡ ಅನಾಹುತಕ್ಕೆ ಕಾರಣವಾಗ ಬಹುದೆಂದು ಆತಂಕ ವ್ಯಕ್ತಪಡಿಸಿದರು.

ಗ್ಲಾಸ್ ಬ್ರಿಡ್ಜ್‌ಗೆ ತೀವ್ರ ವಿರೋಧ: ರಾಜಾಸೀಟಿನಲ್ಲಿ ಕಾಣದ ಕೈಗಳಿಂದ ಪರಿಸರಕ್ಕೆ ಮಾರಕವಾದ ಗ್ಲಾಸ್ ಬ್ರಿಡ್ಜ್ ನಿರ್ಮಾಣ ಪ್ರಯತ್ನಗಳು ನಡೆದಿದೆ. ಇದನ್ನು ಜಿಲ್ಲಾ ಬಿಜೆಪಿ ತೀವ್ರವಾಗಿ ವಿರೋಧಿಸುತ್ತದೆ. ಈಗಾಗಲೆ ಗ್ಲಾಸ್ ಬ್ರಿಡ್ಜ್‌ಗೆ ಸಂಬಂಧಿಸಿದಂತೆ ಯಾರ ಗಮನಕ್ಕೂ ಬಾರದಂತೆ ಟೆಂಡರ್ ಪ್ರಕ್ರಿಯೆಗಳನ್ನು ನಡೆಸಲಾಗಿದ್ದು, ಜು.30 ಕೊನೆಯ ದಿನವಾಗಿದೆ ಎಂದು ಕಳವಳ ವ್ಯಕ್ತಪಡಿಸಿದ ರವಿ ಕನಿಷ್ಟ ಈ ವಿಚಾರ ನಗರಸಭೆಗೂ ಬಂದಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ರಾಜಾಸೀಟಿನ ಆಸುಪಾಸಿನ ಇಂದಿರಾ ನಗರ, ಚಾಮುಂಡೇಶ್ವರಿ ನಗರಗಳನ್ನು ಬರೆ ಕುಸಿತದ ಅಪಾಯವಿರುವ ಪ್ರದೇಶಗಳೆಂದು ಗುರುತಿಸಲಾಗಿದೆ. ಇದರ ಸಮೀಪದಲ್ಲೆ ಇರುವ ರಾಜಾಸೀಟಿನಲ್ಲಿ ಗ್ಲಾಸ್ ಬ್ರಿಡ್ಜ್‌ನ ಅಗತ್ಯತೆ ಇದೆಯೇ ಎಂದು ಪ್ರಶ್ನಿಸಿದರಲ್ಲದೇ ಗ್ಲಾಸ್ ಬ್ರಿಡ್ಜ್‌ನ ಸಾಧಕ ಬಾಧಕಗಳ ಬಗ್ಗೆ ಅಗತ್ಯ ಚರ್ಚೆಗಳು ಇಲ್ಲಿಯವರೆಗೆ ನಡೆದಿಲ್ಲ. ಈ ಯೋಜನೆ ಕೇವಲ ಹಣ ಮಾಡುವ ಒಂದು ದಂಧೆಯಷ್ಟೆ ವಿರೋಧಗಳ ನಡುವೆಯೂ ಗ್ಲಾಸ್ಟ್ ಬ್ರಿಡ್ಜ್ ನಿರ್ಮಾಣಕ್ಕೆ ಮುಂದಾದಲ್ಲಿ ನ್ಯಾಯಾಲಯದ ಮೆಟ್ಟಿಲೇರುವುದಾಗಿ ಮಾಹಿತಿ ನೀಡಿದರು.

ಪೊಲೀಸ್ ವಸತಿ ಗೃಹಗಳಿಗೆ ನೀರೊದಗಿಸಿದ ಗ್ರಾಪಂ ಸದಸ್ಯ



ಪೊಲೀಸ್ ವಸತಿಗೃಹಗಳಿಗೆ ಗ್ರಾ.ಪಂ. ಸದಸ್ಯರೊಬ್ಬರು ನೀರೊದಗಿಸುವ ಮೂಲಕ ಮಾನವೀಯತೆ ತೋರಿದ್ದಾರೆ

ಮಡಿಕೇರಿ, ಜು.29– ಕುಡಿಯುವ ನೀರಿಗೆ ಪರದಾಡುತ್ತಿದ್ದ ಪೋಲೀಸ್ ಕುಟುಂಬಕ್ಕೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಗ್ರಾಮಪಂಚಾಯಿತಿ ಸದಸ್ಯರೊಬ್ಬರು ನೀರೊದಗಿಸುವ ಮೂಲಕ ಮಾನವೀಯತೆ ತೋರಿದ್ದಾರೆ

ನಾಪೋಕ್ಲು ವ್ಯಾಪ್ತಿಯಲ್ಲಿ 4 ದಿನಗಳಿಂದ ಸುರಿದ ಗಾಳಿ ಮಳೆಗೆ ವಿದ್ಯುತ್ ಕಂಬಗಳು ಧರೆಗುರುಳಿ, ವಿದ್ಯುತ್ ಸಮಸ್ಯೆಯಿಂದ ಜನರು ಕುಡಿಯುವ ನೀರಿಗೂ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಂತೆ ನಾಪೋಕ್ಲುವಿನ ಪೊಲೀಸ್ ವಸತಿ ಗೃಹದಲ್ಲಿ ವಾಸವಿರುವ ಪೊಲೀಸ್ ಸಿಬ್ಬಂದಿಗಳ ಕುಟುಂಬಕ್ಕೂ ವಿದ್ಯುತ್ ಸಮಸ್ಯೆ ಜೊತೆಗೆ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದರು. ಇದನ್ನು ಮನಗಂಡು ನಾಪೋಕ್ಲುವಿನ ಗ್ರಾಮ ಪಂಚಾಯಿತಿ ಸದಸ್ಯ ಮಹಮ್ಮದ್ ಖುರೇಷಿ ತಮ್ಮ ನಿವಾಸದ ಜನರೇಟರ್ ಬಳಸಿ ಸಿಂಟೆಕ್ಸ್‌ನಲ್ಲಿ ನೀರು ತುಂಬಿ ವಸತಿ ಗೃಹದಲ್ಲಿರುವ ಪೊಲೀಸರ ಕುಟುಂಬಸ್ಥರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ ಇವರ ಈ ಮಾನವೀಯ ಕಾರ್ಯಕ್ಕೆ ವಸತಿ ಗೃಹದ ಪೊಲೀಸ್ ಕುಟುಂಬಗಳು ಕೃತಜ್ಞತೆ ಸಲ್ಲಿಸಿವೆ.

ಆ.2 ಸಿಎನ್‌ಸಿಯಿಂದ 'ಕಕ್ಕಡ–18' ಆಚರಣೆ



ಮಡಿಕೇರಿ,ಜು.29–30ನೇ ವರ್ಷದ 'ಕಕ್ಕಡ–18' ಆಚರಣೆ ಆ.2ರಂದು ಮಡಿಕೇರಿ ಹೊರವಲಯದ ಕ್ಯಾಪಿಟಲ್ ವಿಲೇಜ್‌ನಲ್ಲಿ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಅಂದು ಬೆಳಿಗ್ಗೆ 10.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಕೊಡವ ಗುರುಕಾರೋಣರನ್ನು ಸ್ಮರಿಸಿ ಪ್ರಾರ್ಥಿಸಲಾಗುವುದು ಮತ್ತು ಕಕ್ಕಡ–18ರ ವಿಶೇಷ ಖಾದ್ಯಗಳನ್ನು ಅರ್ಪಿಸಲಾಗುವುದು. ನಂತರ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕೊಡವರು ಆರಾಧಿಸುವ ಪ್ರಕೃತಿ ಸಿರಿಯ ಕೊಡವ ಮಾತೃ ಭೂಮಿಯನ್ನು ಉಳಿಸಿಕೊಳ್ಳುವ ಕುರಿತು ಪ್ರತಿಜ್ಞಾವಿಧಿ ಸ್ವೀಕರಿಸಲಾಗುವುದು ಎಂದು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ

ಕೊಡವ ಭೂಮಿಯಲ್ಲಿ ದೊರೆಯುವ ಪ್ರಾಕೃತಿಕ ಗಿಡಮೂಲಿಕೆಗಳ ಸತ್ವ ಮತ್ತು ಆರೋಗ್ಯವರ್ಧಕ ಶಕ್ತಿಯ ಪರಿಚಯವನ್ನು ಈ ಸಮಾಜಕ್ಕೆ ಹಿರಿಯರು ಬಳುವಳಿಯಾಗಿ ನೀಡಿ ಹೋಗಿದ್ದಾರೆ. ಇದನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆದ್ದರಿಂದ ಸಿಎನ್‌ಸಿ ಸಂಘಟನೆ ನಡೆಸುತ್ತಿರುವ ಸಾರ್ವತ್ರಿಕ ಕಕ್ಕಡ–18 ಆಚರಣೆಯಲ್ಲಿ ಕೊಡವ, ಕೊಡವತಿಯರು ಸಾಂಪ್ರದಾಯಿಕ ಕೊಡವ ಉಡುಪಿನಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ.

ಕುಶಾಲನಗರದಲ್ಲಿ ನಾಗರ ಪಂಚಮಿ ವಿಶೇಷ ಪೂಜೆ



ಕುಶಾಲನಗರದಲ್ಲಿ ನಾಗರಪಂಚಮಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡ ಭಕ್ತರು.

ಕುಶಾಲನಗರ, ಜು.29– ಶ್ರಾವಣ ಮಾಸದ ಮೊದಲ ಹಬ್ಬ ನಾಗರ ಪಂಚಮಿ ಹಬ್ಬವನ್ನು ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಇಲ್ಲಿನ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಶ್ರೀಸುಬ್ರಮಣ್ಯ ಸ್ವಾಮಿ ದೇವಸ್ಥಾನ, ಮಾರುಕಟ್ಟೆ ಬಳಿ ಇರುವ ಅಶ್ವಥ್ ಕಟ್ಟೆ ನಾಗ ದೇವರ ಬನ ಹಾಗೂ ಕೂಡಿಗೆ ಉದ್ಭವ ಸುಬ್ರಹ್ಮಣ್ಯ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಹಬ್ಬವನ್ನು ಆಚರಣೆ ಮಾಡಲಾಯಿತು. ಹರಕೆ ಹೊತ್ತ ಹಲವು ಭಕ್ತರು ನಾಗರ ಪಂಚಮಿಯ ಅಂಗವಾಗಿ ಇಲ್ಲಿನ ಹಲವು ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಸಂಪ್ರದಾಯದಂತೆ ಹಾವಿನ ಹುತ್ತ, ನಾಗರ ಕಟ್ಟೆಗೆ ಹಾಲು ಎರೆಯುವುದು, ಎಳನೀರು ಸೇವೆ, ಕ್ಷೀರಾಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆದವು.

ಕೂಡಿಗೆಯ ಉದ್ಭವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದಲ್ಲಿ ದೇವರಿಗೆ ಕ್ಷೀರಾಭಿಷೇಕ, ಎಳನೀರು ಅಭಿಷೇಕ, ಅರಸಿಣ ನೀರಿನ ಅಭಿಷೇಕಗಳ ನಂತರ ತೆಂಗಿನಕಾಯಿ ಬಾಳೆಹಣ್ಣುಗಳನ್ನು ಸಮರ್ಪಿಸಿ ಮಹಾ ಮಂಗಳಾರತಿ ಮಾಡಲಾಯಿತು. ದೇವಾಲಯದ ಪ್ರಧಾನ ಅರ್ಚಕ ನವೀನ್ ಭಟ್ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಿದರು.

ಭಕ್ತರು ಬೆಳಿಗ್ಗೆ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ಬಳಿ ಇರುವ ಅರಳಿಮರ, ನಾಗನ ಕಟ್ಟೆಯಲ್ಲಿ ನಾಗನ ಶಿಲೆಗೆ ಹಾಲೆರೆಯುವ ಮೂಲಕ ಪ್ರಾರ್ಥನೆ ಸಲ್ಲಿಸಿದರು. ಹಬ್ಬದ ಪ್ರಯುಕ್ತ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಸಂದರ್ಭ ದೇವಾಲಯ ಸಮಿತಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಶಿವಕೇರಿಯಲ್ಲಿ ನಾಗರಪಂಚಮಿ ಆಚರಣೆ

ವಿರಾಜಪೇಟೆ, ಜು.29– ನಾಗರಪಂಚಮಿ ಪ್ರಯುಕ್ತ ಇಲ್ಲಿನ ಶಿವಕೇರಿಯಲ್ಲಿರುವ ಶ್ರೀ ದುರ್ಗಿ ವಿಷ್ಣುಮೂರ್ತಿ ನಾಗ ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆದು ನಾಗದೇವರಿಗೆ ಭಕ್ತಾದಿಗಳಿಂದ ಹಾಲು ಎರೆದು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ದೇವರಿಗೆ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ 12.30 ಗಂಟೆಗೆ ಭಜನೆ ನಂತರ ಮಹಾ ಪೂಜೆ ದೇವಸ್ಥಾನದ ಆವರಣದಲ್ಲಿ ಉತ್ಸವ ಮೂರ್ತಿಯ ಪ್ರದಕ್ಷಿಣೆ, ಪ್ರಸಾದ ವಿನಿಯೋಗ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಸಂದರ್ಭ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಚಂದ್ರಶೇಖರ್ ಹಾಗೂ ನಿರ್ದೇಶಕರು ಹಾಜರಿದ್ದರು. ಪಟ್ಟಣ ಹಾಗೂ ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ಕಂದಾಚಾರ ವಿರುದ್ಧ ಜಾಗೃತಿ ಮೂಡಿಸಿದ ಹಡಪದ ಅಪ್ಪಣ್ಣ

ಚಾಮರಾಜನಗರ, ಜು.29– ಸಾಮಾಜಿಕ ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಸರಳ ವಚನಗಳನ್ನು ರಚಿಸಿ ಜನಜಾಗೃತಿ ಮೂಡಿಸಿದ ಶಿವಶರಣರಲ್ಲಿ ಹಡಪದ ಅಪ್ಪಣ್ಣನವರು ಪ್ರಮುಖರಾಗಿದ್ದಾರೆ ಎಂದು ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ ತಿಳಿಸಿದರು.



ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿವಶರಣ ಹಡಪದ ಅಪ್ಪಣ್ಣ ಅವರ 891ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅನುಭವ ಮಂಟಪದ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಡಪದ ಅಪ್ಪಣ್ಣ 250 ವಚನಗಳನ್ನು ರಚಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿದರು. ಸರಳ, ಮಿತಭಾಷಿ, ಸಜ್ಜನಿಕೆಯ ಮೇರುವ್ಯಕ್ತಿತ್ವದ ಹಡಪದ ಅಪ್ಪಣ್ಣ ಅವರನ್ನು ಸ್ಮರಿಸುವುದು ಅವಶ್ಯವಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಮಾತನಾಡಿ ಶ್ರೇಷ್ಠ ವಚನಕಾರರಲ್ಲಿ ಹಡಪದ ಅಪ್ಪಣ್ಣ ಅವರು ಅಗ್ರಗಣ್ಯರಾಗಿದ್ದಾರೆ. ಜಾತೀಯತೆ, ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಕಾಲಘಟ್ಟದಲ್ಲಿ ನಿಜವಾದ ಪ್ರಜಾಪ್ರಭುತ್ವ ಸೃಷ್ಟಿಯಾದದ್ದು 12ನೇ ಶತಮಾನದಲ್ಲಿ. ಜನರಿಗೆ ಅರ್ಥವಾಗುವ ಸರಳ ವಚನಗಳ ಮೂಲಕ ಜಾತಿಪದ್ಧತಿ ನಿರ್ಮೂಲನೆಗೆ ಮಾನವೀಯ ನೆಲೆಗಟ್ಟಿನಲ್ಲಿ ಭದ್ರಬುನಾದಿ ಹಾಕಲು ಹಡಪದ ಅಪ್ಪಣ್ಣ ಅವರ ಕೊಡುಗೆ ಅಪಾರವಾಗಿದೆ ಎಂದರು.

ಪ್ರಗತಿಪರ ವಿಚಾರವಾದಿ ಅರಕಲವಾಡಿ ನಾಗೇಂದ್ರ ಮಾತನಾಡಿ, ಅವರು ಅನುಭವ ಮಂಟಪದಲ್ಲಿ ಎಲ್ಲಾ ವರ್ಗದ ಜನರು ಬಸವಣ್ಣನವರ ಜೊತೆಗಿದ್ದರು. ಆದರೆ ಹಡಪದ ಅಪ್ಪಣ್ಣ ಅವರು ಬಸವಣ್ಣನವರಿಗೆ ಅಂತಿಮ ಕಾಲದ ವರೆಗೂ ಜೊತೆಯಾಗಿದ್ದರು. ಅನುಭವ ಮಂಟಪದಲ್ಲಿ ಎಲ್ಲರಿಗೂ ಪ್ರಿಯವಾಗಿದ್ದ ಶಿವಶರಣ ಎಂದರೇ ಅದು ಅಪ್ಪಣ್ಣ ಮಾತ್ರ. ಅನುಭವ ಮಂಟಪಕ್ಕೆ ಯಾರೇ ಆಗಮಿಸಿದರೂ ಮೊದಲು ಕೆಳಸ್ತರದ ಸಮುದಾಯಕ್ಕೆ ಸೇರಿದ ಹಡಪದ ಅಪ್ಪಣ್ಣ ಅವರನ್ನು ನೋಡಿ, ಮಾತನಾಡಿಸಿಕೊಂಡು ಬಳಿಕ ಬಸವಣ್ಣನವರನ್ನು ಭೇಟಿಯಾಗುವ ಷರತ್ತು ಇತ್ತು. ಇದು ಬಸವಣ್ಣನವರ ಸಮಸಮಾಜದ ಉತ್ತಮ ಸಂದೇಶವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಮಾತನಾಡಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಮುಂಚೂಣಿಗೆ ತರಬೇಕು. ಮುಂದಿನ ದಿನಗಳಲ್ಲಿ ಸಮುದಾಯದ ಅಭಿವೃದ್ಧಿಗಾಗಿ ಸಮುದಾಯ ಭವನ ನಿರ್ಮಾಣ ಹಾಗೂ ನಗರದ ಹೊರವಲಯದಲ್ಲಿರುವ ಯಡಪುರದಲ್ಲಿ ಆಶ್ರಯ ನಿವೇಶನ ನೀಡಲು ಶಾಸಕರ ಮೂಲಕ ಕ್ರಮ ವಹಿಸಲಾಗುವುದು ಎಂದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮುದಾಯ ವ್ಯಕ್ತಿ ಗಳನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಮುದಾಯದ ಮಕ್ಕಳಿಗೆ ಸ್ಮರಣಿಕೆ ಯೊಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಂಜುಂಡಯ್ಯ, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ವೆಂಕಟರಾಜು, ತಾಲೂಕು ಅಧ್ಯಕ್ಷ ರಾಚಪ್ಪಾಜಿ, ಮಹಿಳಾ ಘಟಕದ ಅಧ್ಯಕ್ಷೆ ದೊಡ್ಡತಾಯಮ್ಮ, ಕಾರ್ಯಕ್ರಮದಲ್ಲಿ ಇದ್ದರು.

ಪತ್ನಿ ಕೊಲೆ ಮಾಡಿದ್ದ ಪತಿಗೆ ಜೀವಾವಧಿ ಶಿಕ್ಷೆ

ಕೊಳ್ಳೇಗಾಲ, ಜು.29– ತನ್ನ ಪತ್ನಿಯ ಶೀಲದ ಮೇಲೆ ಅನುಮಾನ ಪಟ್ಟು ಕತ್ತು ಹಿಸುಕಿ ಕೊಲೆ ಮಾಡಿದ್ದ ಆರೋಪಿ ಪತಿಗೆ ಇಲ್ಲಿನ ಅಪರ ಮತ್ತು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಕಾಂತ್ ಅವರು ಜೀವಾವಧಿ ಸಜೆ ವಿಧಿಸಿದ್ದಾರೆ. ಪಟ್ಟಣದ ಮುಡಿಗುಂಡ ಬಡಾವಣೆಯ ಕೊಪ್ಪಾಳಿ ನಾಯಕ ಎಂಬವರ ಪುತ್ರ ಕುಮಾರ್ ಎಂಬಾತ ಶಿಕ್ಷೆಗೆ ಒಳಗಾದ ಆರೋಪಿ. ಈಕೆಯ ಪತ್ನಿ ಚೆನ್ನಮ್ಮ ಈತನಿಂದ ಕೊಲೆಯಾಗಿದ್ದ ದುರ್ದೈವಿ.



ಆರೋಪಿ ಕುಮಾರ್ ಹತ್ತು ವರ್ಷಗಳ ಹಿಂದೆ ಮುಳ್ಳೂರು ಗ್ರಾಮದ ಚಿನ್ನಮ್ಮಳ ಜೊತೆ ವಿವಾಹವಾಗಿದ್ದು ತನ್ನ ಪತ್ನಿ ಚಿನ್ನಮ್ಮಳ ಶೀಲ ಶಂಕಿಸಿ ಆಗಿಂದಾಗ್ಗೆ ಗಲಾಟೆ ಮಾಡುತ್ತಿದ್ದುದಲ್ಲದೆ ಆಕೆಯ ಮೇಲೆ ದೈಹಿಕವಾಗಿಯೂ ಹಲವಾರು ಬಾರಿ ಹಲ್ಲೆ ನಡೆಸಿದ್ದನೆನ್ನಲಾಗಿದೆ. ಇದರಿಂದ ಬೇಸರಗೊಂಡಿದ್ದ ಚಿನ್ನಮ್ಮ ಮುಳ್ಳೂರಿನಲ್ಲಿರುವ ತನ್ನ ತವರು ಮನೆಯಲ್ಲಿಯೇ ಕೆಲವು ದಿನಗಳ ಕಾಲ ಉಳಿದುಕೊಂಡಿದ್ದಳು, 2022ರ ಮಾ.31ರಂದು ಆರೋಪಿ ಮುಳ್ಳೂರುಗೆ ಹೋಗಿ ಹೆಂಡತಿ ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಚಿನ್ನಮ್ಮಳ ತಂದೆ ತಾಯಿಗೆ ತಿಳಿಸಿ ಮುಡಿಗುಂಡಕ್ಕೆ ಕರೆ ತಂದಿದ್ದನು.

ಮತ್ತೆ ತನ್ನ ಹೆಂಡತಿಯ ಶೀಲದ ಮೇಲೆ ಅನುಮಾನಪಟ್ಟು ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಆಕೆಯೊಂದಿಗೆ ಜಗಳ ತಗೆದು ಏ. 1ರ ಬೆಳಗಿನ ಜಾವ 4.15 ರ ಸಮಯದಲ್ಲಿ ಕಪಾಳಕ್ಕೆ ಹೊಡೆದು ಕೆಳಕ್ಕೆ ಬೀಳಿಸಿ ಎದೆಯ ಮೇಲೆ ಕುಳಿತು ಕತ್ತನ್ನು ಹಿಸುಕಿ ಕೊಲೆ ಮಾಡಿದ್ದನೆನ್ನಲಾಗಿದೆ ಆ ಸಮಯದಲ್ಲಿ ಮಗ ದರ್ಶನ್‌ನನ್ನು ರೂಂನೊಳಗೆ ಕೂಡಿ ಹಾಕಿದ್ದನೆನ್ನಲಾಗಿದೆ. ಹತ್ಯೆ ಮಾಡಿದ ಆರೋಪದ ಮೇರೆಗೆ ಕುಮಾರ್‌ನನ್ನು ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಶಿವರಾಜ್ ಆರ್. ಮುಧೋಳ್ ಹಾಗೂ ಪಿಎಸ್ಐ ಚೇತನ್ ಬಂಧಿಸಿ ಪ್ರಕರಣ ದಾಖಲಿಸಿ, ತನಿಖೆ ನಡೆಸಿದ್ದರು.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಈ ಪ್ರಕರಣದ ಬಗ್ಗೆ ಮೊಕದ್ದಮೆ ದಾಖಲಾಗಿತ್ತು. ಸರ್ಕಾರಿ ಪರ ವಕೀಲ ಬಿ.ಪಿ.ಮಂಜುನಾಥ್ ಮತ್ತು ಸಿ.ಬಿ.ಗಿರೀಶ್‌ರವರು ವಾದ ಮಂಡಿಸಿ ಆರೋಪ ಸಾಬೀತಾದ್ದರಿಂದ ನ್ಯಾಯಾಧೀಶರಾದ ಶ್ರೀಕಾಂತ್ ಅವರು ಕಲಂ 302ರಡಿ ಜೀವಾವಧಿ ಸೆರೆವಾಸ, 5ಸಾವಿರ ದಂಡ ವಿಧಿಸಿದ ಜೊತೆಗೆ ಕಲಂ 498(ಎ)ರಡಿ 1ವರ್ಷ ಸೆರೆವಾಸ, 1ಸಾವಿರ ದಂಡ ಹಾಗೂ ಆರೋಪಿ ಪುತ್ರ ದರ್ಶನ್ ಮೈನರ್ ಆಗಿರುವ ಹಿನ್ನೆಲೆಯಲ್ಲಿ ಆತನ ಪೋಷಣೆಗೆ ಕಾನೂನು ಸೇವಾ ಪ್ರಾಧಿಕಾರ ಸೂಕ್ತ ಪರಿಹಾರ ನೀಡುವಂತೆ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶದಿಂದ ಯುವಕ ಸಾವು

ಯಳಂದೂರು, ಜು. 29 (ವಿ.ನಾಗರಾಜು)– ತಾಲೂಕಿನ ಅಂಬಳೆ ಗ್ರಾಮದ ಲಿಂಗಾಯಿತ ಬಡಾವಣೆಯಲ್ಲಿ ಮನೆಯ ಮೇಲಿದ್ದ ವಿದ್ಯುತ್ ತಂತಿಯನ್ನು ಕೈಯಿಂದ ಸ್ಪರ್ಶಿಸಿ ವ್ಯಕ್ತಿಯೊಬ್ಬ ಮೃತಪಟ್ಟಿರುವ ಘಟನೆ ಸೋಮವಾರ ಜರುಗಿದೆ.



ತಾಲೂಕಿನ ಕಂದಹಳ್ಳಿ ಗ್ರಾಮದ ನಾಗರಾಜು (28) ಎಂಬ ವ್ಯಕ್ತಿಯೇ ಮೃತಪಟ್ಟ ದುರ್ದೈವಿ. ಈತ ಅಂಬಳೆ ಗ್ರಾಮದ ಮಾಸ್ಟರ್ ವಿಶ್ವನಾಥ್ ಎಂಬುವರ ಮನೆಯ ಮೇಲೆ ತೆರಳಿ ಬದಿಯಲ್ಲಿ ಹಾದಿ ಹೋಗಿರುವ 11 ಕೆವಿ ಸಂಪರ್ಕದ ವಿದ್ಯುತ್ ತಂತಿಯನ್ನು ಕೈಯಿಂದ ಸ್ಪರ್ಶ ಮಾಡಿದ್ದಾನೆ. ಸ್ಥಳದಲ್ಲಿ ಸಾವನ್ನಪ್ಪಿದ ತಕ್ಷಣ ಅಲ್ಲಿನ ನಿವಾಸಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ, ಈ ಸಂಬಂಧ ಸಬ್ ಇನ್ಸ್‌ಪೆಕ್ಟರ್ ಆಕಾಶ್ ಘಟನ ಸ್ಥಳಕ್ಕೆ ತೆರಳಿ ದೂರು ದಾಖಲಿಸಿಕೊಂಡು ಮುಂದಿನ ಕ್ರಮ ತೆಗೆದುಕೊಂಡಿದ್ದಾರೆ.

ಸತ್ತೇಗಾಲ ಬೈಪಾಸ್ ರಸ್ತೆಯಲ್ಲಿ ಅಪಘಾತ, ಬೈಕ್ ಸವಾರ ಸಾವು

ಕೊಳ್ಳೇಗಾಲ, ಜು.29–ತಾಲೂಕಿನ ಸತ್ತೇಗಾಲ ಗ್ರಾಮದ ಬೈಪಾಸ್ ರಸ್ತೆಯಲ್ಲಿದ್ದ ಬ್ಯಾರಿಕೇಡ್ ಡಿಕ್ಕಿಯಾಗಿ ಬೈಕ್ ಸವಾರರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಹಿಂಬದಿ ಸವಾರ ಗಾಯಗೊಂಡಿರುವ ಸೋಮವಾರ ರಾತ್ರಿ ಜರುಗಿದೆ.

ಈ ಅಪಘಾತದಲ್ಲಿ ಬೈಕ್ ಚಾಲನೆ ಮಾಡುತ್ತಿದ್ದ ಮ.ಬೆಟ್ಟ ದೊಡ್ಡಾಣೆಯ ಗ್ರಾಮದ ಶಿವರಾಜು(40) ಮೃತಪಟ್ಟವರು. ಹಿಂಬದಿ ಸವಾರ ರವಿ ಚಂದ್ರ ಗಾಯಾಳುವಾಗಿದ್ದಾರೆ. ಇವರಿಬ್ಬರೂ ಹಲಗೂರಿನ ಎಸ್ಟೇಟ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದು, ರಜೆ ಮೇಲೆ ಸ್ವಗ್ರಾಮಕ್ಕೆ ಆಗಮಿಸುತ್ತಿದ್ದ ಸಮಯದಲ್ಲಿ ಬೈಪಾಸ್ ರಸ್ತೆ ಬದಿಯಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್‌ಗೆ ಚಾಲಕನ ನಿಯಂತ್ರಣ ತಪ್ಪಿ ಡಿಕ್ಕಿ ಬೈಕ್ ಹೊಡೆಯುತ್ತಿದ್ದಂತೆ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದು, ಹಿಂಬದಿ ಸವಾರನಿಗೆ ಸಣ್ಣ ಪುಟ್ಟ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮಾಂತರ ಪೊಲೀಸರು ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಅಕ್ರಮ ಮದ್ಯ ಮಾರುತ್ತಿದ್ದವನ ಬಂಧನ

ಕೊಳ್ಳೇಗಾಲ, ಜು. 29– ತಾಲೂಕಿನ ರಾಚಪ್ಪಾಜಿ ನಗರ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಘಟನೆ ಇಂದು ರಾತ್ರಿ ಜರುಗಿದೆ.

ರಾಚಪ್ಪಾಜಿ ನಗರ ಗ್ರಾಮದ ಗೋವಿಂದಶೆಟ್ಟಿ ರವರ ಮಗನಾದ ಮುತ್ತು (50) ಬಂಧಿತ ಆರೋಪಿ. ಈತನಿಂದ 90 ಎಂ.ಎಲ್ ನ 21 ಮದ್ಯದ ಪೌಚ್‌ಗಳನ್ನು ಜಪ್ತಿ ಮಾಡಿದ್ದಾರೆ. ಆರೋಪಿ ಗ್ರಾಮದ ತನ್ನ ಮನೆ ಮುಂದೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಬಂಧಿಸಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗೆ ನೋಟೀಸ್ ಜಾರಿ ಮಾಡಿ ಬಿಡುಗಡೆ ಮಾಡಿದರು. ದಾಳಿಯಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್ಐ ಸುಪ್ರೀತ್, ಹೆಡ್ ಕಾನ್ಸ್‌ಟೇಬಲ್ ರಾಜಪ್ಪ, ಸೋಮಶೇಖರ್, ಕಾನ್ಸ್‌ಟೇಬಲ್ ಶಂಕರ್ ಇದ್ದರು.

ಕಾಡುಪ್ರಾಣಿಗಳ ದಾಂಧಲೆ: 2 ಲಕ್ಷಕ್ಕೂ ಅಧಿಕ ಬೆಳೆ ನಷ್ಟ

ಕೊಳ್ಳೇಗಾಲ, ಜು.29– ತಾಲೂಕಿನ ಗುಂಡಾಲ್ ಜಲಾಶಯ ವ್ಯಾಪ್ತಿಯ ಜಮೀನುಗಳಿಗೆ ಕಾಡು ಪ್ರಾಣಿಗಳು ನುಗ್ಗಿ ಬೆಳೆ ನಾಶವಾಡಿರುವ ಘಟನೆ ವರದಿಯಾಗಿದೆ



ಗುಂಡಾಲ್ ಜಲಾಶಯದ ಮೋಡಳ್ಳಿಯಲ್ಲಿನ ರೈತ ಮಹಿಳೆ ಗೌರಮ್ಮ ಜಮೀನಿನ ಭತ್ತದ ಬೆಳೆ ಕಾಡು ಪ್ರಾಣಿಗಳ ಹಾವಳಿಯಿಂದ ಹಾಳಾಗಿರುವುದು.

ಮೋಳೆ ಬಡಾವಣೆಯ ಗೌರಮ್ಮ ಎನ್ನುವರು ಜಮೀನನ್ನು ಗುತ್ತಿಗೆ ಪಡೆದು ಬೆಳೆಸಲಾಗಿದ್ದ ಭತ್ತದ ಫಸಲನ್ನು ಜಿಂಕೆಗಳು, ಕಡವೆಗಳು ನುಗ್ಗಿ ಸಂಪೂರ್ಣ ಹಾಳುಗೆಡವಿದ್ದು ಸುಮಾರು 2ಲಕ್ಷಕ್ಕೂ ಅಧಿಕ ಬೆಳೆ ನಷ್ಟವಾಗಿದೆ ಎನ್ನಲಾಗಿದೆ.

ಗುಂಡಾಲ್ ಪ್ರದೇಶದ ಜಮೀನಿಗಳಿಗೆ ಎರಡು ಮೂರು ತಿಂಗಳಿಂದ ಕಾಡು ಪ್ರಾಣಿಗಳು ದಾಳಿ ನಡೆಸುತ್ತಿದ್ದರೂ ಸಹ ಯಾವುದೇ ಅಧಿಕಾರಿಗಳು ತಡೆಗಟ್ಟಲು ಮುಂದಾ ಗುತ್ತಿಲ್ಲ. ತಾವೇ ತಡೆಗಟ್ಟಲು ಪಟಾಕಿ ಕೇಳಿದರೂ ಸಹ ಅರಣ್ಯ ಅಧಿಕಾರಿಗಳು ನಿರಾಕರಿಸಿದ್ದು ನೀಡಲು ಹಿಂದೇಟು ಹಾಕು ತ್ತಿದ್ದಾರೆ, ಇದರಿಂದಾಗಿ ಜಮೀನುಗಳಿಗೆ ಕಾಡುಪ್ರಾಣಿಗಳು ದಾಳಿ ಮಾಡಿ ಕಟಾವು ಬಂದತಂಹ ಫಸಲು ಹಾಳಾಗುತ್ತದೆ. ಕಾಡು ಪ್ರಾಣಿಗಳ ಹಾವಳಿಗೆ ನೇರ ಹೊಣೆ ಅರಣ್ಯ ಅಧಿಕಾರಿಗಳು ಎಂದು ರೈತ ಸಂಘದ ಅಧ್ಯಕ್ಷ ಮಾದೇಶ್ ದೂರಿದ್ದು ಈ ಸಂಬಂಧ ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರವನ್ನು ಅರಣ್ಯ ಮತ್ತು ಕಂದಾಯ ಇಲಾಖೆ ನೀಡಬೇಕು ಎಂದು ಅಮು ಆಗ್ರಹಿಸಿದ್ದಾರೆ.

ನಾಗರ ಪಂಚಮಿ ಪ್ರಯುಕ್ತ ವಿಶೇಷ ಪೂಜೆ

ಗುಂಡ್ಲುಪೇಟೆ ಜು.29(ಸೋಮ್.ಜಿ)– ಪಟ್ಟಣ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವ ರಿಗೆ ಮಂಗಳವಾರ ನಾಗರ ಪಂಚಮಿ ಪ್ರಯುಕ್ತ ವಿಶೇಷ ಪೂಜೆಯನ್ನು ನೆರವೇರಿಸಲಾಯಿತು.



ಪ್ರಧಾನ ಅರ್ಚಕರಾದ ರವಿ ಜೋಯಿಸ್ ಅವರ ನೇತೃತ್ವದಲ್ಲಿ ದೇವಾಲಯವನ್ನು ತಳಿರು ತೋರಣ ಹಾಗೂ ವಿದ್ಯುತ್ ದೀಪದಿಂದ ಅಲಂಕಾರ ಮಾಡಿ ಗರ್ಭಗುಡಿಯಲ್ಲಿರುವ ಷಣ್ಮುಖ ಸ್ವಾಮಿಗೆ ವಿವಿಧ ಹೂಗಳು ಹಾಗೂ ಹಣ್ಣು ನವಿಲಿನ ಗರಿಯಿಂದ ಮತ್ತು ಆಭರಣಗಳಿಂದ ವಿಶೇಷವಾಗಿ ಅಲಂಕಾರ ಮಾಡಿ ಪೂಜೆ ಮತ್ತು ಮಂಗಳಾರತಿ ನೆರವೇರಿಸಲಾಯಿತು. ಈ ಪೂಜಾ ಕಾರ್ಯಕ್ರಮದಲ್ಲಿ ಪಟ್ಟಣದ ವಿವಿಧ ಬಡಾವಣೆಯ ಭಕ್ತರು ಹಾಜರಿದ್ದು ಷಣ್ಮುಖ ಸ್ವಾಮಿಯ ದರ್ಶನ ಪಡೆದರು.

ಎರಡು ತಿಂಗಳು ವಾಹನ ಸಂಚಾರ ನಿಷೇಧ

ಚಾಮರಾಜನಗರ, ಜು. 29–ನಂಜನಗೂಡು ಬಿಳಿಗಿರಿರಂಗನಬೆಟ್ಟ ಮಾರ್ಗ ಚಾಮರಾಜನಗರ ಮತ್ತು ಕ್ಯಾತದೇವರಗುಡಿ ರಸ್ತೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ನಡೆಸಲಿರುವ ಹಿನ್ನೆಲೆಯಲ್ಲಿ ಜು. 28 ರಿಂದ ಸೆಪ್ಟೆಂಬರ್ 27ರವರೆಗೆ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಶಿಲ್ಪಾ ನಾಗ್ ಆದೇಶ ನೀಡಿದ್ದಾರೆ. ನಗರದಿಂದ ಬಿಳಿಗಿರಿರಂಗನಬೆಟ್ಟಕ್ಕೆ ಕೆ.ಗುಡಿ ಮಾರ್ಗವಾಗಿ ಸಂಚರಿಸುವ ಹೊಂಡರಬಾಳು ಅರಣ್ಯ ಇಲಾಖೆಯ ಚೆಕ್ ಪೋಸ್ಟ್ ನಿಂದ ಕೆ. ಗುಡಿವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.



ಧರ್ಮಸ್ಥಳ ಪ್ರಕರಣ: ಕೋರ್ಟ್ ಆದೇಶ ಉಲ್ಲಂಘನೆ ಏಕೆ; ಹೈಕೋರ್ಟ್ ಪ್ರಶ್ನೆ



ಬೆಂಗಳೂರು: ನ್ಯಾಯಾಲಯದ ಆದೇಶಗಳನ್ನು ಏಕೆ ಪದೇ ಪದೇ ಉಲ್ಲಂಘನೆ ಮಾಡುತ್ತಿದ್ದೀರಿ ಎಂದು ಯೂ ಟ್ಯೂಬರ್‌ಗಳನ್ನು ಪ್ರಶ್ನಿಸಿರುವ ಹೈಕೋರ್ಟ್, 'ಪ್ರತಿಬಂಧಕ ಆದೇಶ ನೀಡಿದ ಮೇಲೂ (ಎರಡನೆ ನಂತರ ಮತ್ತೊಂದು ಯೂಟ್ಯೂಬ್) ಚಾನಲ್ ಆರಂಭಿಸುತ್ತಿರುವುದೇಕೆ' ಎಂದು ಮೌಖಿಕವಾಗಿ ಪ್ರಶ್ನಿಸಿದೆ.

ಕೊಲೆಯಾದ ನೂರಾರು ಶವಗಳನ್ನು ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಹೂಳಲಾಗಿದೆ ಎಂಬ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಸಹೋದರ ಡಿ.ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು ಎಂದು ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಮಂಗಳೂರಿನ ಕೊಡಿಬೈಲ್ ವಿಳಾಸ ಹೊಂದಿರುವ ಯೂ ಟ್ಯೂಬ್ ಚಾನಲ್ 'ಕುಡ್ಲ ರ‍್ಯಾಂಪೇಜ್' ಮುಖ್ಯ ಸಂಪಾದಕ ಅಜಯ್ ಬಿನ್ ರಾಮಕೃಷ್ಣ ಪೂಜಾರಿ (32) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವ ವ್ಯಕ್ತಿಯ ಅರ್ಜಿಯನ್ನು ಪರಿಗಣಿಸಬೇಕು ಎಂದು ನೀವು ಹೇಗೆ ನಿರೀಕ್ಷಿಸುತ್ತೀರಿ ಎಂದು ಅರ್ಜಿದಾರರನ್ನು ಪ್ರಶ್ನಿಸಿತು.

ವಿಚಾರಣೆ ವೇಳೆ ಕುಡ್ಲ ರ‍್ಯಾಂಪೇಜ್ ಪರ ಸುಪ್ರೀಂಕೋರ್ಟ್ ವಕೀಲ ಎ.ವೇಲನ್, ಹರ್ಷೇಂದ್ರ ಕುಮಾರ್ ಅವರು ಮಾಧ್ಯಮಗಳ ವಿರುದ್ಧ ನಿರಂತರವಾಗಿ ಸಾಕಷ್ಟು ಪ್ರತಿಬಂಧಕ ಆದೇಶಗಳನ್ನು ಪಡೆದುಕೊಂಡಿದ್ದಾರೆ. ಈ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು ಮಾನಹಾನಿಯ ಅಂಶಗಳನ್ನು ಪರಿಶೀಲನೆಗೆ ಒಳಪಡಿಸದೆಯೇ ಮಾಧ್ಯಮಗಳನ್ನು ನಿರ್ಬಂಧಿಸಿದೆ. ಹೀಗಾದರೆ, ಸುಪ್ರೀಂಕೋರ್ಟ್‌ನ ಮಹತ್ವದ ತೀರ್ಪುಗಳಿಗೆ ಅಡಿಗಲ್ಲಾಗಿರುವ ತನಿಖಾ ಪತ್ರಿಕೋದ್ಯಮದ ಪ್ರಶ್ನೆ ಏನಾಗಬೇಕು? ಮಾಧ್ಯಮಗಳ ವರದಿಯನ್ನೇ ಆಧರಿಸಿ ರಾಜ್ಯ ಸರ್ಕಾರ ಧರ್ಮಸ್ಥಳದಲ್ಲಿ ಕೊಲೆ ಮಾಡಿ ಹೂತಿರುವ ಶವಗಳ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಿದೆ ಎಂದರು.

ಇದನ್ನು ಅಲ್ಲಗಳೆದ ಪ್ರತಿವಾದಿ ಹರ್ಷೇಂದ್ರ ಕುಮಾರ್ ಪರ ಪದಾಂಕಿತ ಹಿರಿಯ ವಕೀಲ ಉದಯ್ ಹೊಳ್ಳ ಅವರು, ಸುಪ್ರೀಂಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿಯೇ ವಿಚಾರಣಾ ನ್ಯಾಯಾಲಯವು ಮಾಧ್ಯಮಗಳನ್ನು ನಿರ್ಬಂಧಿಸಿ ಏಕಪಕ್ಷೀಯ ಪ್ರತಿಬಂಧಕ ಆದೇಶ ನೀಡಿದೆ. ಸಂವಿಧಾನದ 21ನೇ ವಿಧಿಯ ಮತ್ತೊಂದು ಮುಖವೇ ವ್ಯಕ್ತಿಯೊಬ್ಬನ ಘನತೆಯ ಹಕ್ಕು. ಮಾನಹಾನಿ ಸಾವಿಗಿಂತಲೂ ಕನಿಷ್ಠ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಪುನರುಚ್ಚರಿಸಿದೆ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಕೆಲಕಾಲ ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು ಆಗಸ್ಟ್ 1ರಂದು ಆದೇಶ ಪ್ರಕಟಿಸಲು ಪ್ರಯತ್ನಿಸಲಾಗುವುದು ಎಂದು ಮೌಖಿಕವಾಗಿ ತಿಳಿಸಿದರು.

ದರ್ಶನ್ ಅಭಿಮಾನಿಗಳಿಂದ ರಮ್ಯಗೆ ಅಶ್ಲೀಲ ಸಂದೇಶ ಪ್ರಕರಣ: ಸಿಸಿಬಿ ತನಿಖೆ

▸ ರಮ್ಯಾ ಬೆಂಬಲಕ್ಕೆ ನಿಂತ ದೊಡ್ಮನೆ ಕುಟುಂಬ

ಪ್ರಮೋದ್‌ಗೌಡ ಸೇರಿ 43 ಖಾತೆದಾರರ ವಿರುದ್ಧ ಎಫ್‌ಐಆರ್ ದಾಖಲು


ರಮ್ಯ


ಶಿವರಾಜ್ ಕುಮಾರ್


ಪ್ರಥಮ್

ಬೆಂಗಳೂರು, ಜು.29– ನಟ ದರ್ಶನ್ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿರುವ ಪ್ರಕರಣದ ತನಿಖೆಯನ್ನು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಸಿಸಿಬಿಗೆ ವಹಿಸಿದ್ದಾರೆ.

ಜಂಟಿ ಪೊಲೀಸ್ ಕಮಿಷನರ್ ಮೇಲ್ವಿಚಾರಣೆಯಲ್ಲಿ ಎಸಿಪಿ ದರ್ಜೆಯ ಅಧಿಕಾರಿಯನ್ನು ತನಿಖೆಗೆ ನೇಮಿಸಲಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಬೆದರಿಕೆ ಹಾಕಿದ್ದ ಆರೋಪಿಗಳ ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಸೀಮಂತ್‌ಕುಮಾರ್ ಸಿಂಗ್ ತಿಳಿಸಿದರು.

ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾದ ಪ್ರಕರಣದ ಕಡತವನ್ನು ಪಡೆದುಕೊಂಡಿರುವ ಸಿಸಿಬಿ ಪೊಲೀಸರು, ತನಿಖೆ ಆರಂಭಿಸಿದ್ದಾರೆ. ರಮ್ಯಾ ಅವರನ್ನು ಮಂಗಳವಾರ ಭೇಟಿ ಮಾಡಿದ ಸಿಸಿಬಿ ಪೊಲೀಸರು, ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಮಾಹಿತಿ ಕಲೆಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಲವರ ವಿರುದ್ಧ ಎಫ್‌ಐಆರ್: ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಮ್ಯಾ ಅವರು ಸೀಮಂತ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿ ನಾಲ್ಕು ಪುಟಗಳ ದೂರು ನೀಡಿದ್ದರು. ದೂರಿನ ಪ್ರತಿಯನ್ನು ಪೊಲೀಸ್ ಕಮಿಷನರ್ ಸೈಬರ್ ಠಾಣೆಗೆ ವರ್ಗಾವಣೆ ಮಾಡಿ ತನಿಖೆಗೆ ಆದೇಶಿಸಿದ್ದರು.

ಪ್ರಮೋದ್‌ಗೌಡ, ಡಿ.ಬಾಸ್ ಗಂಗಾ, ಆಕಾಶ್, ದೊಣ್ಣೂರು ನಾಗರಾಜ್, ರಾಜು, ಅಪ್ಪು ಬಡಿಗೇರ್, ಡೆವಿಲ್ ಲವ್ವರ್, ಆಕಾಶ್, ಹರೀಶಣ್ಣ, ಹೇಮಂತ್, ಸುಜನ್, ಚಿನ್ಮಯ್, ವಿನು ಸೇರಿದಂತೆ 43 ಖಾತೆಗಳ ವಿರುದ್ಧ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಕಾಯ್ದೆಯ ಸೆಕ್ಷನ್‌ಗಳಾದ 351(2) (ಕ್ರಿಮಿನಲ್ ಬೆದರಿಕೆಯ ಉದ್ದೇಶದ ಅಪರಾಧ), 351(3) (ಸಾವು, ತೀವ್ರ ನೋವುಂಟು ಮಾಡುವ ಉದ್ದೇಶದ ಕ್ರಿಮಿನಲ್ ಬೆದರಿಕೆ), 352 (ಉದ್ದೇಶ ಪೂರ್ವಕ ಅವಮಾನದ ಮೂಲಕ ಶಾಂತಿಭಂಗದ ಯತ್ನ), 75(1) (ಲೈಂಗಿಕ ಕಿರುಕುಳ), 75(1)(IV) (ಲೈಂಗಿಕ ಟೀಕೆ) ಹಾಗೂ 79 (ಮಹಿಳೆಯ ಗೌರವಕ್ಕೆ ಧಕ್ಕೆ) ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರೆ ಆರು ಆರೋಪಿಗಳಿಗೆ ಜಾಮೀನು ನೀಡಿರುವ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಕಳೆದ ವಾರ ಛೀಮಾರಿ ಹಾಕಿ ಜಾಮೀನಿನ ಮೇಲಿನ ಆದೇಶವನ್ನು ಕಾಯ್ದಿರಿಸಿತ್ತು. ಇದರ ಬೆನ್ನಲ್ಲೇ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದ ರಮ್ಯಾ, 'ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಒಂದು ಭರವಸೆಯ ಕಿರಣ ಇದ್ದಂತೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ' ಎಂದು ಉಲ್ಲೇಖಿಸಿದ್ದರು. ಈ ಪೋಸ್ಟ್ ಬಳಿಕ ರಮ್ಯಾ ಅವರ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು. ಸಂದೇಶಗಳ ಸ್ಕ್ರೀನ್‌ಶಾಟ್ ಅನ್ನು ರಮ್ಯಾ ತೆಗೆದುಕೊಂಡು ಪೊಲೀಸರಿಗೆ ದೂರು ನೀಡಿದ್ದಾರೆ.

ನಟಿ ರಮ್ಯಾ ಬೆಂಬಲಕ್ಕೆ ನಿಂತ 'ದೊಡ್ಮನೆ': ನಟ ದರ್ಶನ್ ಅಭಿಮಾನಿಗಳ ದುರ್ವರ್ತನೆ ವಿರುದ್ಧ ನಟಿ ರಮ್ಯಾ ಸಾರಿರುವ ಸಮರಕ್ಕೆ ದೊಡ್ಮನೆ ಬೆಂಬಲ ದೊರೆತಿದ್ದು, ನಟ ಶಿವರಾಜ್‌ಕುಮಾರ್ ದಂಪತಿ ಮತ್ತು ಯುವರಾಜಕುಮಾರ್, ವಿನಯ್ ರಾಜ್‌ಕುಮಾರ್ ರಮ್ಯಾ ಪರ ಬ್ಯಾಟ್ ಬೀಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಶಿವಣ್ಣ, 'ರಮ್ಯಾ, ನಿಮ್ಮ ನಿಲುವು ಸರಿಯಿದೆ, ನಿಮ್ಮ ಜೊತೆಗೆ ನಾವು ಸದಾ ನಿಲ್ಲುತ್ತೇವೆ' ಎಂದಿದ್ದಾರೆ. 'ರಮ್ಯಾ ಅವರ ವಿರುದ್ಧ ಬಳಸಿರುವ ಪದಗಳು ಖಂಡನೀಯ. ಯಾವ ಮಹಿಳೆಯ ವಿರುದ್ಧವೂ ಹೀಗೆ ಮಾತನಾಡುವುದು ಸರಿಯಲ್ಲ. ಅದನ್ನು ನಾವು ಸಹಿಸಬಾರದು' ಎಂದು ಎಕ್ಸ್‌ನಲ್ಲಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಅಂತೆಯೇ 'ಮಹಿಳೆಯರನ್ನು ತಾಯಿಯಾಗಿ, ಅಕ್ಕನಾಗಿ, ಮಗಳಾಗಿ, ಮಡದಿಯಾಗಿ ಮತ್ತು ಮೊಟ್ಟಮೊದಲು ವ್ಯಕ್ತಿಯಾಗಿ ಗೌರವಿಸುವುದು ತುಂಬಾ ಮುಖ್ಯ. ಸೋಷಿಯಲ್ ಮೀಡಿಯಾ ತುಂಬಾ ಬಲಿಷ್ಠವಾದ ಅಸ್ತ್ರ. ಅದನ್ನು ತಮ್ಮ ಏಳಿಗಾಗಿ ಬಳಸಬೇಕೇ ಹೊರತು ಅವಾಚ್ಯ ಶಬ್ದಗಳಿಂದ ನಿಂದಿಸಿ ದ್ವೇಷ–ಅಸೂಯೆಯನ್ನು ಬಿತ್ತಲು ಬಳಸಬಾರದು. ನಿಮ್ಮ ನಿಲುವು ಸರಿಯಿದೆ, ನಿಮ್ಮ ಜೊತೆ ನಾವು ನಿಲ್ಲುತ್ತೇವೆ' ಎಂದಿದ್ದಾರೆ.

ನಿಮ್ಮ ಕುಟುಂಬದಲ್ಲೇ ಇದೆಲ್ಲ ಆದಾಗ ನಿದ್ದೆ ಮಾಡ್ತಾ ಇದ್ರಾ?

ಯುವ ರಾಜಕುಮಾರ್ ಪತ್ನಿ ಶ್ರೀದೇವಿ ಆಕ್ರೋಶ!


ಶ್ರೀದೇವಿ

ಬೆಂಗಳೂರು, ಜು.29– ನಟಿ ರಮ್ಯಾಗೆ ನಟ ದರ್ಶನ್ ಅಭಿಮಾನಿಗಳು ಮಾಡಿದ ಅಶ್ಲೀಲ ಸಂದೇಶಗಳ ವಿರುದ್ಧ ಕನ್ನಡ ಚಿತ್ರರಂಗದ ಅನೇಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶಿವರಾಜ್‌ಕುಮಾರ್, ಯುವರಾಜಕುಮಾರ್ ವಿನಯ್ ರಾಜ್‌ಕುಮಾರ್ ಮತ್ತು ಪ್ರಥಮ್ ಮುಂತಾದವರು ರಮ್ಯಾಗೆ ಬೆಂಬಲ ನೀಡಿದ್ದಾರೆ. ಆದರೆ ಡಾ. ರಾಜಕುಮಾರ್ ಕುಟುಂಬದ ಸದಸ್ಯರ ಮಾತಿಗೆ ಯುವ ರಾಜ್‌ಕುಮಾರ್ ಪತ್ನಿ ಶ್ರೀದೇವಿ ತಿರುಗೇಟು ನೀಡಿದ್ದಾರೆ.

ಮಾಧ್ಯಮಗಳಲ್ಲಿ ಮಹಿಳೆಯರನ್ನು ಅವಮಾನಿಸುವುದರ ವಿರುದ್ಧ ಮಾತನಾಡುವುದು ನೋಡುವಾಗ, ತಮ್ಮ ಕುಟುಂಬದಲ್ಲೇ ಇದೆಲ್ಲ ನಡೆಯುವಾಗ ಮಾತಾಡದೇ ಸುಮ್ಮನೇ ಇದ್ರಲ್ಲ, ಆವಾಗ ನಿದ್ರೆ ಮಾಡ್ತಾ ಇದ್ರಾ ಎಲ್ಲ ಎಂದು ಶ್ರೀದೇವಿ ಅವರು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದು ಇದರ ಜೊತೆ 'ಬೂಟಾಟಿಕೆ ವ್ಯಕ್ತಿಗಳು' ಮತ್ತು 'ಡ್ರಾಮಾ' ಎಂಬ ಹ್ಯಾಶ್‌ಟ್ಯಾಗ್‌ಗಳನ್ನು ಬಳಸಿದ್ದಾರೆ.

ದರ್ಶನ್ ಅಭಿಮಾನಿಗಳ ವಿರುದ್ಧ ನಟ ಪ್ರಥಮ್ ಉಪವಾಸ ಸತ್ಯಾಗ್ರಹ

ಬೆಂಗಳೂರು, ಜು.29–ಇತ್ತ ನಟ ದರ್ಶನ್ ಅಭಿಮಾನಿಗಳು ಮತ್ತು ನಟ ಪ್ರಥಮ್ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಸ್ವತಃ ನಟ ದರ್ಶನ್ ಬಂದು ಹೇಳಿಕೆ ನೀಡುವವರೆಗೂ ನಾನು ಒಂದು ತೊಟ್ಟು ನೀರೂ ಕುಡಿಯುವುದಿಲ್ಲ ಎಂದು ನಟ ಪ್ರಥಮ್ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ದರ್ಶನ್ ಅಭಿಮಾನಿಗಳಿಂದ ಹಲ್ಲೆ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಟ ಪ್ರಥಮ್ ಮತ್ತು ದರ್ಶನ್ ಅಭಿಮಾನಿಗಳ ನಡುವಿನ ವಾಕ್ಸಮರ ಮುಂದುವರೆದಿದೆ.

ತಮ್ಮ ಮೇಲೆ ಹಲ್ಲೆಗೆ ಮುಂದಾಗಿದ್ದರೆ ಪ್ರಥಮ್ ಏಕೆ ಪೊಲೀಸ್‌ಗೆ ದೂರು ನೀಡಲಿಲ್ಲ ಎಂದು ದರ್ಶನ್ ಅವರ ಫ್ಯಾನ್ ಪೇಜ್ D Company Fans Association ಪ್ರಶ್ನೆ ಮಾಡಿತ್ತು. ಈ ಬೆಳವಣಿಗೆ ಬೆನ್ನಲ್ಲೇ ನಟ ಪ್ರಥಮ್ ಅವರು ದರ್ಶನ್ ಅಭಿಮಾನಿಗಳ ವಿರುದ್ಧ ತಿರುಗಿ ಬಿದ್ದಿದ್ದು, ತಮ್ಮ ಮೇಲಿನ ಹಲ್ಲೆ ವಿಚಾರವಾಗಿ ಇಂದು ಪ್ರಥಮ್ ಪೊಲೀಸರಿಗೆ ದೂರು ನೀಡಿದ್ದಾರೆ. ಬೆಂಗಳೂರು ಗ್ರಾಮಾಂತರ ಎಸ್‌ಪಿ ಕಚೇರಿ ಎದುರು ಪ್ರಥಮ್ ಅವರು ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಆರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಆರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ. ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ (ಇಡಿಸಿಎಸ್) ನಿರ್ದೇಶಕಿ ಅಪರ್ಣಾ ರಮೇಶ್ ಅವರನ್ನು ವಾಣಿಜ್ಯ ತೆರಿಗೆ ಇಲಾಖೆ ಸೇವಾ ವಿಭಾಗದ ಹೆಚ್ಚುವರಿ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದ್ದು, ಇ–ಆಡಳಿತ ಕೇಂದ್ರದ ಸಿಇಒ ಟಿ. ಭೂಬಾಲನ್ ಅವರಿಗೆ ಇಡಿಸಿಎಸ್‌ನ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ವಾಣಿಜ್ಯ ತೆರಿಗೆ ಇಲಾಖೆ ಸೇವಾ ವಿಭಾಗದ ಹೆಚ್ಚುವರಿ ಆಯುಕ್ತ ಕಾನಿಷ್ಕ ಅವರನ್ನು ಅದೇ ಇಲಾಖೆಯ ಅನುಷ್ಠಾನ ವಿಭಾಗಕ್ಕೆ, ಸ್ಥಳ ನಿರೀಕ್ಷೆಯಲ್ಲಿದ್ದ ಗಂಗೂಬಾಯಿ ಮಾನಕರ್ ಅವರನ್ನು ಕಾರ್ಮಿಕ ಇಲಾಖೆ ಇಎಸ್‌ಐಎಸ್ ಆಯುಕ್ತರ ಹುದ್ದೆಗೆ, ಎನ್. ಚಂದ್ರಶೇಖರ್ ಅವರನ್ನು ಕರ್ನಾಟಕ ಕೌಶಲ ಮಾರುಕಟ್ಟೆ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ, ಎಸ್.ಜೆ. ಸೋಮಶೇಖರ್ ಅವರನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಗಾಜಾ: 60 ಸಾವಿರ ತಲುಪಿದ ಸಾವಿನ ಸಂಖ್ಯೆ

ವಿಶ್ವಸಂಸ್ಥೆ/ ಜಿನೇವಾ (ರಾಯಿಟರ್ಸ್): ಇಸ್ರೇಲ್ ದಾಳಿಯಿಂದ ಗಾಜಾ ಪಟ್ಟಿಯಲ್ಲಿ ಆಹಾರ ಪೂರೈಕೆಗೆ ತಡೆಯುಂಟಾಗಿ, ತೀವ್ರ ಕ್ಷಾಮ ತಲೆದೋರಿದೆ. ತಕ್ಷಣವೇ ನೆರವು ಪೂರೈಸಲು ಕ್ರಮ ಕೈಗೊಳ್ಳಬೇಕಿದ್ದು, ಇಲ್ಲದೇ ಹೋದರೆ, ದೊಡ್ಡ ಪ್ರಮಾಣದಲ್ಲಿ ಸಾವು ಸಂಭವಿಸಲಿದೆ ಎಂದು ಜಾಗತಿಕ ಹಸಿವು ನಿಗಾ ಸಂಸ್ಥೆ ಎಚ್ಚರಿಕೆ ನೀಡಿದೆ.

ಇದರ ಬೆನ್ನಲ್ಲೇ, ಇಸ್ರೇಲ್ ದಾಳಿಯಿಂದ ದೇಶದಲ್ಲಿ ಇದುವರೆಗೆ 60 ಸಾವಿರ ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಾಜಾದಲ್ಲಿ ಮಾನವ ನಿರ್ಮಿತ ಹಸಿವಿನ ಬಿಕ್ಕಟ್ಟನ್ನು 'ಕ್ಷಾಮ' ಎಂದು ವರ್ಗೀಕರಿಸಬಹುದು ಎಂದು ಸಮಗ್ರ ಆಹಾರ ಭದ್ರತಾ ವರ್ಗೀಕರಣ (ಐಪಿಸಿ) ಕಳವಳ ವ್ಯಕ್ತಪಡಿಸಿದೆ. ಇಸ್ರೇಲ್ ಮೇಲೆ ಹೆಚ್ಚಿನ ಒತ್ತಡ ಹೇರುವ ಮೂಲಕ ಸಂತ್ರಸ್ತರಿಗೆ ಆಹಾರ ತಲುಪಿಸಲು ಕ್ರಮ ಕೈಗೊಳ್ಳಬಹುದು ಎಂದು ಹೇಳಿದೆ.

ದೊಡ್ಡ ಪ್ರಮಾಣದಲ್ಲಿ ಹಸಿವು, ಅಪೌಷ್ಟಿಕತೆ ಹಾಗೂ ಹಸಿವಿನಿಂದ ಉಂಟಾಗುತ್ತಿರುವ ಸಾವು ಹಾಗೂ ಕಾಯಿಲೆಗಳು ಹೆಚ್ಚಳವಾಗುತ್ತಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ ಎಂದು ತಿಳಿಸಿದೆ.

ಗಾಜಾದಲ್ಲಿ 'ಕ್ಷಾಮ' ಎಂದು ಘೋಷಿಸಲು ಅನುಕೂಲ ಮಾಡಿಕೊಡುವ ತ್ವರಿತ ಔಪಚಾರಿಕ ವಿಶ್ಲೇಷಣೆಯನ್ನು ಪ್ರತಿಪಾದಿಸಿದೆ. ಒಂದೊಮ್ಮೆ ಆ ರೀತಿ ಘೋಷಿಸಿದರೆ, ಗಾಜಾದಲ್ಲಿ ನೆಲಸಿರುವ 21 ಲಕ್ಷ ಮಂದಿಗೆ ಆಹಾರ ತಲುಪಿಸಲು ಎದುರಾಗಿರುವ ಸಮಸ್ಯೆ ನಿವಾರಣೆಯಾಗಲಿದೆಯೇ ಎಂಬುದನ್ನು ಖಚಿತಪಡಿಸಿಲ್ಲ.

ಶೇ. 50 ಮಂದಿಗೆ ಆಹಾರ ಲಭ್ಯವಿಲ್ಲ: ಗಾಜಾದಲ್ಲಿ ಸಂಕಷ್ಟದಲ್ಲಿರುವವರಿಗೆ ಯಾವುದೇ ಆಹಾರ ಸಿಗುತ್ತಿಲ್ಲ. ಮಾನವೀಯ ನೆಲೆಯಿಂದ ವಿತರಣೆಯಾಗುತ್ತಿರುವ ಆಹಾರವು ಭಾನುವಾರದಿಂದ ಶೇಕಡಾ 50ರಷ್ಟು ಮಂದಿಗೂ ತಲುಪುತ್ತಿಲ್ಲ ಎಂದು ವಿಶ್ವ ಆಹಾರ ಯೋಜನೆಯ ಮುಖ್ಯಸ್ಥ ರೋಸ್ ಸ್ಮಿತ್ ತಿಳಿಸಿದ್ದಾರೆ.

ಗಾಜಾ ಪಟ್ಟಿಯಲ್ಲಿ 4.70 ಲಕ್ಷ ಮಂದಿ ಕ್ಷಾಮ ಪರಿಸ್ಥಿತಿ ಎದುರಿಸುತ್ತಿದ್ದು, 90 ಸಾವಿರ ಮಹಿಳೆಯರು ಹಾಗೂ ಮಕ್ಕಳಿಗೆ ವಿಶೇಷ ಪೌಷ್ಟಿಕಾಂಶ ಒದಗಿಸಬೇಕಾದ ಅಗತ್ಯವಿದೆ. ಹಸಿವಿನಿಂದ 88 ಮಕ್ಕಳು ಸೇರಿದಂತೆ 147 ಮಂದಿ ಮೃತಪಟ್ಟಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕದನ ವಿರಾಮಕ್ಕೆ ಕಾಂಬೋಡಿಯಾ–ಥೈಲ್ಯಾಂಡ್ ಒಪ್ಪಿಕೊಂಡಿವೆ: ಮಲೇಷ್ಯಾ ಪ್ರಧಾನಿ


ಪುತ್ರಜಯ: ಥೈಲ್ಯಾಂಡ್ ಮತ್ತು ಕಾಂಬೋಡಿಯಾ ಮಾರಣಾಂತಿಕ ಗಡಿ ಘರ್ಷಣೆ ಪರಿಹರಿಸಲು ಮಧ್ಯರಾತ್ರಿಯಿಂದ 'ತಕ್ಷಣ ಮತ್ತು ಬೇಷರತ್ತಾದ' ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ಸೋಮವಾರ ಹೇಳಿದ್ದಾರೆ.

ಆಸಿಯಾನ್ ಪ್ರಾದೇಶಿಕ ಬಣದ ಮುಖ್ಯಸ್ಥರಾಗಿ ಮಾತುಕತೆಯ ಅಧ್ಯಕ್ಷತೆ ವಹಿಸಿದ್ದ ಅನ್ವರ್, ಸಾಮಾನ್ಯ ಸ್ಥಿತಿಗೆ ಮರಳಲು ಕ್ರಮ ತೆಗೆದುಕೊಳ್ಳಲು ಎರಡೂ ಕಡೆಯವರು ಒಪ್ಪಿದ್ದಾರೆ ಎಂದು ತಿಳಿಸಿದರು.

ಕಾಂಬೋಡಿಯಾ ಪ್ರಧಾನಿ ಹುನ್ ಮಾನೆಟ್ ಮತ್ತು ಥಾಯ್ ಹಂಗಾಮಿ ಪ್ರಧಾನಿ ಫುಮ್ತಾಮ್ ವೆಚಾಯಾಚೈ "ಜುಲೈ 28ರ ಮಧ್ಯರಾತ್ರಿಯಿಂದ ಜಾರಿಗೆ ಬರುವಂತೆ ತಕ್ಷಣ ಮತ್ತು ಬೇಷರತ್ತಾದ ಕದನ ವಿರಾಮಕ್ಕೆ" ಒಪ್ಪಿಕೊಂಡಿದ್ದಾರೆ ಎಂದು ಅನ್ವರ್ ಅವರು ಜಂಟಿ ಪ್ರಕಟಣೆಯನ್ನು ಓದುತ್ತಾ ಹೇಳಿದ್ದಾರೆ. ಹುನ್ ಮಾನೆಟ್ ಮತ್ತು ಫುಮ್ತಾಮ್ ಸಭೆಯ ಫಲಿತಾಂಶವನ್ನು ಶ್ಲಾಘಿಸಿದರು ಮತ್ತು ಸಂಕ್ಷಿಪ್ತ ಪತ್ರಿಕಾಗೋಷ್ಠಿಯ ಕೊನೆಯಲ್ಲಿ ಕೈಕುಲುಕಿದರು.


ಪಿಎಚ್.ಡಿ ಪದವೀಧರರು

ಹೆಚ್.ಎಸ್. ನಾಗಲಕ್ಷ್ಮಿ



ಮೈಸೂರು, ಜು. 29– ಡಾ. ಜಿ.ಎನ್.ಕೆ. ಸುರೇಶ್ ಬಾಬು ಅವರ ಮಾರ್ಗದರ್ಶನದಲ್ಲಿ ಹೆಚ್.ಎಸ್. ನಾಗಲಕ್ಷ್ಮಿ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬೈಜಾ ರಾಣಿ.ಎಸ್



ಮೈಸೂರು, ಜು. 29– ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲಾ ಕಾಲೇಜಿನ ನೃತ್ಯ ವಿಭಾಗದಲ್ಲಿ ಪ್ರಾಧ್ಯಾಪಕರು ಮತ್ತು ನೃತ್ಯ ವಿಭಾಗದ ಮುಖ್ಯಸ್ಥರು ಆದ ಡಾ.ಕೆ.ಕುಮಾರ್ ಮಾರ್ಗದರ್ಶನದಲ್ಲಿ ಬೈಜಾ ರಾಣಿ.ಎಸ್ ಅವರ 'ಗತಿಭೇದಗಳು – ನಾಟ್ಯಶಾಸ್ತ್ರ ಮತ್ತು ಅಭಿನಯದರ್ಪಣಕ್ಕೆ ಒಂದು ಸೌಂದರ್ಯಮಯ ವರ್ಣನೆ – ವಿಶ್ಲೇಷಣಾತ್ಮಕ ಮತ್ತು ಹೋಲಿಕಾತ್ಮಕ ಅಧ್ಯಯನ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಒಕ್ಕಲಿಗ ಸಮುದಾಯ ಬಲಗೊಳಿಸಲು ಒಂದೇ ವೇದಿಕೆಯಡಿ ಕಾರ್ಯ ಚಟುವಟಿಕೆ ಹಮ್ಮಿಕೊಳ್ಳಲು ತೀರ್ಮಾನ


ಸಮುದಾಯ ಸಂಘಟಿಸಲು ಮೈಸೂರು ತಾಲೂಕು ಒಕ್ಕಲಿಗರ ಸಂಘದ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೈಸೂರು, ಜು.29(ಎಸ್‌ಪಿಎನ್)– ಮೈಸೂರು ನಗರ ಹಾಗೂ ತಾಲೂಕು ಮಟ್ಟದಲ್ಲಿ ಒಕ್ಕಲಿಗ ಸಮುದಾಯವನ್ನು ಬಲಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಸಂಘ–ಸಂಸ್ಥೆಗಳು ಒಂದೇ ವೇದಿಕೆಯಡಿ ಮತ್ತಷ್ಟು ಕಾರ್ಯ ಚಟುವಟಿಕೆ ಹಮ್ಮಿಕೊಳ್ಳಲು ಒಮ್ಮತದ ತೀರ್ಮಾನವನ್ನು ಕೈಗೊಳ್ಳಲಾಯಿತು.

ಮೈಸೂರಿನ ಜಯನಗರದ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಆವರಣದಲ್ಲಿ ಮೈಸೂರು ತಾಲೂಕು ಒಕ್ಕಲಿಗರ ಸಂಘದ ಮುಖಂಡರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮೈಸೂರು ಜಿಲ್ಲಾ ಮತ್ತು ನಗರದ ಒಕ್ಕಲಿಗ ಸಂಘ–ಸಂಸ್ಥೆಗಳ ಸಾಮರಸ್ಯ ವೇದಿಕೆಯಡಿ ಚರ್ಚೆ ನಡೆಸಿ, ಈ ತೀರ್ಮಾನಕ್ಕೆ ಬರಲಾಯಿತು.

ಸಭೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಜನ ಜಾತಿಗಣತಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಕುರಿತು ಸಮುದಾಯಕ್ಕೆ ಅರಿವು ಮೂಡಿಸುವುದು. ಸಮುದಾಯಕ್ಕೆ ಅನ್ಯಾಯವಾದಾಗ ಸಂಘಟನಾತ್ಮಕವಾಗಿ ಹೋರಾಟ ರೂಪಿಸುವ ಕುರಿತು ಈ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜನ ಜಾತಿಗಣತಿಯ ಬಗ್ಗೆ ಇತರೆ ಸಮುದಾಯಗಳ ಮಠಾಧೀಶರು ಹಾಗೂ ಜನಪ್ರತಿನಿಧಿಗಳು, ಚಿಂತಕರು, ಆಯಾಯ ಸಮುದಾಯವನ್ನು ಜಾಗೃತಗೊಳಿಸುತ್ತಿರುವ ಮಾದರಿಯಲ್ಲಿ ನಮ್ಮ ಸಮುದಾಯದ ಮಠಾಧೀಶರು, ಜನಪ್ರತಿನಿಧಿಗಳು ಮಾತನಾಡದಿರುವುದು ಬೇಸರದ ಸಂಗತಿ. ಈ ಕೂಡಲೇ ಸಮುದಾಯದ ಸ್ವಾಮೀಜಿಗಳು ಹಾಗೂ ಜನಪ್ರತಿನಿಧಿಗಳು ಜನ ಜಾತಿಗಣತಿ ಕುರಿತಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಂತೆ ಒತ್ತಾಯಿಸಲು ತೀರ್ಮಾನಿಸಲಾಯಿತು.

ಜತೆಗೆ ಜಿಲ್ಲೆಯಲ್ಲಿ ಸಮುದಾಯವನ್ನು ಬಲಗೊಳಿಸುವ ನಿಟ್ಟಿನಲ್ಲಿ ಈಗ ರಚಿಸಿಕೊಂಡಿರುವ ಸಾಮರಸ್ಯ ವೇದಿಕೆಯಡಿಯಲ್ಲೇ ಜಿಲ್ಲೆಯ ಪ್ರತಿ ಸಂಘದಿಂದ ಇಬ್ಬರೂ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಸಾಮರಸ್ಯ ವೇದಿಕೆಗೆ ಸದಸ್ಯರಾಗಿ ಸೇರ್ಪಡೆಗೊಳಿಸಲು ತೀರ್ಮಾನಿಸಲಾಯಿತು. ಸರ್ಕಾರದ ಸವಲತ್ತುಗಳನ್ನು ಸಮುದಾಯಕ್ಕೆ ತಲುಪಿಸಲು ಹಾಗೂ ಸಮುದಾಯಕ್ಕೆ ಅನ್ಯಾಯವಾದ ಸಂದರ್ಭದಲ್ಲಿ ಎಲ್ಲರೂ ಒಗ್ಗೂಡಿ ಹೋರಾಟ ನಡೆಸುವ ಬಗ್ಗೆ ಸಭೆಯಲ್ಲಿ ನಿರ್ಣಯಿಸಲಾಯಿತು. ತಾಲೂಕು ಒಕ್ಕಲಿಗ ಸಂಘದ ಕಟ್ಟಡದ ಅಭಿವೃದ್ಧಿ ಬಗ್ಗೆ ರೂಪುರೇಷೆ ರೂಪಿಸಲು ಚರ್ಚಿಸಲಾಯಿತು.

ಸಭೆಯಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೂರ್ಗಳ್ಳಿ ಎಂ.ಮಹದೇವು, ಜಿಪಂ ಮಾಜಿ ಅಧ್ಯಕ್ಷ ಮಾದೇಗೌಡ, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ನೇಗಿಲಯೋಗಿ ಟ್ರಸ್ಟ್‌ನ ರವಿಕುಮಾರ್, ನಮ್ಮೂರು ನಮ್ಮೋರು ಟ್ರಸ್ಟ್ ಅಧ್ಯಕ್ಷ ಸತೀಶ್ ಗೌಡ, ನಗರಪಾಲಿಕೆ ಮಾಜಿ ಸದಸ್ಯೆ ಪ್ರೇಮಾಶಂಕರೇಗೌಡ, ಜಿಪಂ ಮಾಜಿ ಸದಸ್ಯ ಅರುಣ್ ಕುಮಾರ್, ಪೂರ್ವ ಒಕ್ಕಲಿಗರ ಸಂಘ, ವಿವಿಧ ಒಕ್ಕಲಿಗ ಮಹಿಳಾ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಗುಣಮಟ್ಟದ ಶಿಕ್ಷಣದಿಂದ ದೇಶದ ಭವಿಷ್ಯ ಉಜ್ವಲ

ಶ್ರೀ ಭಗವಾನ್ ರಮಣ ಮಹರ್ಷಿ ಜನ್ಮದಿನಾಚರಣೆ



ಮೈಸೂರು, ಜು.29(ಎಸ್‌ಪಿಎನ್)– ದೇಶದ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣದ ನೀಡಬೇಕು. ಇದರಿಂದ ದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀ ರಮಣ ಜ್ಞಾನಕೇಂದ್ರ ಟ್ರಸ್ಟ್‌ವತಿಯಿಂದ ಶ್ರೀ ಭಗವಾನ್ ರಮಣ ಮಹರ್ಷಿಗಳ 145 ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳೇ ದೇಶದ ಮುಂದಿನ ಪ್ರಜೆಗಳು. ದೇಶದ ಪ್ರತಿಯೊಂದು ಮಗುವು ಕೂಡ ಶಿಕ್ಷಣ ಪಡೆದು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿ ಮುಖ್ಯವಾಹಿನಿಗೆ ಬಂದರೆ, ದೇಶದ ಭವಿಷ್ಯ ಉಜ್ವಲವಾಗಿರುತ್ತದೆ. ದೇಶದ ಭವಿಷ್ಯದ ಪ್ರಜೆಗಳಾದ ಮಕ್ಕಳ ಲಾಲನೆ–ಪಾಲನೆಯಲ್ಲಿ ಯಾವುದೇ ಕೊರತೆಯಾಗದಂತೆ ಪೋಷಕರು ಗಮನಹರಿಸಬೇಕು. ಜೊತೆಗೆ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವಲ್ಲಿ ಪೋಷಕರ ಪಾತ್ರವೂ ಮುಖ್ಯವಾಗಿರುತ್ತದೆ ಎಂದರು.

ಈ ವೇಳೆ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಎಚ್.ಎಲ್.ಚಂದ್ರಶೇಖರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ರಮಣ ಜ್ಞಾನಕೇಂದ್ರದ ವೇದಗುರುಗಳಾದ ಟಿ.ನಾಗಭೂಷಣ್, ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ರಾಮಚಂದ್ರ ಭಟ್, ನಾಗಲಕ್ಷ್ಮೀ, ಎ.ಜಿ.ಸುವತೀಂದ್ರ ಹಾಗೂ ಇತರೆ ಮುಖಂಡರು ಹಾಜರಿದ್ದರು. ಕಾರ್ಯಕ್ರಮದಲ್ಲಿ ವಿದ್ವಾನ್ ನಾಗಭೂಷಣ್ ಅವರ ನೇತೃತ್ವದಲ್ಲಿ ವೇದಘೋಷ ಪಠಿಸಿದರು. ನಂತರ ಎದೆ ತುಂಬಿ ಹಾಡುವೆನು ಖ್ಯಾತಿಯ ಗಾಯಕಿ ಭಾರತಿ ಹುರುಗಲ್ ಪ್ರಾರ್ಥಿಸಿದರು. ಈ ವೇಳೆ ಶಾಲಾ ಮಕ್ಕಳಿಗೆ ಧನಸಹಾಯ ಹಾಗೂ ಶೈಕ್ಷಣಿಕ ಸಾಮಗ್ರಿಗಳ ವಿತರಿಸಿದರು.

ಫುಟ್‌ಪಾತ್ ಅತಿಕ್ರಮಣ, ಅವೈಜ್ಞಾನಿಕ ದ್ವಿಚಕ್ರ ವಾಹನ ಪಾರ್ಕಿಂಗ್‌ನಿಂದ

ಅಪಘಾತಗಳ ವಲಯವಾಗುತ್ತಿರುವ ಚಾಮರಾಜ ಜೋಡಿ ರಸ್ತೆ

ಮೈಸೂರು, ಜು.29(ಎಸ್‌ಪಿಎನ್)– ಫುಟ್‌ಪಾತ್ ಅತಿಕ್ರಮಣ ಮತ್ತು ಅವೈಜ್ಞಾನಿಕ ರಸ್ತೆಬದಿ ಪಾರ್ಕಿಂಗ್‌ನಿಂದ ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಪಾದಚಾರಿಗಳು ಮತ್ತು ವಾಹನ ಸವಾರರ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದು, ದಿನನಿತ್ಯ ಅಪಘಾತಗಳು ಸಂಭವಿಸುತ್ತಿರುವುದರಿಂದ ಈ ರಸ್ತೆ ಅಪಘಾತ ವಲಯವಾಗಿದೆ.


ಚಾಮರಾಜ ಜೋಡಿ ರಸ್ತೆಯಲ್ಲಿ ವಾಹನಗಳ ಅಡ್ಡಾದಿಡ್ಡಿ ಸಂಚಾರ


ಪಾದಚಾರಿಗಳು ಸಾಗುವ ಫುಟ್‌ಪಾತ್‌ನಲ್ಲಿ ತ್ಯಾಗರಾಜ ರಸ್ತೆ ಫಲಕ ಅಳವಡಿಸಿರುವುದು

ಮೈಸೂರು ಹೃದಯ ಭಾಗದ ಬಹುತೇಕ ರಸ್ತೆ, ವೃತ್ತಗಳು, ಸಿಗ್ನಲ್‌ಗಳ ಬಳಿ ಹಾಗೂ ಪ್ರವಾಸಿ ತಾಣಗಳಲ್ಲಿ ಇದೇ ಪರಿಸ್ಥಿತಿ ನಿರ್ಮಾಣವಾಗಿ ಅಲ್ಲಲ್ಲಿ ಸಣ್ಣ ಪುಟ್ಟ ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಅದರಲ್ಲೂ ಚಾಮರಾಜ ಜೋಡಿ ರಸ್ತೆಯ ಸ್ಥಿತಿಯಂತೂ ಹೇಳತೀರದಾಗಿದೆ.

ಚಾಮರಾಜ ಜೋಡಿ ರಸ್ತೆಯು ನೂರಡಿ ರಸ್ತೆ ಆಗಿದ್ದರೂ ಪಾದಚಾರಿಗಳು, ಮಹಿಳೆಯರು, ವೃದ್ಧರು ಈ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ. ದೂರದ ಊರುಗಳಿಂದ ಬರುವ ಗ್ರಾಮೀಣ ಪ್ರದೇಶದ ಜನರು, ಸಂಸ್ಕೃತ ಪಾಠಶಾಲಾ ಬಳಿ ಬಸ್ ಇಳಿದು ಕಾಡಾ ಕಚೇರಿಗೆ, ಸಹಕಾರ ಭವನಕ್ಕೆ, ರಮಾವಿಲಾಸ ರಸ್ತೆಗೆ ಹೊಂದಿಕೊಂಡಿರುವ ಕೃಷಿ ಪರಿಕರದ ಅಂಗಡಿಗಳಿಗೆ ಭೇಟಿ ನೀಡುವುದರಿಂದ ಈ ರಸ್ತೆ ಸದಾ ಜನದಟ್ಟಣೆಯಿಂದ ಕೂಡಿರುತ್ತದೆ.

ಇದರ ಜೊತೆಗೆ ಚಾಮರಾಜ ಜೋಡಿ ರಸ್ತೆಯಲ್ಲಿ ವಾಹನ ಬಿಡಿಭಾಗಗಳು, ದ್ವಿಚಕ್ರ ವಾಹನಗಳ ಷೋರೂಂ, ಬ್ಯಾಂಕ್‌ಗಳು, ಹೆಲ್ಮೆಟ್ ಅಂಗಡಿಗಳು, ಟೈಯರ್‌ಗಳ ಮಾರಾಟ ಮತ್ತು ಸರ್ವಿಸ್, ಗ್ಯಾರೇಜ್, ನಂಬರ್ ಪ್ಲೇಟ್ ಅಳವಡಿಕೆ ಹಾಗೂ ಸ್ಟಿಕ್ಕರ್‌ಗಳ ಮಾರಾಟದ ಅಂಗಡಿ ಸೇರಿದಂತೆ ಇತರೆ ಅಂಗಡಿಗಳು ಇಲ್ಲಿದ್ದು, ಬಹುತೇಕ ಎಲ್ಲಾ ಅಂಗಡಿಗಳು ಫುಟ್‌ಪಾತ್ ಅತಿಕ್ರಮಿಸಿಕೊಂಡಿರುವುದರಿಂದ ಪಾದಚಾರಿಗಳು, ಫುಟ್‌ಪಾತ್ ಬಿಟ್ಟು ರಸ್ತೆಗೆ ಇಳಿಯುವಂತಾಗಿದೆ.

ಹಲವು ರಸ್ತೆಗಳಿಗೆ ಸಂಪರ್ಕದ ಕೊಂಡಿ: ಚಾಮರಾಜ ಜೋಡಿ ರಸ್ತೆ ಮೈಸೂರಿನ ಹೃದಯ ಭಾಗದ ದಕ್ಷಿಣದಲ್ಲಿದೆ. ಈ ರಸ್ತೆ 2.5 ಕಿ.ಮೀ ಉದ್ದವಿದೆ. ನಿತ್ಯ ನಗರ ಮತ್ತು ಗ್ರಾಮಾಂತರ ಬಸ್ ನಿಲ್ದಾಣದಿಂದ ಮೈಸೂರು–ಕೊಡಗು, ಮಂಗಳೂರು, ಧರ್ಮಸ್ಥಳ, ಉಡುಪಿ ಜಿಲ್ಲೆ, ನಗರದ ಇತರೆ ಬಡಾವಣೆಗಳು ಸೇರಿದಂತೆ ಜಿಲ್ಲೆಗಳಿಗೆ ನೂರಾರು ಸಾರಿಗೆ ಬಸ್‌ಗಳು ಈ ಮಾರ್ಗದಲ್ಲಿ ಸಂಚರಿಸಬೇಕಾಗಿದೆ. ಅಲ್ಲದೆ, ಈ ರಸ್ತೆಗೆ ಕಾಂತರಾಜ ಅರಸ್ ರಸ್ತೆ, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ರಸ್ತೆ, ದಿವಾನ್ಸ್ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ತ್ಯಾಗರಾಜ ರಸ್ತೆ, ದಳವಾಯಿ ರಸ್ತೆ, ಸಯ್ಯಾಜಿರಾವ್ ರಸ್ತೆ, ರಾಮಾನುಜ ರಸ್ತೆ ಮತ್ತು ಉತ್ತರಾದಿ ಮಠದ ರಸ್ತೆ ಸೇರಿದಂತೆ ಇತರೆ ಪ್ರಮುಖ ಬಡಾವಣೆಗಳಿಗೆ ಈ ರಸ್ತೆಗೆ ಸಂಪರ್ಕದ ಕೊಂಡಿಯಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ.

ಹಲವು ಸರ್ಕಾರಿ ಕಚೇರಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ: ಚಾಮರಾಜ ಜೋಡಿ ರಸ್ತೆಯ ಮೂಲಕ ವಿಶ್ವವಿದ್ಯಾನಿಲಯದ ಎಂಜಿನಿಯರಿಂಗ್ ವಿಭಾಗದ ಕಚೇರಿ, ಮಹಾರಾಜ ಕಾಲೇಜು ಮೈದಾನ ಮತ್ತು ವಸತಿ ನಿಲಯ, ಜಿಲ್ಲಾ ಪಂಚಾಯತ್, ಜಿಲ್ಲಾ ನ್ಯಾಯಾಲಯ, ಮಹಾರಾಜ ಪಿಯು ಕಾಲೇಜು ವಸತಿ ನಿಲಯ, ಸ್ವಾತಂತ್ರ್ಯ ಹೋರಾಟಗಾರ ಉದ್ಯಾನವನ, ಅರಸು ಬೋರ್ಡಿಂಗ್ ಶಾಲೆ, ಸಹಕಾರ ಭವನ, ಸಾರ್ವಜನಿಕ ಕಚೇರಿ ಕಟ್ಟಡಗಳು, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಸರಸ್ವತಿಪುರಂ ಅಗ್ನಿಶಾಮಕ ದಳದ ಕಚೇರಿಗೂ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ಇಲ್ಲಿ ವಾಹನಗಳ ಸಂಚಾರ, ಸಾರ್ವಜನಿಕರ ಓಡಾಟ, ಜೊತೆಗೆ ಜೋಡಿ ರಸ್ತೆಯ ಎರಡು ಕಡೆಯೂ ದ್ವಿಚಕ್ರ ವಾಹನಗಳ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದ್ದು, ಸಂಚಾರಿ ಪೊಲೀಸರ ನಿರ್ಲಕ್ಷ್ಯದಿಂದ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುತ್ತಿರುವುದು ಸಹ ಸುಗಮ ಸಂಚಾರಕ್ಕೆ ಅಡಚಣೆಯನ್ನುಂಟು ಮಾಡಿದೆ.

ಈ ಎಲ್ಲಾ ಅವ್ಯವಸ್ಥೆಗಳಿಂದ ದಿನನಿತ್ಯ ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಕಳೆದ 16 ತಿಂಗಳಲ್ಲಿ ಮೈಸೂರಿನ ವಿವಿಧ ಸ್ಥಳಗಳಲ್ಲಿ ಕೆಎಸ್‌ಆರ್‌ಟಿಸಿ ಸಾರಿಗೆ ಬಸ್‌ಗಳಿಂದ 66 ಅಪಘಾತಗಳು ಸಂಭವಿಸಿದ್ದು, 15 ಜೀವ ಬಲಿಯಾಗಿವೆ. ಅಪಘಾತದಿಂದ 51 ಮಂದಿ ಗಾಯಗೊಂಡಿದ್ದು, 16 ಮಂದಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ, ಇದರಲ್ಲಿ ಚಾಮರಾಜ ಜೋಡಿ ರಸ್ತೆಯಲ್ಲೇ 10ರಿಂದ 12 ಅಪಘಾತಗಳು ಪ್ರಕರಣ ದಾಖಲಾಗಿವೆ ಎನ್ನುತ್ತಾರೆ ಸಂಚಾರಿ ಪೊಲೀಸರು.

ಸಾರಿಗೆ ಬಸ್ ಚಾಲಕರಿಗೂ ಜಾಗೃತಿ ಸಂದೇಶ: ಮೈಸೂರು ನಗರದ ಪ್ರಮುಖ ರಸ್ತೆಗಳಲ್ಲಿ ಅಪಘಾತಕ್ಕೆ ಕಾರಣವಾಗಿರುವ ಅಂಶಗಳನ್ನು ಗುರುತಿಸಿರುವ ಕೆಎಸ್‌ಆರ್‌ಟಿಸಿ ಅಧಿಕಾರಿಗಳು, ನಗರ ಪ್ರದೇಶದ ಪ್ರಮುಖ ರಸ್ತೆಗಳಲ್ಲಿ ಸಾರಿಗೆ ಬಸ್‌ಗಳು ಹೆಚ್ಚು ಸಂಚರಿಸುವ ಕಡೆ ಚಾಲಕರು ಜಾಗೃತಿ ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಅದರಲ್ಲೂ ಚಾಮರಾಜ ಜೋಡಿ ರಸ್ತೆಯಲ್ಲಿ ಸಂಚರಿಸುವಾಗ ಜಾಗೃತಿ ವಹಿಸುವಂತೆ ಚಾಲಕರಿಗೆ ಸ್ಪಷ್ಟ ಸಂದೇಶವನ್ನು ರವಾನಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಾಳೆ ಆರ್.ಧ್ರುವನಾರಾಯಣ್ ಹುಟ್ಟುಹಬ್ಬ: ಉದ್ಯೋಗ ಮೇಳ



ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿದರು.

ನಂಜನಗೂಡು, ಜು.29– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ 64ನೇ ಹುಟ್ಟುಹಬ್ಬದ ಪ್ರಯುಕ್ತ ಜು.31ರಂದು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ದರ್ಶನ್ ನೇತೃತ್ವದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲೆಗಳ ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗವಕಾಶ ಕಲ್ಪಿಸುವ ಸಲುವಾಗಿ ಈ ಉದ್ಯೋಗ ಮೇಳ ಆಯೋಜಿಸಲಾಗಿದೆ. ನಗರದ ತಾಂಡ್ಯ, ಅಡಕನಹಳ್ಳಿ ಹಾಗೂ ಮೈಸೂರು ಕೈಗಾರಿಕಾ ಪ್ರದೇಶಗಳ ನೆಸ್ಲೆ ಇಂಡಿಯಾ, ಐಟಿಸಿ, ಹೆಚ್‌ಡಿಬಿ ಬ್ಯಾಂಕ್, ಜ್ಯುಬಿಲಿಯಂಟ್, ಕಾರ್ಲ್ಸ್‌ಬರ್ಗ್, ಬಕಾರ್ಡಿ, ಜೆ.ಕೆ.ಟೈರ್ಸ್ ಸೇರಿದಂತೆ 97 ಕಂಪನಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲಿವೆ ಎಂದರು.

ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್, ಎಂಎಲ್‌ಸಿ ಡಾ.ಯತೀಂದ್ರ, ಶಾಸಕರಾದ ಅನಿಲ್, ಗಣೇಶ್ ಪ್ರಸಾದ್, ಮಾಜಿ ಸಂಸದ ಡಿ.ಕೆ.ಸುರೇಶ್ ಭಾಗವಹಿಸಲಿದ್ದಾರೆ. ಕಾಯಕಯೋಗಿ ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬವನ್ನು ಉದ್ಯೋಗ ಮೇಳ, ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರಗಳಂತಹ ಜನಪರ ಕಾರ್ಯಕ್ರಮಗಳನ್ನು ಆಯೋಜಿಸಿ ಆಚರಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ ಯುವಕರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದರು.

ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರು ನಾಮಕರಣ: ನಗರ ಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ನಗರದಲ್ಲಿ 80 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾದ ರೈಲ್ವೆ ಮೇಲ್ಸೆತುವೆಗೆ ಶಾಸಕ ದರ್ಶನ್ ಅವರ ಆಶಯದಂತೆ ಧ್ರುವನಾರಾಯಣ್ ಅವರ ಹುಟ್ಟುಹಬ್ಬದಂದು ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಹೆಸರನ್ನು ನಾಮಕರಣ ಮಾಡಲು ನಗರಸಭಾ ಆಡಳಿತ ತೀರ್ಮಾನಿಸಿದೆ. ರೈಲ್ವೆ ಮೇಲ್ಸೆತುವೆಗೆ ಹೆಸರನ್ನು ಇಡುವ ವಿಚಾರದಲ್ಲಿ ಧ್ರುವನಾರಾಯಣ್ ಹಾಗೂ ಶ್ರೀನಿವಾಸ ಪ್ರಸಾದ್ ಅವರ ಅಭಿಮಾನಿಗಳ ನಡುವೆ ಗೊಂದಲ ಉಂಟಾಗಿತ್ತು. ನಮ್ಮ ಭಾಗದ ಮುತ್ಸದ್ದಿ ರಾಜಕಾರಣಿಗಳಾಗಿದ್ದ ಇಬ್ಬರು ನಾಯಕರ ಕುಟುಂಬಗಳು ಸೇರಿ ಸೌಹಾರ್ದಯುತವಾಗಿ ಚರ್ಚಿಸಿ ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಹೆಸರನ್ನು ನಾಮಕರಣ ಮಾಡಲು ತೀರ್ಮಾನಿಸಿವೆ. ರಾಜಕಾರಣದಲ್ಲಿ ಸೋತು ಗೆಲ್ಲುವುದು ಔದಾರ್ಯ ಗುಣ. ಅದನ್ನು ಶಾಸಕ ದರ್ಶನ್ ಅವರು ಅನುಸರಿಸಿ ತಂದೆಯಂತೆಯೇ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಅವರ ಹಾದಿಯಲ್ಲಿ ಸಾಗುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಸದಸ್ಯರಾದ ಪ್ರದೀಪ್, ಗಾಯಿತ್ರಿ, ರಮೇಶ್, ರವಿ, ಮುಖಂಡರಾದ ಚೆಲುವರಾಜು, ಎನ್.ಎಂ.ಮಂಜುನಾಥ್, ಶ್ರೀನಿವಾಸಮೂರ್ತಿ, ವಿಜಯ್ ಕುಮಾರ್, ಗೋಪಾಲ್, ಮಹದೇವು, ಬಸವರಾಜು, ಮುದ್ದುಮಾದಶೆಟ್ಟಿ ಕಳಲೆ ರಾಜೇಶ್, ಸತೀಶ್ ಗೌಡ, ಮಹೇಶ್, ವಿಜಯ್ ಕುಮಾರ್, ಪ್ರಕೃತ್ ಉಪಸ್ಥಿತರಿದ್ದರು.

ಗ್ಯಾರಂಟಿ ಯೋಜನೆಗಳಿಂದ ಬಡವರ ಬದುಕು ಸಧೃಡ



ಸಭೆಯಲ್ಲಿ ಅಧ್ಯಕ್ಷ ಚಲುವರಾಜು ಮಾತನಾಡಿದರು.

ಸರಗೂರು, ಜು.29– ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಬಡವರ ಬದುಕು ಸಧೃಡವಾಗಿದೆ ಎಂದು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಚಲುವರಾಜು ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಕ್ತಿ, ಗೃಹ ಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮಿ ಹಾಗೂ ಯುವನಿಧಿ ಸೇರಿದಂತೆ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಅರ್ಹರಿಗೆ ತಲುಪಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣೆ ಪೂರ್ವ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎಲ್ಲಾ 5 ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿ ಶಾಸಕ ದರ್ಶನ್ ನೇತೃತ್ವದಲ್ಲಿ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳು ತಲುಪುತ್ತಿವೆ ಎಂದರು.

ಇದೇ ವೇಳೆ ಪ್ರಸಕ್ತ ಸಾಲಿನ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸುವ ಸಂಬಂಧ ಪೋಸ್ಟರ್ ಹಾಗೂ ಬ್ಯಾನರ್‌ಗಳನ್ನು ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಾರ್ಯದರ್ಶಿ ಪ್ರೇಮ್ ಕುಮಾರ್, ಸದಸ್ಯರಾದ ಡಿ.ಸಿ. ಮಹೇಶ್, ಮಂಜುನಾಥ್, ಮಹದೇವು, ಭಾಗ್ಯ ಕೆಂಪಸಿದ್ದಯ್ಯ, ಈರನಾಯ್ಕ, ರವಿಕುಮಾರ್, ದೇವದಾಸ್, ಮಹಮದ್ ಸುಹೇಬ್, ದೇವರಾಜು, ಚೆಸ್ಕಾಂ ಎಇಇ ಅಶೋಕ್, ಕೆಎಸ್‌ಆರ್ ಟಿಸಿ ಡಿಪೋ ಮ್ಯಾನೇಜರ್ ಮಹದೇವ ಪ್ರಸಾದ್, ಯೋಜನಾಧಿಕಾರಿ ಮಹದೇವಸ್ವಾಮಿ ಉಪಸ್ಥಿತರಿದ್ದರು.

ನಾಗರಪಂಚಮಿ: ಹುತ್ತಕ್ಕೆ ವಿಶೇಷ ಪೂಜೆ



ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳ ಶ್ರೀಮಠದಲ್ಲಿ ಮಂಗಳವಾರ ನಾಗರಪಂಚಮಿ ಅಂಗವಾಗಿ ಹುತ್ತಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಶ್ರೀಮಠದ ಭಕ್ತರು ಹಾಜರಿದ್ದರು.

ಯೋಗ್ಯತೆ ಇದ್ದವರಿಗೆ ಪ್ರಶಸ್ತಿಗಳು ಹುಡುಕಿಕೊಂಡು ಬರಲಿವೆ

ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ



ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜು.29– ಯಾವುದೇ ಪ್ರಶಸ್ತಿ ಅಥವಾ ಅಧಿಕಾರ ಸಿಗಬೇಕಾದರೆ ಯೋಗ, ಯೋಗ್ಯತೆ ಇರಬೇಕು. ಅಂತಹ ವ್ಯಕ್ತಿತ್ವವುಳ್ಳವರಿಗೆ ಪ್ರಶಸ್ತಿಗಳು ಹುಡುಕಿಕೊಂಡು ಬರಲಿವೆ. ಇದಕ್ಕೆ ಚಂದ್ರಶೇಖರ್ ಅವರೇ ಉದಾಹರಣೆ ಎಂದು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಹೇಳಿದರು.

ಪಟ್ಟಣದ ಕುಬಿನಿ ಅತಿಥಿ ಗೃಹದಲ್ಲಿ ವಿವಿಧ ಸಮುದಾಯದ ಮುಖಂಡರಿಂದ ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಆಲಗೂಡು ಚಂದ್ರಶೇಖರ್ ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಭಾರತ್ ಜ್ಯೋತಿ ಪ್ರಶಸ್ತಿಯಿಂದ ಕರ್ನಾಟಕ ಭೂಷಣ ಪ್ರಶಸ್ತಿವರೆಗೂ ಗೌರವ ಪಡೆದಿರುವ ಚಂದ್ರಶೇಖರ್ ಅವರಿಗೆ ಪ್ರಶಸ್ತಿ ದೊರೆತಿರುವುದು ಅವರ ಸಾಮಾಜಿಕ ಕಳಕಳಿ ಹಾಗೂ ಹೋರಾಟಕ್ಕೆ ಮತ್ತು ಶೋಷಿತ ಸಮುದಾಯಗಳಿಗೆ ಸಂದ ಗೌರವ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಡಾ.ಆಲಗೂಡು ಚಂದ್ರಶೇಖರ್, ಸಾಮಾಜಿಕ ಅಸಮಾನತೆ, ಶೋಷಣೆ ಕಾಲದಲ್ಲಿ ನೊಂದ ಜನರ ಧ್ವನಿಯಾಗಿ ಹೋರಾಟ ಮಾಡಿ ಬದುಕಿನುದ್ದಕ್ಕೂ ಶೋಷಿತ ಸಮುದಾಯಗಳ ಅಭಿವೃದ್ಧಿಗೆ ದುಡಿದ ಅಂಬೇಡ್ಕರ್ ಅವರ ಆದರ್ಶ ಚಿಂತನೆಗಳನ್ನು ಅಲ್ಪಮಟ್ಟಿಗಾದರೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ತತ್ವ ಮತ್ತು ಸಿದ್ಧಾಂತದ ಅಡಿ ದಲಿತ ಸಂಘರ್ಷ ಸಮಿತಿ ನೀತಿ ನಿಯಮಗಳ ವ್ಯಾಪ್ತಿಯಲ್ಲಿ ನಮ್ಮ ಹೋರಾಟಗಳನ್ನು ಮಾಡಬೇಕೆಂಬುದು ನನ್ನ ಆಶಯವಾಗಿತ್ತು ಆ ಕಾರಣದಿಂದಲೇ ನಾನು ನನ್ನ ಕೈಲಾದಷ್ಟು ಮಟ್ಟಿಗೆ ಪ್ರಾಮಾಣಿಕವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇನೆ. ನನಗೆ ಅನೇಕ ಪ್ರಶಸ್ತಿಗಳು ಬಂದಿವೆ. ಆದರೆ ಅದನ್ನು ಹೇಳಿಕೊಳ್ಳುವುದಿಲ್ಲ. ಜನರಿಗೆ ನ್ಯಾಯ ಸಿಗುವುದಷ್ಟೆ ನಮ್ಮ ಗುರಿ. ಮುಂದೆಯೂ ಇದೇ ರೀತಿ ನೊಂದ ಜನರಿಗೆ ಕೈಲಾದಷ್ಟು ಸೇವೆ ಮಾಡುತ್ತಾ ಹೋರಾಟ ಮಾಡುವುದು ನನ್ನ ಚಿಂತನೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಮುಖಂಡ ಸ್ವಾಮಿನಾಥಗೌಡ, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಬಿಜೆಪಿ ಹಿರಿಯ ಮುಖಂಡರಾದ ತೋಟದಪ್ಪ ಬಸವರಾಜು, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ತಿರುಮಕೂಡಲು ಶ್ರೀನಿವಾಸ್, ಸ್ಪಂದನ ಲ್ಯಾಬ್ ಮಾಲೀಕ ಪರ್ವೀಜ್, ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯರಾದ ಕರೋಹಟ್ಟಿ ಪ್ರಭುಸ್ವಾಮಿ, ಮಹದೇಶ್ವರ ಡ್ರೈವಿಂಗ್ ಸ್ಕೂಲ್ ಮಾಲೀಕ ನಾಗರಾಜು ತಾತಪ್ಪ ಕಾರ್ಯಕ್ರಮ ಆಯೋಜಕರಾದ ಡಾ.ಮಲ್ಲಿಕಾರ್ಜುನ ಸ್ವಾಮಿ, ಅಲಗೂಡು ವೆಂಕಟರಮಣಶೆಟ್ಟಿ, ಸೋಸಲೆ ರಾಜಶೇಖರಮೂರ್ತಿ, ಪುರಸಭಾ ಸದಸ್ಯರಾದ ಕಿರಣ್, ಪುರಸಭಾ ಮಂಜುನಾಥ್, ಮೆಡಿಕಲ್ ನಾಗರಾಜು ರಮೇಶ್, ದಲಿತ ಸಂಘರ್ಷ ಸಮಿತಿ ಟೌನ್ ಸಂಘಟನಾ ಸಂಚಾಲಕ ಭೈರಾ ಪುರ ನಿಂಗರಾಜು, ಅರ್ಜುನ್, ಆಲಗೂಡು ಶಶಿಕುಮಾರ್, ಶ್ರೀರಾಂಪುರ ಮಣಿಕಂಠ ಭಾಗವಹಿಸಿದ್ದರು.

1.15 ಕೋಟಿ ವೆಚ್ಚದ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು, ಜು.29– ಕ್ಷೇತ್ರ ವ್ಯಾಪ್ತಿಯ ಗ್ರಾಮಗಳ ಜನರಿಗೆ ಮೂಲ ಸೌಕರ್ಯ ಒದಗಿಸುವುದು ನಮ್ಮ ಕರ್ತವ್ಯ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹೊರಳವಾಡಿ, ಬಸವೇಶ್ವರನಗರ, ಗೀಕಹಳ್ಳಿ, ಮಹದೇವ ನಗರದಲ್ಲಿ 1.15 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ನಾನು ಶಾಸಕನಾದ ಬಳಿಕ ಕಳೆದ 2 ವರ್ಷಗಳಲ್ಲಿ ನಂಜನಗೂಡು ಕ್ಷೇತ್ರಕ್ಕೆ ಸುಮಾರು 450 ಕೋಟಿಗಿಂತಲೂ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ತಾಲೂಕಿನ ವಿವಿಧ ಗ್ರಾಮಗಳಲ್ಲಿ ಚರಂಡಿ, ಸಿಸಿ ರಸ್ತೆ ನಿರ್ಮಾಣ ಮಾಡಲಾಗಿದೆ. ಮುಖ್ಯಮಂತ್ರಿಗಳ ಮನವೊಲಿಸಿ ಕಳೆದ ವರ್ಷ 25 ಕೋಟಿ ಅನುದಾನ ತಂದು ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲಾಗಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 5 ಕೋಟಿ ಉಳಿಕೆಯಾಗಿದ್ದು, ಆ ಅನುದಾನದಲ್ಲಿ ತಾಲೂಕಿನ ಹೊರಳವಾಡಿ, ಹೊರಳವಾಡಿ ಬಸವೇಶ್ವರನಗರ, ಬೆಂಡಗಳ್ಳಿ ಗ್ರಾಮಗಳಲ್ಲಿ ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ತಾಲೂಕಿನ ಮಹದೇವನಗರ ಗ್ರಾಮದ ಮುಸ್ಲಿಂ ಜನಾಂಗದವರ ಬೀದಿಯಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಸೇರಿದಂತೆ 1 ಕೋಟಿ 15 ಲಕ್ಷ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಮುಖಂಡರಾದ ದೊರೆಸ್ವಾಮಿನಾಯಕ, ಎನ್.ಎಂ.ಮಂಜುನಾಥ್, ವಿಜಯ್ ಕುಮಾರ್, ಶ್ರೀನಿವಾಸ ಮೂರ್ತಿ, ಕುಳ್ಳಯ್ಯ, ಶಿವಮೂರ್ತಿ, ಮುದ್ದುಮಾದಶೆಟ್ಟಿ, ರಂಗದಾಸ್, ಜಯಶೀಲ, ಜಯಮಾಲಾ, ಶ್ರೀಕಂಠ, ಬಸವಣ್ಣ, ಸೋಮು, ಡೈರಿ ಮಾಜಿ ಅಧ್ಯಕ್ಷ ಮಹೇಶ್, ಮಂಜು, ರವಿ, ಗುತ್ತಿಗೆದಾರರಾದ ಜಿ.ಎ.ವೆಂಕಟೇಶ್, ಶ್ರೀಕಾಂತ್, ಗ್ರಾಪಂ ಸದಸ್ಯರಾದ ನವೀನ್, ಶಿವಕುಮಾರ್, ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಅಧ್ಯಕ್ಷ ಮಹೇಂದ್ರ, ಕೆಆರ್ ಐಡಿಎಲ್ ಸಂಸ್ಥೆ ಎಇ ಶರಣ್, ಪುರುಷೋತ್ತಮ್ ಸೇರಿದಂತೆ ಹಲವರಿದ್ದರು.

ಅಂಗನವಾಡಿ ಕೇಂದ್ರಕ್ಕೆ ಸಮವಸ್ತ್ರ, ಚೇರ್ ಕೊಡುಗೆ



ಅಂಗನವಾಡಿ ಕೇಂದ್ರಕ್ಕೆ ಸಮವಸ್ತ್ರ, ಚೇರ್‌ಗಳನ್ನು ಕೊಡುಗೆ ನೀಡಲಾಯಿತು.

ಹುಣಸೂರು, ಜು.29– ನಗರದ ರೋಟರಿ ಕ್ಲಬ್ ವತಿಯಿಂದ ನರಸಿಂಹಸ್ವಾಮಿ ತಿಟ್ಟಿನ ಅಂಗನವಾಡಿ ಕೇಂದ್ರಕ್ಕೆ ಸಮವಸ್ತ್ರ, ಚೇರ್‌ಗಳನ್ನು ಕೊಡುಗೆ ನೀಡಲಾಯಿತು.

ಅಂಗನವಾಡಿಯ 40 ಮಕ್ಕಳಿಗೆ ಸಮವಸ್ತ್ರ, ಚೇರ್‌ಗಳನ್ನು ಕೊಡುಗೆ ನೀಡಿ, ಮಕ್ಕಳಿಗೆ ಸಿಹಿ ವಿತರಿಸಿ ಮಾತನಾಡಿದ ಸಹಾಯಕ ಗವರ್ನರ್ ತಿರುಮಲಾಪುರ ರಾಜೇಗೌಡ, ಇದು ಅಂತರಾಷ್ಟ್ರೀಯ ರೋಟರಿ ಜಿಲ್ಲಾ ಯೋಜನೆಯಾಗಿದ್ದು, ಇದರಿಂದ ಸರ್ಕಾರದ ಮೂಲ ಶಿಕ್ಷಣ ಕಲಿಕಾ ಯೋಜನೆಗೆ ಒತ್ತು ನೀಡಲು ಸಹಕಾರಿಯಾಗಿದೆ ಎಂದರು.

ಗ್ರಾಮೀಣ ಭಾಗದ ಹಲವು ಸರ್ಕಾರಿ ಶಾಲೆಗಳಿಗೆ ಮಕ್ಕಳು ಬಾರದ ಸ್ಥಿತಿ ನಿರ್ಮಾಣವಾಗಿದೆ. ಮಕ್ಕಳು ಮತ್ತೆ ಸರ್ಕಾರಿ ಕನ್ನಡ ಶಾಲೆಗೆ ಬರಬೇಕು ಎಂಬ ಸದ್ಭಾವನೆಯಿಂದ ಈಗಾಗಲೇ ಕುಡಿಯುವ ನೀರು ಇನ್ನಿತರೆ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡಿದ್ದು, ತಾಲೂಕಿನ ಒಂದು ಸರ್ಕಾರಿ ಶಾಲೆ ಸಮಗ್ರ ಅಭಿವೃದ್ಧಿಗೆ ಮುಂದಾಗಲಿದ್ದೇವೆ ಎಂದರು.

ಸಿಡಿಪಿಓ ಹರೀಶ್, ರೋಟರಿಯ ಹಿರಿಯ ಸದಸ್ಯ ರಾಜಶೇಖರ್, ಹುಣಸೂರು ರೋಟರಿ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ರೋಟರಿ ಹಿರಿಯ ಸದಸ್ಯರಾದ ರವೀಶ್ ಗುಪ್ತ, ಅಂಗನವಾಡಿ ಶಿಕ್ಷಕಿ ಸರಸ್ವತಿ, ಶಾಲೆ ಮುಖ್ಯ ಶಿಕ್ಷಕ ಶ್ರೀಕಂಠಸ್ವಾಮಿ, ಕಾರ್ಯದರ್ಶಿ ಶ್ಯಾಮಣ್ಣ ಇದ್ದರು.

ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರಿಡಲು ತೀರ್ಮಾನ

ಪ್ರಸಾದ್ ಅಭಿಮಾನಿ ಬಳಗದ ಸಂಚಾಲಕ ಭರತ್ ರಾಮಸ್ವಾಮಿ



ಸುದ್ದಿಗೋಷ್ಠಿಯಲ್ಲಿ ಭರತ್ ರಾಮಸ್ವಾಮಿ ಮಾತನಾಡಿದರು.

ನಂಜನಗೂಡು, ಜು.29– ನಗರದ ರೈಲ್ವೆ ಮೇಲ್ಸೆತುವೆಗೆ ಮಾಜಿ ಸಂಸದ ದಿ.ವಿ. ಶ್ರೀನಿವಾಸ ಪ್ರಸಾದ್ ಹೆಸರು ಅಂತಿಮ ಗೊಳಿಸುವ ಮೂಲಕ ಶಾಸಕ ದರ್ಶನ್ ಎಲ್ಲಾ ಗೊಂದಲಗಳಿಗೆ ತೆರೆ ಎಳೆದು ರಾಜಕೀಯ ಪ್ರೌಡಿಮೆ ಮೆರೆದಿದ್ದಾರೆ ಎಂದು ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದ ಸಂಚಾಲಕ ಭರತ್ ರಾಮಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿ.ಶ್ರೀನಿವಾಸ ಪ್ರಸಾದ್ ಅವರು ಸಮಾಜಕ್ಕೆ ಮಾದರಿ ರಾಜಕಾರಣಿಯಾಗಿ ಅನೇಕ ಕೊಡುಗೆ ನೀಡಿದ್ದಾರೆ. ನಗರದಲ್ಲಿ ನಿರ್ಮಾಣವಾಗಿರುವ ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರಿಡಬೇಕೆಂದು ಅವರ ಅಭಿಮಾನಿಗಳು ಒತ್ತಾಯಿಸಿದರೆ, ಆರ್.ಧ್ರುವನಾರಾಯಣ್ ಹೆಸರಿಡಬೇಕೆಂದು ಅವರ ಅಭಿಮಾನಿಗಳು ಒತ್ತಾಯಿಸಿದ್ದರು. ಶ್ರೀನಿವಾಸ್ ಪ್ರಸಾದ್ ಮತ್ತು ಧ್ರುವನಾರಾಯಣ್ ಇಬ್ಬರೂ ರಾಜಕೀಯ ನಕ್ಷತ್ರಗಳಾಗಿದ್ದು, ಅವರನ್ನು ಬೇರೆ ಬೇರೆಯಾಗಿ ನೋಡುವುದು ಸರಿಯಲ್ಲ. ಈ ನಿಟ್ಟಿನಲ್ಲಿ ಅಭಿಮಾನಿಗಳ ಗೊಂದಲಗಳಿಗೆ ತೆರೆ ಎಳೆಯುವ ಸಲುವಾಗಿ ಹಾಗೂ ವಿ.ಶ್ರೀನಿವಾಸ್‌ಪ್ರಸಾದ್ ಅವರಿಗೆ ಗೌರವ ಸಲ್ಲಿ ಸುವ ಸಲುವಾಗಿ ಶಾಸಕ ದರ್ಶನ್ ಅವರು ಆಸಕ್ತಿ ವಹಿಸಿ ಪ್ರತಿಮಾ ಪ್ರಸಾದ್ ಅವರ ನೇತೃತ್ವದಲ್ಲಿ ಇಬ್ಬರು ನಾಯಕರ ಅಭಿಮಾನಿಗಳ ಸರಣಿ ಸಭೆಗಳನ್ನು ನಡೆಸಿ ಮುಕ್ತ ಮನಸ್ಸಿನಿಂದ ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ್ ಪ್ರಸಾದ್ ಹೆಸರು ಅಂತಿಮಗೊಳಿಸಿರುವುದು ಸ್ವಾಗತಾರ್ಹ. ಅದರಲ್ಲೂ ಮುಖ್ಯವಾಗಿ ಕಾಯಕಯೋಗಿ ಮಾಜಿ ಸಂಸದ ಆರ್.ಧ್ರುವನಾರಾಯಣ್ ಹುಟ್ಟುಹಬ್ಬದ ಸ್ಮರಣಾರ್ಥ ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರನ್ನು ನಾಮಕರಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡು ವಿಶೇಷ ಗೌರವ ಸಲ್ಲಿಸಿರುವುದನ್ನು ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗ ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತದೆ ಹಾಗೂ ಅವರ ಕಾರ್ಯಕ್ರಮಗಳಲ್ಲಿ ಪ್ರತಿಮಾ ಪ್ರಸಾದ್ ಅವರ ನೇತೃತ್ವದಲ್ಲಿ ಭಾಗವಹಿಸುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿ.ಜಿ.ಶಿವಕುಮಾರ್, ನಂಜುಂಡಸ್ವಾಮಿ, ಶಾಂತರಾಜು, ಸುರೇಶ್, ಶಿವಸ್ವಾಮಿ, ವೆಂಕಟರಾಜು ಉಪಸ್ಥಿತರಿದ್ದರು.

ಆರೋಗ್ಯ ಕೇಂದ್ರಕ್ಕೆ ಉಚಿತ ಔಷಧಿ ವಿತರಣೆ



ಆರೋಗ್ಯ ಕೇಂದ್ರಕ್ಕೆ ಉಚಿತ ಔಷಧ ವಿತರಿಸಲಾಯಿತು.

ಬನ್ನೂರು, ಜು.29– ಪಟ್ಟಣದ ಚೈಲ್ಡ್ ಹೆಲ್ತ್ ಇಂಡಿಯಾ ಫೌಂಡೇಶನ್‌ನಿಂದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಮಂಗಳವಾರ ಉಚಿತವಾಗಿ ಔಷಧಿಗಳನ್ನು ವಿತರಿಸಲಾಯಿತು.

ಆಡಳಿತ ವೈದ್ಯಾಧಿಕಾರಿ ಡಾ.ಮಾಲತೇಶ್ ಮಾತನಾಡಿ, ಚೈಲ್ಡ್ ಹೆಲ್ತ್ ಇಂಡಿಯಾ ಫೌಂಡೇಶನ್ ಸಾಮಾಜಿಕ, ಮಾನವೀಯ ಸಮಸ್ಯೆಗಳನ್ನು ಪರಿಹರಿಸುವಂತ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ಅದರಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಉಚಿತವಾಗಿ ಔಷಧಗಳನ್ನು ವಿತರಿಸಿದೆ. ಇದರಿಂದ ಸಾರ್ವಜನಿಕರಿಗೆ ಉಪಯೋಗವಾಗಿದೆ ಎಂದರು.

ಈ ವೇಳೆ ಕೃಷ್ಣಮೂರ್ತಿ, ರಾಜುಗೌಡ, ಡಾ.ಮಾಲತೇಶ್, ಡಾ.ರವಿಕುಮಾರ, ಡಾ.ಪುರುಷೋತ್ತಮ ಸೇರಿದಂತೆ ಸಿಬ್ಬಂದಿ ವರ್ಗ ಇದ್ದರು.

ಕೋಟೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಹೆಚ್.ಡಿ.ಕೋಟೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಜು.29– ಐಟಿಸಿ ಮತ್ತು ಮೈರಾಡ ಕಾವೇರಿ ಪ್ರಾದೇಶಿಕ ಸಂಸ್ಥೆ, ತಾಪಂ, ತಾಲೂಕು ಆರೋಗ್ಯಾಧಿಕಾರಿ ಕಚೇರಿ ಹೆಚ್.ಡಿ.ಕೋಟೆ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಪಂ ಸಭಾಂಗಣದಲ್ಲಿ ಗ್ರಾಪಂ ಸ್ವಚ್ಛತಾಗಾರರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್, ಗ್ರಾಪಂ ಮಟ್ಟದಲ್ಲಿ ಸ್ವಚ್ಛತಾಗಾರರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಆದ್ದರಿಂದ ನೀವು ಆರೋಗ್ಯವಾಗಿದ್ದರೆ ಗ್ರಾಮ ಸ್ವಚ್ಛವಾಗಿರುತ್ತದೆ. ಹೀಗಾಗಿ ಎಲ್ಲರೂ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಿರಿ ಎಂದರು.

ತಾಪಂ ಇಓ ಧರಣೇಶ್ ಮಾತನಾಡಿ, ಗ್ರಾಪಂ ಮಟ್ಟದಲ್ಲಿ ಒಣ ಮತ್ತು ಹಸಿ ಕಸವನ್ನು ಬೇರ್ಪಡಿಸುವುದರಲ್ಲಿ ಸ್ವಚ್ಛತಾಗಾರರ ಪಾತ್ರ ಮುಖ್ಯವಾಗಿದೆ. ಇವರು ಗ್ರಾಮಗಳನ್ನು ಸ್ವಚ್ಛತೆ ಮಾಡುತ್ತಾರೆ ಹಾಗೂ ಮನೆ ಮನೆಗೆ ಹೋಗಿ ಕಸ ಸಂಗ್ರಹಿಸುತ್ತಾರೆ. ಆದ್ದರಿಂದ ಇಂದು ಇವರಿಗಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಂಡಿದ್ದೇವೆ. ಎಲ್ಲರೂ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಈ ವೇಳೆ ವೈದ್ಯಾಧಿಕಾರಿ ಮಹಾಲಕ್ಷ್ಮಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಅಶೋಕ, ಅರಳಪ್ಪ, ರವಿರಾಜ್, ಸಮುದಾಯ ಆರೋಗ್ಯ ಅಧಿಕಾರಿಗಳಾದ ರೀಣಾ ಲೋಬೋ, ವಿದ್ಯಾ, ಆಶಾ ಚಕ್ರವರ್ತಿ, ತಾಪಂ ಕಚೇರಿಯ ಪುರುಷೋತ್ತಮ್, ಸುಹಾಸ್, ರವೀಶ್, ಸ್ವಚ್ಛತಾಗಾರರು ಇನ್ನಿತರರಿದ್ದರು.

ಸನ್ಮಾನ



ಹುಣಸೂರು ತಾಲೂಕಿನ ರತ್ನಪುರಿ ಕಾಲೋನಿ ಜೆ.ಆರ್.ಫಂಕ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ನೂತನ ಅಧ್ಯಕ್ಷ ಅಜೀಝುಲ್ಲಾ ಅಜ್ಜು, ಮಾಜಿ ಶಾಸಕ ಹೆಚ್.ಪಿ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಹಲವು ಮುಖಂಡರು ಹಾಜರಿದ್ದರು.

ತಿ.ನರಸೀಪುರ ಪುರಸಭೆಯಲ್ಲಿ ಕೋಟ್ಯಾಂತರ ರೂ. ತೆರಿಗೆ ವಂಚನೆ ಪ್ರಕರಣ

ನ್ಯಾಯಾಂಗ, ಲೋಕಾಯುಕ್ತ ತನಿಖೆಗೆ ಆಗ್ರಹಿಸಿ ಸಿಎಂಗೆ ಪತ್ರ



ತೆರಿಗೆ ವಂಚನೆ ಪ್ರಕರಣವನ್ನು ನ್ಯಾಯಾಂಗ, ಲೋಕಾಯುಕ್ತ ತನಿಖೆಗೆ ಆಗ್ರಹಿಸಿ ಸಿಎಂಗೆ ದಸಂಸ ಮುಖಂಡರು ಮನವಿ ಸಲ್ಲಿಸಿದರು.

ತಿ.ನರಸೀಪುರ, ಜು.29– ಪಟ್ಟಣದ ಪುರಸಭೆಗೆ ಕೋಟ್ಯಾಂತರ ರೂ. ತೆರಿಗೆ ವಂಚನೆ ಮಾಡಲಾಗಿದ್ದು, ಮುಖ್ಯಾಧಿಕಾರಿ ಸೇರಿದಂತೆ ಹಲವರು ಈ ಹಗರಣದಲ್ಲಿ ಭಾಗಿಯಾಗಿರುವುದರಿಂದ ಈ ಪ್ರಕರಣವನ್ನು ನ್ಯಾಯಾಂಗ ಅಥವಾ ಲೋಕಾಯುಕ್ತ ತನಿಖೆಗೆ ಒಪ್ಪಿಸಬೇಕು ಎಂದು ದಲಿತ ಸಂಘರ್ಷ ಸಮಿತಿ ಸಂಚಾಲಕ ಉಮಾ ಮಹದೇವ್ ಸರ್ಕಾರವನ್ನು ಆಗ್ರಹಿಸಿದ್ದಾರೆ.

ತಹಸೀಲ್ದಾರ್ ಮೂಲಕ ಸಿಎಂ ಸಿದ್ದರಾಮಯ್ಯನವರಿಗೆ ಪತ್ರ ರವಾನಿಸಿರುವ ಅವರು ತಿ.ನರಸೀಪುರ ಪುರಸಭೆಯಲ್ಲಿ ಹಲವು ವರ್ಷಗಳಿಂದ 30ರಿಂದ 40 ಕೋಟಿ ರೂ. ತೆರಿಗೆ ವಂಚನೆ ಮಾಡಿರು ವವರಿಗೆ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ಪುರಸಭೆ ಮುಖ್ಯಾಧಿಕಾರಿ ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಪುರಸಭೆಗೆ ಸೇರಿದ ಆಸ್ತಿಗಳನ್ನು ಅಕ್ರಮವಾಗಿ ಖಾಸಗಿಯವರಿಗೆ ಖಾತೆ ಮಾಡಿದ್ದಾರೆ ಎಂಬ ಹಲವು ದೂರುಗಳು ಜಿಲ್ಲಾಧಿಕಾರಿಗಳಿಗೆ ಸಲ್ಲಿಕೆಯಾಗಿವೆ. ನಮ್ಮ ಸಮಿತಿ ಹಿಂದಿನ ಪುರಸಭೆ ಮುಖ್ಯಾಧಿಕಾರಿ ಆರ್.ಅಶೋಕ್ ವಿರುದ್ಧ ಜಿಲ್ಲಾಧಿಕಾರಿ, ಪೌರಾಡಳಿತ ಸಚಿವರು ಸೇರಿದಂತೆ ಹಲವರಿಗೆ ದೂರು ಸಲ್ಲಿಸಿದೆ. ಹೀಗಾಗಿ ಸರ್ಕಾರ ಪ್ರಕರಣವನ್ನು ನ್ಯಾಯಾಂಗ ಅಥವಾ ಲೋಕಾಯುಕ್ತ ತನಿಖೆ ವಹಿಸಿಸಬೇಕೆಂದು ಮನವಿ ಮಾಡಿದ್ದಾರೆ.

ಪಟ್ಟಣದ ಪುರಸಭೆ ಅಧ್ಯಕ್ಷರಾಗಿದ್ದವರೇ ಕೆನರಾ ಬ್ಯಾಂಕ್ ಸೀಲ್ ನಕಲು ಮಾಡಿ ರಶೀದಿ ನೀಡಿ ಪುರಸಭೆಗೆ ತೆರಿಗೆ ವಂಚನೆ ಮಾಡಿರುವುದನ್ನು ಮುಖ್ಯಾಧಿಕಾರಿ ವಸಂತ ಕುಮಾರಿ ಪತ್ತೆ ಹಚ್ಚಿ ಖುದ್ದಾಗಿ ತಿ.ನರಸೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಪುರಸಭೆ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಸೇರಿದಂತೆ ಹಲವರ ಮೇಲೆ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ. ಆದರೆ ಪುರಸಭೆ ಮುಖ್ಯಾಧಿಕಾರಿಗಳು ದೂರು ನೀಡುವಾಗ ಕೇವಲ 5 ಲಕ್ಷ ವಂಚಿಸಲಾಗಿದೆ ಎಂದು ದೂರು ನೀಡಿದ್ದಾರೆ. ಸದರಿ ಪ್ರಕರಣ ಬೆಳಕಿಗೆ ತಂದ ಮುಖ್ಯಾಧಿಕಾರಿಗಳೇ ಹೋರಾಟಗಾರ ಮಣಿಕಂಠ ರಾಜ್‌ಗೌಡ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡುವಾಗ 40 ಕೋಟಿ ವಂಚನೆ ನಡೆದಿದೆ ಎಂದಿದ್ದಾರೆ.

ಅಲ್ಲದೇ ಪ್ರಕರಣ ಹೊರಬಂದ ತಕ್ಷಣ ಪುರಸಭೆ ಮುಖ್ಯಾಧಿಕಾರಿ ಅವರು 30ರಿಂದ 40 ಕೋಟಿ ತೆರಿಗೆ ವಂಚನೆಯಾಗಿದೆ ಎಂದು ಹೇಳಲು ಹೇಗೆ ಸಾಧ್ಯ, ಅಲ್ಲಿವರೆಗೆ ಈ ವಿಚಾರ ಗೊತ್ತಿರಲಿಲ್ಲವೇ, ಗೊತ್ತಿದ್ದರೂ ಇವರು ಕ್ರಮ ಕೈಗೊಳ್ಳದಿರಲು ಕಾರಣವೇನು. ಹೀಗಾಗಿ ಪ್ರಕರಣ ಸಂಬಂಧ ತನಿಖೆ ಕೈಗೊಂಡು ಯಾರು ಎಷ್ಟು ವಂಚನೆ ಮಾಡಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚಬೇಕು. ತಕ್ಷಣ ಮುಖ್ಯಾಧಿಕಾರಿ ವಸಂತ ಕುಮಾರಿ ಅವರನ್ನು ಅಮಾನತುಗೊಳಿಸಿ ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ತನಿಖೆ ನಡೆದು ಸಂಪೂರ್ಣ ವರದಿ ಬಂದು ಮುಖ್ಯಾಧಿಕಾರಿ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಅಧಿಕಾರಿಗಳು ನಿರ್ದೋಷಿಗಳೆಂದು ಸಾಬೀತಾಗುವ ತನಕ ಯಾರನ್ನೂ ಬೇರೆಡೆಗೆ ವರ್ಗಾವಣೆ ಮಾಡಬಾರದು. ಅಲ್ಲದೇ ಅವರಿಗೆ ವೇತನವನ್ನು ಮಂಜೂರು ಮಾಡಬಾರದು ಎಂದು ಆಗ್ರಹಿಸಿದ್ದಾರೆ.

ಈ ಹಿಂದಿನ ಮುಖ್ಯಾಧಿಕಾರಿ ಆರ್.ಅಶೋಕ್ ಅವರು ಪುರಸಭೆ ಲೆಟರ್‌ಹೆಡ್ ದುರುಪಯೋಗ ಮಾಡಿಕೊಂಡಿದ್ದರು. ಸ್ವತಃ ಅವರೇ ಹಲವು ಬಗೆಯಲ್ಲಿ ಸಹಿ ಮಾಡಿ ಖಾತೆ, ಕಂದಾಯ, ಕಟ್ಟಡ ಪರವಾನಗಿ ಕೊಡುವಾಗ ವಂಚಿಸಿದ್ದವರ ವಿರುದ್ಧ ನಮ್ಮ ಸಮಿತಿ ನಿರಂತರವಾಗಿ ಹೋರಾಟ ಮಾಡಿತ್ತು ಆಗ ಕೇವಲ ಮುಖ್ಯಾಧಿಕಾರಿ ಮೇಲೆ ನಾಮಕಾವಸ್ಥೆ ಕ್ರಮ ವಹಿಸಿದ್ದು ಬಿಟ್ಟರೆ ಯಾವುದೇ ಗಂಭೀರ ತನಿಖೆ ನಡೆಸಲಿಲ್ಲ. ಅದರ ಬಳುವಳಿ ಈ ಪ್ರಕರಣ ಎಂದು ಅವರು ದೂರಿದ್ದಾರೆ.

ಮುಂದಿನ ದಿನಗಳಲ್ಲಿ ಈ ವಿಚಾರದಲ್ಲಿ ಉಗ್ರ ಹೋರಾಟ ಕಾನೂನಿನ ಮೂಲಕವೂ ಹಾಗೆ ಬೀದಿ ಹೋರಾಟವು ಅನಿವಾರ್ಯ ಆಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಸಿಎಂಗೆ ಬರೆದಿರುವ ಪತ್ರದಲ್ಲಿ ಸಂಘಟನಾ ಸಂಚಾಲಕ ಆಲತ್ತೂರು ಶಿವರಾಜ್, ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ತಾಲೂಕು ಸಂಘಟನಾ ಸಂಚಾಲಕ ಹನು ಮನಾಳು ಮಹದೇವ, ತುಂಬಲ ಶಿವಣ್ಣ, ಸಿ.ಬಿ.ಹುಂಡಿ ನಾಗೇಶ್, ಸುತ್ತೂರು ಮಹೇಶ್, ಹೌಸಿಂಗ್ ಬೋರ್ಡ್ ನಿಂಗರಾಜು ಮತ್ತಿತರರು ಸಹಿ ಹಾಕಿ ತನಿಖೆಗೆ ಆಗ್ರಹಿಸಿದ್ದಾರೆ.

ನಗರಸಭೆಯ ನಾಲ್ವರು ಬಿಜೆಪಿ ಸದಸ್ಯರ ಸದಸ್ಯತ್ವ ರದ್ದು



ಗಿರೀಶ್



ವಿಜಯಲಕ್ಷ್ಮಿ



ಗಾಯತ್ರಿ



ಮೀನಾಕ್ಷಿ

ನಂಜನಗೂಡು, ಜು.29– ಇಲ್ಲಿನ ನಗರಸಭೆಯಲ್ಲಿ 2024ರಲ್ಲಿ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಗೈರು ಹಾಜರಾಗಿದ್ದ ನಾಲ್ವರು ಬಿಜೆಪಿ ನಗರಸಭೆ ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ನಗರಸಭೆ 1ನೇ ವಾರ್ಡ್‌ನ ಟಿ.ಎಂ.ಗಿರೀಶ್ ಕುಮಾರ್, 12ನೇ ವಾರ್ಡ್‌ನ ಗಾಯಿತ್ರಿ ಮುರುಗೇಶ್, 22ನೇ ವಾರ್ಡ್‌ನ ಆರ್.ಮೀನಾಕ್ಷಿ ನಾಗರಾಜ್, 27ನೇ ವಾರ್ಡ್ ಸದಸ್ಯೆ ಎಸ್.ವಿಜಯಲಕ್ಷ್ಮಿ ಕುಮಾರ್ ಅವರನ್ನು ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ ಪಕ್ಷಾಂತರ ನಿಷೇಧ ಅಧಿನಿಯಮ 1987 ಸೆಕ್ಷನ್ 3 (1) (ಬಿ) ಉಲ್ಲಂಘನೆಯ ಆಧಾರದ ಮೇಲೆ ನಗರಸಭೆ ಸದಸ್ಯತ್ವದಿಂದ ಅನರ್ಹಗೊಳಿಸಿರುವುದಾಗಿ ಆದೇಶದಲ್ಲಿ ತಿಳಿಸಿದ್ದಾರೆ.

ತಮ್ಮ ಬದುಕಿನಲ್ಲಿ ಶಿಸ್ತಿಗೆ ಮಹತ್ವ ನೀಡಿದ್ದರಿಂದಲೇ

ವಿಜ್ಞಾನ, ಸಂಶೋಧನಾ ಕ್ಷೇತ್ರದಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಸಾಧನೆ ಸಾಧ್ಯವಾಯ್ತು

ಕೆ.ಆರ್.ನಗರ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ ಅಭಿಪ್ರಾಯ



ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ದಂಪತಿಗೆ ಮೈಸೂರಿನ ಅವರ ನಿವಾಸದಲ್ಲಿ ಕೆ.ಆರ್.ನಗರ ತಾಲೂಕು ಅಭಿಮಾನಿಗಳು, ಹಿತೈಷಿಗಳು ಹೂಮಳೆ ಸುರಿಸಿ, ಅಭಿನಂದಿಸಿದರು.

ಮೈಸೂರು, ಜು.29– ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರು ತಮ್ಮ ಬದುಕಿನಲ್ಲಿ ಶಿಸ್ತಿಗೆ ಅತ್ಯಂತ ಮಹತ್ವ ನೀಡಿದ್ದರಿಂದಲೇ ಅವರು ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು ಎಂದು ಕೆ.ಆರ್.ನಗರ ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ ಅಭಿಪ್ರಾಯಪಟ್ಟರು.

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ದಂಪತಿಗೆ ಮೈಸೂರಿನ ಅವರ ನಿವಾಸದಲ್ಲಿ ಕೆ.ಆರ್.ನಗರ ತಾಲೂಕು ಅಭಿಮಾನಿಗಳು, ಹಿತೈಷಿಗಳು ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರು ಸಂಶೋಧನಾ ಕಾರ್ಯದಲ್ಲಿ ಎದುರಾದ ಎಲ್ಲಾ ಸಮಸ್ಯೆ, ಸವಾಲುಗಳನ್ನು ಎದುರಿಸಿ ವಿಜ್ಞಾನ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ. ಶಿಕ್ಷಣ, ಆಡಳಿತ ಕ್ಷೇತ್ರದಲ್ಲೂ ಶಿಸ್ತಿಗೆ ಆದ್ಯತೆ ನೀಡಿ ಯಶಸ್ವಿಯಾದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ.ಕೆ.ಎಸ್.ರಂಗಪ್ಪ ಇದೀಗ ವಿಶ್ವದ ಅತ್ಯುನ್ನತ ವಿಜ್ಞಾನಿಗಳ ಪಟ್ಟಿಯಲ್ಲಿ ವಿಶಿಷ್ಟ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ ಎಂದು ಹೇಳಲು ರಾಜ್ಯದ ಅಭಿಮಾನಿ ಬಳಗ ಹೆಮ್ಮೆಪಡುತ್ತದೆ. ಕೆ.ಆರ್.ನಗರ ತವರು ಕ್ಷೇತ್ರದ ಸಾವಿರಾರು ಯುವಕ ಯುವತಿಯರಿಗೆ ಉದ್ಯೋಗ ನೀಡಿದ ಅನ್ನದಾತ ಎಂದು ಬಣ್ಣಿಸಿದರು.

ಮೈಸೂರಿನ ಪ್ರತಿಷ್ಠಿತ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರು ವಿಜ್ಞಾನ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದು ಅಪಾರವಾದದ್ದು, ಅಂಕಿ–ಅಂಶಗಳನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡು ವೈಜ್ಞಾನಿಕವಾಗಿ ಸಂಶೋಧನಾ ಕಾರ್ಯಗಳನ್ನು ಕೈಗೊಂಡಿದ್ದಾರೆ ಎಂದರು.

ಈ ವೇಳೆ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರ ಅಭಿಮಾನಿಗಳು, ಹಿತೈಷಿಗಳು ಪ್ರೊ.ರಂಗಪ್ಪ ಪತ್ನಿ ಪೂರ್ಣಿಮಾ ರಂಗಪ್ಪ ಅವರಿಗೆ ಹೂಮಳೆ ಸುರಿಸಿ ತಮ್ಮ ಅಭಿಮಾನ ಮೆರೆದರು.

ತಾಲೂಕು ಒಕ್ಕಲಿಗರ ಸಂಘದ ಗೌರವ ಸಲಹೆಗಾರ ಎಸ್.ಪಿ.ತಮ್ಮಯ್ಯ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಇ.ಯೋಗಾನಂದ್, ಪ್ರಾಂಶುಪಾಲರಾದ ಶಿವಪ್ರಕಾಶ್, ದಿನೇಶ್, ಉಮೇಶ್, ನಂಜನಗೂಡು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ದೀಪು, ನಿವೃತ್ತ ಉಪನ್ಯಾಸಕರಾದ ಮಿರ್ಲೆ ಮೃತ್ಯುಂಜಯ, ಅಂಕನಹಳ್ಳಿ ಕೃಷ್ಣಕುಮಾರ್, ಮೈಸೂರು ಜಿಲ್ಲೆ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಸಂಘದ ಅಧ್ಯಕ್ಷ ಮಿರ್ಲೆ ಮಹದೇವ್, ಮುಖಂಡರಾದ ಮಿರ್ಲೆ ನರಸಿಂಹ, ಕೆಸ್ತೂರು ಕೊಪ್ಪಲು ವೆಂಕಟೇಶ್ ಸೇರಿದಂತೆ ಅನೇಕರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಮಾರೀಚನ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್,

2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನರಸಿಂಹರಾಜ ಕ್ಷೇತ್ರದಲ್ಲಿ ವೀರಯೋಧರಿಗೆ ಸನ್ಮಾನ



ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಬಿಜೆಪಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ವೀರಯೋಧರಾದ ಗಣೇಶ್ ಸಿಂಗ್, ಗೋವಿಂದ ಸಿಂಗ್ ಅವರನ್ನು ಗೌರವಿಸಲಾಯಿತು.

ಮೈಸೂರು, ಜು. 29– ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಬಿಜೆಪಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಕಾರ್ಗಿಲ್ ಸಂದರ್ಭದಲ್ಲಿ ಸೇವೆ ಸಲ್ಲಿಸಿದ ವೀರಯೋಧರಾದ ಗಣೇಶ್ ಸಿಂಗ್, ಗೋವಿಂದ ಸಿಂಗ್ ಅವರನ್ನು ಕಲ್ಯಾಣಗಿರಿಯ ರಾಜಕುಮಾರ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ಆವರಣದಲ್ಲಿ ಗೌರವಿಸಲಾಯಿತು.

ಈ ವೇಳೆ ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್ ಮಾತನಾಡಿ, ನಮ್ಮ ವೀರ ಯೋಧರು ಇಡೀ ವಿಶ್ವಕ್ಕೆ ಮಾದರಿ. ಯಾವುದೇ ದೇಶದಲ್ಲಿ ಯುದ್ಧಗಳು ಸಂಭವಿಸಿದರೆ ಭಾರತದ ಯೋಧರ ನೆರವು ಪಡೆಯುವ ಪ್ರಾವೀಣ್ಯತೆ ಪಡೆದಿರುವುದು ಹೆಗ್ಗಳಿಕೆ. ಇಂತಹ ಯೋಧರನ್ನು ಸನ್ಮಾನಿಸುವ ಕಾರ್ಯ ನಿಜಕ್ಕೂ ಅರ್ಥಪೂರ್ಣ ಎಂದರು. ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಉಪಾಧ್ಯಕ್ಷ ಪುನೀತ್, ಕಾರ್ಯದರ್ಶಿ ಧನರಾಜ್, ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ನವೀನ್‌ರಾಜ್, ಹರೀಶ್, ಮಹಿಳಾ ಮೋರ್ಚಾ ಉಪಾಧ್ಯಕ್ಷ ಇಂದ್ರ ಅನಂತನಾಗ್, ಪ್ರಧಾನ ಕಾರ್ಯದರ್ಶಿ ಕವಿತಾ ಸಿಂಗ್, ಕಾವ್ಯ ಮತ್ತಿತರರು ಉಪಸ್ಥಿತರಿದ್ದರು.

ಹುಲಿ ದಿನದಂದು ನಾಗರಹೊಳೆಯಲ್ಲಿ ಮುದ್ದು ಮರಿಗಳೊಂದಿಗೆ ದರ್ಶನ ನೀಡಿದ ಹುಲಿ



ಅಂತರರಾಷ್ಟ್ರೀಯ ಹುಲಿ ದಿನವಾದ ಮಂಗಳವಾರ ನಾಗರಹೊಳೆ ಅಭಯಾರಣ್ಯದ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಹುಲಿಯೊಂದು ತನ್ನ ಎರಡು ಪುಟ್ಟ ಮರಿಗಳೊಂದಿಗೆ ದರ್ಶನ ನೀಡಿದೆ. ಚಿತ್ರ: ಎಂ.ಎನ್.ಲಕ್ಷ್ಮೀ ನಾರಾಯಣ ಯಾದವ್.

ಮೈಸೂರು, ಜು.29(ಎಂಟಿವೈ)– ಅಂತರರಾಷ್ಟ್ರೀಯ ಹುಲಿ ದಿನವಾದ ಇಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಾಕನಕೋಟೆ ಸಫಾರಿ ಕೇಂದ್ರದಲ್ಲಿ ಸಫಾರಿಗೆಂದು ತೆರಳಿದ್ದ ಪ್ರವಾಸಿಗರಿಗೆ ಹುಲಿಯೊಂದು ತನ್ನ ಎರಡು ಮರಿಗಳೊಂದಿಗೆ ದರ್ಶನ ನೀಡುವ ಮೂಲಕ ಪ್ರವಾಸಿಗರನ್ನು ಪುಳಕಿತರನ್ನಾಗಿಸಿದೆ.

ವಿಶ್ವದಾದ್ಯಂತ ಇಂದು ಅಂತರರಾಷ್ಟ್ರೀಯ ಹುಲಿ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ನಾಗರಹೊಳೆ ಸೇರಿದಂತೆ ದೇಶದ 57 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ದಿನವನ್ನು ಆಚರಿಸುವ ಮೂಲಕ ಹುಲಿ ಸಂತತಿ ಸಂರಕ್ಷಣೆಗೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಹುಲಿ ದಿನದ ಹಿನ್ನೆಲೆಯಲ್ಲಿ ನಾಗರಹೊಳೆ ಸೇರಿದಂತೆ ವಿವಿಧ ಅರಣ್ಯ ಪ್ರದೇಶಗಳಲ್ಲಿ ಇಂದು ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಹುಲಿ ದರ್ಶನದ ಭಾಗ್ಯ ಸಿಕ್ಕಿದೆ. ಅದರಲ್ಲೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಕಾಕನಕೋಟೆ ಸಫಾರಿ ಕೇಂದ್ರದಿಂದ ಮಂಗಳವಾರ ಸಂಜೆ ಸಫಾರಿಗೆಂದು ತೆರಳಿದಂತಹ ಪ್ರವಾಸಿಗರಿಗೆ ತಾಯಿ ಹುಲಿ ಒಂದು ತನ್ನ ಎರಡು ಮರಿಗಳೊಂದಿಗೆ ದರ್ಶನ ನೀಡುವ ಮೂಲಕ ಹುಲಿ ದಿನದ ವಿಶೇಷತೆಗೆ ಮೆರುಗು ನೀಡಿದೆ.

ಅಂತರಸಂತೆ ವಲಯ ವ್ಯಾಪ್ತಿಯ ಸಫಾರಿ ವಲಯದಲ್ಲಿ ಮಗ್ಗೆ ಫೀಮೇಲ್ ಎಂದೇ ವನ್ಯಜೀವಿ ಛಾಯಾಗ್ರಾಹಕರು ಹಾಗೂ ಸಫಾರಿಗರ ಪ್ರೀತಿಗೆ ಪಾತ್ರವಾಗಿರುವ ಹೆಣ್ಣು ಹುಲಿ ತನ್ನ ಎರಡು ಮರಿಯೊಂದಿಗೆ ದರ್ಶನ ನೀಡಿದೆ. ಅರಣ್ಯ ಇಲಾಖೆಯ ಸಫಾರಿ ವಾಹನ ಹಾಗೂ ಜೆಎಲ್‌ಆರ್ ಸಫಾರಿ ವಾಹನದಲ್ಲಿ ತೆರಳಿದ್ದ ಪ್ರವಾಸಿಗರಿಗೆ ಸಂಜೆ 4.45ರ ವೇಳೆಗೆ ಸುಮಾರು ಅರ್ಧ ತಾಸು ಮರಿಗಳೊಂದಿಗೆ ಚಿಣ್ಣಾಟ ಆಡುವ ಮೂಲಕ ಗಮನ ಸೆಳೆದಿದೆ.

ಶರಣರ ಆದರ್ಶದ ಬದುಕು ನಮ್ಮದಾಗಬೇಕು



ಮೈಸೂರು, ಜು. 29– ಶರಣರ ಆದರ್ಶದ ಬದುಕು ನಮ್ಮದಾಗಬೇಕು ಎಂದು ಸಾಹಿತಿ ನಗರ್ಲೆ ಶಿವಕುಮಾರ ಹೇಳಿದರು.

ಮೈಸೂರು ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಏರ್ಪಡಿಸಿದ್ದ 327ನೆಯ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಶರಣರ ವಿಚಾರಧಾರೆ ಕುರಿತು ಮಾತನಾಡುತ್ತಾ ತಿಳಿಸಿದರು.

12ನೆಯ ಶತಮಾನದ ಬಸವಾದಿ ಶರಣರನ್ನು ಕುರಿತು ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಷಡಕ್ಷರ ಕವಿ ಸೇರಿದಂತೆ ಮೊದಲಾದ ಕವಿಗಳು ಕಾವ್ಯವನ್ನು ರಚಿಸಿದ್ದಾರೆ. ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯ ಬೆಳಕಿಗೆ ಬರಲಿಲ್ಲ, 15ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲಕ್ಕೆ 101 ವಿರಕ್ತರು ಅಂದಿಗೆ ದೊರೆತ ವಚನಗಳನ್ನು ಪ್ರಕಟಪಡಿಸಿದರು. 16ನೆಯ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳ ಕಾಲದಲ್ಲಿ ವಚನ ಸಾಹಿತ್ಯದ ದ್ವಿತೀಯ ಘಟ್ಟ ಆರಂಭವಾಯಿತು. ಅದಾದ ನಂತರ 20ನೆಯ ಶತಮಾನದ ಆದಿಭಾಗದಲ್ಲಿ ಡಾ. ಫ.ಗು. ಹಳಕಟ್ಟಿಯವರು ಶಿವಾನುಭವ ಪತ್ರಿಕೆ ಮೂಲಕ ವಚನಗಳನ್ನು ಪ್ರಕಟಿಸಿದರು. 250ಕ್ಕೂ ಹೆಚ್ಚು ವಚನಕಾರರು 22,000ಕ್ಕಿಂತಲೂ ಹೆಚ್ಚಿನ ವಚನಗಳನ್ನು ರಚಿಸಿರುವುದನ್ನು ಹಾಗೂ ಇವೆಲ್ಲವುಗಳನ್ನು ಕನ್ನಡ ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಕನ್ನಡ ಸಾಹಿತ್ಯಕ್ಕೆ ವಚನದ ಸಾಹಿತ್ಯದ ಕೊಡುಗೆ ಅಪಾರ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತಿರುವುದು ವಚನ ಸಾಹಿತ್ಯದ ಬಳುವಳಿ ಎನ್ನಬಹುದು. ಕಾಯಕ ಮತ್ತು ದಾಸೋಹಕ್ಕೆ ಮಹತ್ವವನ್ನು ಕೊಟ್ಟ ಬಸವಾದಿ ಶರಣರು ನುಡಿದಂತೆ ನಡೆದು ತೋರಿಸಿದರು. ಮೋಳಿಗೆ ಮಾರಯ್ಯ, ಮಾದಾರ ಧೂಳಯ್ಯ, ಉರಿಲಿಂಗಪೆದ್ದಿ, ನಗೆಯ ಮಾರಿತಂದೆ, ಮೇದರ ಕೇತಯ್ಯ, ಮಡಿವಾಳ ಮಾಚಯ್ಯ ಹೀಗೆ ವಿವಿಧ ಶರಣರ ವಿಚಾರಗಳನ್ನು ತಿಳಿಸುತ್ತಾ, ಹಲವಾರು ವಚನಗಳನ್ನು ಉಲ್ಲೇಖಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ಬಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಕು. ಚೂಡಾಮಣಿ ಮತ್ತು ಶ್ರೀ ನಟರಾಜು ವಚನ ಗಾಯನವನ್ನು ನಡೆಸಿಕೊಟ್ಟರು. ಶ್ರೀಮತಿ ಎ.ಜಿ. ಭವಾನಿ ಹಾಗೂ ಎಂ. ಶಿವಪ್ರಸಾದ್ ಪ್ರಾಯೋಜಕತ್ವ ವಹಿಸಿದ್ದರು.

ಇಂಜಿನಿಯರಿಂಗ್ ಪ್ರಥಮ ವರ್ಷದ ಪಠ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆ; ಅದರ ಅನ್ವಯಗಳು ಅಳವಡಿಕೆ



ಮೈಸೂರು, ಜು. 29– ಇಂಜಿನಿಯರಿಂಗ್ ಶಿಕ್ಷಣವನ್ನು ಆಧುನೀಕರಣಗೊಳಿಸುವ ಮಹತ್ವಪೂರ್ಣ ಹೆಜ್ಜೆಯೊಂದರಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿ.ಟಿ.ಯು) ಇಂಜಿನಿಯರಿಂಗ್ ಪ್ರಥಮ ವರ್ಷದ ಪಠ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಅದರ ಅನ್ವಯಗಳ ಹೊಸ ವಿಷಯವನ್ನು ಪರಿಚಯಿಸಲಿದೆ ಎಂದು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ (ವಿವಿಸಿ) ಪ್ರಾಚಾರ್ಯರು ಹಾಗೂ ವಿಟಿಯು ಪಠ್ಯಕ್ರಮ ಪರಿಷ್ಕರಣೆ ಸಮಿತಿಯ ಅಧ್ಯಕ್ಷರೂ ಆದ ಡಾ. ಸದಾಶಿವಗೌಡ ತಿಳಿಸಿದ್ದಾರೆ.

ವಿದ್ಯಾವರ್ಧಕ ಕಾಲೇಜಿನ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ISTE ಮತ್ತು IEEE PELS ಬೆಂಗಳೂರು ಚಾಪ್ಟರ್ ಸಹಯೋಗದಲ್ಲಿ ವಿದ್ಯಾವರ್ಧಕ ಕಾಲೇಜಿನ ಬಿ.ಸಿ. ಲಿಂಗಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಐದು ದಿನಗಳ AI for All: Interdisciplinary Applications Across Engineering Domains ಬೋಧಕ ಪುನಶ್ಚೇತನ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಾ. ಗೌಡ ಅವರು ತಾಂತ್ರಿಕ ಅಭಿವೃದ್ಧಿಗೆ ಅನುಗುಣವಾಗಿ ಪಠ್ಯಕ್ರಮದ ನಿರಂತರ ಪರಿಷ್ಕರಣೆ ಅಗತ್ಯವಿದೆ ಎಂಬುದನ್ನು ಒತ್ತಿಹೇಳಿದರು. ಶಿಕ್ಷಣದ ದೈನಂದಿನ ತರಗತಿಗಳಲ್ಲಿ ಮೌಲ್ಯವರ್ಧನೆ ಇಲ್ಲದಿದ್ದರೆ ವಿದ್ಯಾರ್ಥಿಗಳು ನೇರವಾಗಿ ಹೇಳದೇ ಇರಬಹುದು, ಆದರೆ ಅವರು ತೋರಿಸುವ ಆಸಕ್ತಿ ಕೊರತೆಯಿಂದ ಅದು ಸ್ಪಷ್ಟವಾಗುತ್ತದೆ. ಬೋಧಕರು ತಮ್ಮ ಜ್ಞಾನವನ್ನು ನಿರಂತರವಾಗಿ ನವೀಕರಿಸಬೇಕು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಬೇಕು ಮತ್ತು AI ಉಪಕರಣಗಳನ್ನು ಉಪಯೋಗಿಸಿ ಬೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸಬೇಕು ಎಂದು ತಿಳಿಸಿದರು. ಅವರು ಬೋಧಕರಿಗೆ ಹೊಸ ತಂತ್ರಜ್ಞಾನಗಳನ್ನು ಕಲಿಯುವಲ್ಲಿ ಸ್ವಯಂಪ್ರೇರಿತರಾಗುವಂತೆ ಹಾಗೂ ವಿದ್ಯಾರ್ಥಿಗಳ ಅಕಾಡೆಮಿಕ್ ಬೆಳವಣಿಗೆಯಲ್ಲಿ ಪಾತ್ರವಹಿಸುವಂತೆ ಕೋರಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರೆಡ್ಬಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಡೇಟಾ ಎಂಜಿನಿಯರಿಂಗ್ ಉಪಾಧ್ಯಕ್ಷ ಮನುಜ್ ಕುಮಾರ್, ಕೃತಕ ಬುದ್ಧಿಮತ್ತೆಯ ಬೆಳವಣಿಗೆಯ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು. AI ಅಭಿವೃದ್ಧಿಗೆ ಬೇಕಾದ ಸಮಯ ಮತ್ತು ವೆಚ್ಚ ವರ್ಷಗಳ ಕಾಲ ಕಡಿಮೆಯಾಗಿದೆ. ಇಂದು ಉತ್ತಮ ಸೂಚನೆಗಳೊಂದಿಗೆ AI ಸಂಪೂರ್ಣ ಅನ್ವಯಗಳನ್ನು ರಚಿಸಬಲ್ಲದು. ಆದಾಗ್ಯೂ, ಮಾನವ ಪರಿಣತರ ಪಾತ್ರ ನಿಖರತೆಯುಳ್ಳ ಹಾಗೂ ಸಂದರ್ಭ ಪ್ರಜ್ಞೆಯುಳ್ಳ ಅನ್ವಯಕ್ಕಾಗಿ ಅತ್ಯವಶ್ಯಕವಾಗಿದೆ ಎಂದು ಅವರು ಹೇಳಿದರು.

ಈ ಐದು ದಿನಗಳ FDP ಶಿಬಿರವು ವಿವಿಧ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ AIಯ ಅರ್ಥಪೂರ್ಣ ಜ್ಞಾನ ಮತ್ತು ಅನುಕೂಲತೆಗಳನ್ನು ಉನ್ನತಮಟ್ಟದಲ್ಲಿ ಪರಿಚಯಿಸಿ, ಪರಸ್ಪರ ಶಾಖಾತ್ಮಕ ಅಧ್ಯಯನ ಹಾಗೂ ಸಂಶೋಧನೆಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ. ಈ ಕಾರ್ಯಕ್ರಮವನ್ನು ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಅಧ್ಯಕ್ಷ ಪ್ರೊ. ಗೋಪಾಲ ರೆಡ್ಡಿ ನಡೆಸಿದ್ದು, ಡಾ. ರಶ್ಮಿ ಎಸ್ ಅವರು ಸಂಯೋಜಕರಾಗಿದ್ದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಪ್ರಭಾವತಿ ಪಿ ಮತ್ತು ವಿವಿಸಿ ಉಪ ಪ್ರಾಚಾರ್ಯರು ಹಾಗೂ ಅಕಾಡೆಮಿಕ್ ಡೀನ್ ಶೋಭಾ ಶಂಕರ್ ಅವರು ಉಪಸ್ಥಿತರಿದ್ದರು.

ಮೈಸೂರು ಬೇಸಿಗೆ ರೇಸ್

10ನೇ ದಿನ, ಬುಧವಾರ, 30–7–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಗಿರಿನಗರ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಕೂರ್ಗ್ ಜನರಲ್ 2. ಮಿರಾಕಲ್ ಹನಿ 3. ವಂದನ್

II. ನೇತ್ರಾವತಿ ಪ್ಲೇಟ್ ಡಿII–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1 ಬೌಂಟಿಫುಲ್ ಬ್ಯೂಟಿ 2. ಡೇವಿಡ್ ಡಿಲೈಟ್ 3. ನೋಬಲ್ ಫರ್ ಶೂಟ್

III. ಬನ್ನೇರ್‌ಘಟ್ಟ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1 ಅಸ್ಟಾಪೊರ್ 2 ಮೆಬರಿ 3. ಜನ್ನತ್

IV. ನೇತ್ರಾವತಿ ಪ್ಲೇಟ್ ಡಿI–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಆಶೀರ್ವಾದ್ 2. ಶಿ ಈಸ್ ಅನ್ ಸ್ಟಾಪಬಲ್ 3. ನ್ಯಾಚುರಲ್ ಸ್ಪೀಡ್

V. ದಾವಣಗೆರೆ ಪ್ಲೇಟ್ ಡಿII–1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಮೂನ್ ಲೈಟ್ ಕ್ವೀನ್ 2. ಅಮೇಜಿಂಗ್ ಇಮ್‌ರಾ ರಿಫ್

VI. ಅಂಬಾವಿಲಾಸ್ ಪ್ಯಾಲೇಸ್ ಟ್ರೋಫಿ–1600 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಸತಿವರ್ 2. ರೈಸ್ ಎ ಬಕ್ 3. ಮಿಸ್ಟಿಕ್ ಬಾಂಡ್

VII. ಗುಂಡ್ಲಪೇಟ್ ಪ್ಲೇಟ್ –1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ವಂದ್ಯ ದೇವನ್ 2. ಕಾನ್‌ಸ್ಟೆಂಟ್ ವೆರಿಯಬಲ್ 3. ಡೆಕಾಕಾರ್ನ್

VIII. ದಾವಣಗೆರೆ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಒ ಮಂಚಾಲಿ 2. ಮ್ಯಾಜಿಕಲ್ ಬೇ 3. ನ್ಯಾಚೂರ್ ಲೈಟ್

ದಿನದ ಅತ್ಯುತ್ತಮ	ಬೌಂಟಿಫುಲ್ ಬ್ಯೂಟಿ
ಡಬ್ಬಲ್	ವಂದ್ಯ ದೇವನ್, ಒ ಮಂಚಾಲಿ
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	7, 8 ಮತ್ತು 9
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜೆಸಿ

ಮೈಸೂರು ಹಾರ್ಡಿಂಜ್ ವೃತ್ತದಲ್ಲಿ ಪ್ರಾಯೋಗಿಕವಾಗಿ ಸಿಗ್ನಲ್ ಆನ್

ಸಂಚಾರ ಪೊಲೀಸರಿಂದ ಸಾಧಕ-ಬಾಧಕ ಪರಿಶೀಲನೆ



ಮೈಸೂರಿನ ಹಾರ್ಡಿಂಜ್ ವೃತ್ತ

ಮೈಸೂರು,ಜು.29(ಪಿಎಂ)– ಮೈಸೂರಿನ ಹಾರ್ಡಿಂಜ್ (ಜಯಚಾಮರಾಜ ಒಡೆಯರ್ ವೃತ್ತ) ವೃತ್ತದಲ್ಲಿ ಈಗಾಗಲೇ ಇರುವ ಸಿಗ್ನಲ್ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮಂಗಳವಾರ ಆಪರೇಟ್ ಮಾಡಲಾಯಿತು. ಆ ಮೂಲಕ ಸಿಗ್ನಲ್ ಲೈಟ್ ಆನ್ ಮಾಡಿದ್ದಲ್ಲಿ ಇಲ್ಲಿನ ಸಂಚಾರ ವ್ಯವಸ್ಥೆ ಸಂಬಂಧ ಉಂಟಾಗುವ ಸಾಧಕ–ಬಾಧಕಗಳನ್ನು ಪರಿಶೀಲಿಸಲಾಯಿತು.

ನಗರದ ಹೃದಯ ಭಾಗದಲ್ಲಿರುವ ಹಾರ್ಡಿಂಜ್ ವೃತ್ತವು ಪ್ರತಿನಿತ್ಯ ಬೆಳಗ್ಗೆಯಿಂದ ರಾತ್ರಿಯವರೆಗೆ ವಾಹನ ದಟ್ಟಣೆ ಹೊಂದಿರುವ ಸ್ಥಳವಾಗಿದೆ. ನಗರಕ್ಕೆ ಪ್ರವೇಶ ಕಲ್ಪಿಸುವ ಪ್ರಮುಖ ವೃತ್ತಗಳಲ್ಲಿ ಇದೂ ಒಂದಾಗಿದ್ದು, ಇಲ್ಲಿ ಆರು ಪ್ರಮುಖ ರಸ್ತೆಗಳು ಸಂದಿಸುವ ಮೂಲಕ ನಗರಕ್ಕೆ ಪ್ರವೇಶ ಕಲ್ಪಿಸಲಿವೆ.

ಆಲ್ಬರ್ಟ್ ವಿಕ್ಟರ್ ರಸ್ತೆ, ಬೆಂಗಳೂರು–ನೀಲಗಿರಿ ರಸ್ತೆ, ಮಿರ್ಜಾ ರಸ್ತೆ, ಲೋಕರಂಜನ್ ಮಹಲ್ ರಸ್ತೆ ಸೇರಿದಂತೆ ಆರು ರಸ್ತೆಗಳಲ್ಲಿಯೂ ಪ್ರತಿನಿತ್ಯ ವಾಹನ ಸಂಚಾರ ದಟ್ಟಣೆ ಇಲ್ಲಿ ಕಂಡುಬರುತ್ತಿದೆ. ಅರಮನೆ ಮತ್ತು ನಗರ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಆಲ್ಬರ್ಟ್ ವಿಕ್ಟರ್ ರಸ್ತೆ, ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಪ್ರತಿನಿತ್ಯ ವಾಹನ ದಟ್ಟಣೆ ಸರ್ವೇ ಸಾಮಾನ್ಯ.

ವಾಹನಗಳ ಅತಿ ವೇಗ ನಿಯಂತ್ರಿಸಿ ಅಪಘಾತ ತಡೆಗಟ್ಟಲು ವೃತ್ತದ ಸುತ್ತಲು ಬ್ಯಾರಿಕೇಡ್ ಅಳವಡಿಸಲಾಗಿದೆ. ವಾರಾಂತ್ಯದಲ್ಲಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಅರಮನೆ, ಮೃಗಾಲಯ ಸೇರಿದಂತೆ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಈ ದಿನಗಳಲ್ಲಿ ವಾಹನ ದಟ್ಟಣೆ ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ಆಗಲಿದೆ. ದಸರಾ ಮಹೋತ್ಸವದ ದಿನಗಳಲ್ಲಿ ವಾಹನ ಹಾಗೂ ಜನದಟ್ಟಣೆ ಅತೀ ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿರುವುದು ಸಾಮಾನ್ಯ.

ಪ್ರಸ್ತುತ ವೃತ್ತದಲ್ಲಿ ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸುವ ಮೂಲಕ ಸುಗಮ ಸಂಚಾರಕ್ಕೆ ಅನುವು ಮಾಡುತ್ತಿದ್ದಾರೆ. ಇದರ ಜೊತೆಗೆ ಸಿಗ್ನಲ್ ದೀಪಗಳನ್ನು ಆನ್ ಮಾಡಿ, ಎಲ್ಲಾ ದಿಕ್ಕುಗಳಿಗೂ ಸಂಚರಿಸಲು ಇಂತಿಷ್ಟು ಎಂದು ಸೆಕೆಂಡ್‌ಗಳ ನಿಗದಿ ಮಾಡುವುದು ಸೇರಿದಂತೆ ಒಟ್ಟಾರೆ ಸಿಗ್ನಲ್ ದೀಪಗಳನ್ನು ಆಪರೇಟ್ ಮಾಡುವ ಮೂಲಕ ಸುಗಮ ಸಂಚಾರದ ಸಾಧಕ ಬಾಧಕಗಳನ್ನು ಪರಿಶೀಲಿಸಲಾಗಿದೆ.

ಇಂದು ಸಿಗ್ನಲ್ ದೀಪಗಳನ್ನು ಆನ್ ಮಾಡಿ ಯಾವ ರೀತಿ ವಾಹನ ಸಂಚಾರ ಇರಲಿದೆ ಎಂದು ಅವಲೋಕಿಸಲಾಗಿದೆ ಸಿಗ್ನಲ್ ಲೈಟ್ ಆನ್ ಮಾಡಿದರೆ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗಲಿದೆಯೇ ಅಥವಾ ಇದರಿಂದ ಅನುಕೂಲವಾಗಲಿದೆಯೇ ಎಂದು ಅವಲೋಕಿಸಲಾಗಿದೆ. 6 ರಸ್ತೆಗಳಿಂದ ವೃತ್ತದ ಮೂಲಕ ಹಾದು ಹೋಗುವ ವಾಹನ ಸವಾರರು ಮಾರ್ಗ ಬದಲಾಯಿಸುವ ವೇಳೆ ಪರಸ್ಪರ ಅಡ್ಡಕ್ಕೆ ಬರುವ ಮೂಲಕ ಸಂಚಾರ ದಟ್ಟಣೆಗೆ ಎಡೆ ಮಾಡುವುದು ಆಗಾಗ್ಗೆ ಆಗುತ್ತಿದ್ದು, ಸುಗಮ ಸಂಚಾರಕ್ಕೆ ಇಲ್ಲಿ ಅವಕಾಶ ಕಲ್ಪಿಸಲು ಮೈಸೂರು ನಗರ ಸಂಚಾರ ಪೊಲೀಸರು ಮುಂದಾಗಿದ್ದಾರೆ.


ದರ್ಶನಾಗೆ ಪಿಹೆಚ್.ಡಿ



ಮೈಸೂರು, ಜು.29– ತುಮಕೂರು ಜಿಲ್ಲೆಯ ಗುಬ್ಬಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಟಿ.ಎನ್.ದರ್ಶನಾ ಅವರು ಮಂಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಬೆಂಗಳೂರಿನ ರಾಜಾಜಿನಗರದ ಆರ್‌ಪಿಎ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಎಚ್.ಎಂ.ತೇಜಸ್ವಿನಿ ಅವರ ಮಾರ್ಗದರ್ಶನದಲ್ಲಿ ದರ್ಶನಾ ಅವರು ತುಮಕೂರು ಜಿಲ್ಲೆಯ ಗ್ರಾಮೀಣ ಜನರ ಆರ್ಥಿಕ ಸಬಲೀಕರಣ– ಒಂದು ಅಧ್ಯಯನ ಮಹಾ ಪ್ರಬಂಧವನ್ನು ಮಂಡಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಶ್ರೀ ಜಯರಾಮ್

ಮಾಲೀಕರು, ಶ್ರೀ ರಾಘವೇಂದ್ರ ಬಾರ್ , ಇಲವಾಲ

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಮಜ್ಜಿಗೆಪುರ ಗ್ರಾಮದ ಶ್ರೀ ಜಯರಾಂ ರವರು ದಿನಾಂಕ 29.07.2025ರ ಮಂಗಳವಾರ ಸಂಜೆ ನಿಧನರಾದರು. ಇವರ ಅಂತ್ಯಕ್ರಿಯೆ ದಿ. 30.07.2025 ರ ಬುಧವಾರ ಮಧ್ಯಾಹ್ನ 12.00 ಗಂಟೆಗೆ ಮಜ್ಜಿಗೆಪುರ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು:
ಪತ್ನಿ: ಜಯಲಕ್ಷ್ಮಿ, ಮಗ, ಸೊಸೆ, ಹೆಣ್ಣುಮಕ್ಕಳು ಅಳಿಯಂದಿರು ಹಾಗೂ ಮೊಮ್ಮಕ್ಕಳು, ಕುಟುಂಬ ವರ್ಗ ಹಾಗೂ ಗ್ರಾಮಸ್ಥರು, ಮಜ್ಜಿಗೆಪುರ,